
# ಕೋಲಾರ
## ನಾಡೂ-ಕತೆಗಳೂ

ಮಾ. ವೆಂಕಟಕೃಷ್ಣಪ್ಪ

ಸತ್ಯಶೋಧನ ಪ್ರಕಟನ ಮಂದಿರ
ಬೆಂಗಳೂರು ನಗರ
೧೯೩೬

UNIVERSAL
LIBRARY
OU_200388
UNIVERSAL
LIBRARY



ಮೈಸೂರಿನ ಶ್ರೀಮನ್ಮಹಾರಾಜರವರು

# ಕೋಲಾರ
# ನಾಡೂ-ಕತೆಗಳೂ

ಮು. ವೆಂಕಟಕೃಷ್ಣಪ್ಪ

ಸತ್ಯಶೋಧನ ಪ್ರಕಟನ ಮಂದಿರ
ಬೆಂಗಳೂರು ನಗರ
೧೯೩೬

ಈ ಗ್ರಂಥದ ಸರ್ವ ಸ್ವಾಮ್ಯವು ಗ್ರಂಥಕರ್ತರಿಗೇ ಸೇರಿದೆ

ಇದು ಗ್ರಂಥಕರ್ತರಿಗಾಗಿ ಸತ್ಯಶೋಧನ ಪ್ರಕಟನ
ಮಂದಿರದವರಿಂದ ಪ್ರಕಾಶಿಸಲ್ಪಟ್ಟಿದೆ.

ಬೆಲೆ : ಎಂಟು ಆಣೆ

# ಎರಡು ಮಾತು

ಕೋಲಾರ ನಾಡಿನ ಹೆಚ್ಚು ಪರಿಚಯವಿಲ್ಲದ ಅಣ್ಣತಮ್ಮಂದಿರುಗಳ ಉಪಯೋಗಕ್ಕೆಂದು ಈ ಸಣ್ಣ ಪುಸ್ತಕವು ಸಿದ್ಧವಾಗಿದೆ. ಇದರ ಮೂಲಕ ಈ ನಾಡಿನ ಲಘುಪರಿಚಯವಾಗಿ, ಅದರಿಂದ ಹಿಂದು–ಇಂದು–ಮುಂದಿನ ವಿಷಯಗಳಲ್ಲಿ ಅಭಿಮಾನ, ಶ್ರದ್ಧೆ, ಸಾಹಸಗಳು ನಾಡಿಗರಲ್ಲಿ ಪ್ರಜ್ವಲಿಸಿ, ಲೇಖಕನು ಧನ್ಯತೆ ಹೊಂದುವನೆಂಬ ಆಸೆಯಿದೆ.


ಈ ಪ್ರಕಟಣೆಗಾಗಿ ಸಹಾಯ ಮಾಡಿರುವ ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನವರಿಗೂ, ಪ್ರೋತ್ಸಾಹಿಸಿರುವ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಶ್ರೀಯುತ ಕೆ. ಚೆಂಗಲರಾಯ ರೆಡ್ಡಿಯವರೂ ಮತ್ತು ಡಿಸ್ಟ್ರಿಕ್ಟ್ ಎಜ್ಯುಕೇಷನ್ ಆಫೀಸರ್ ಶ್ರೀಯುತ ಎಂ. ಎ. ನಾರಾಯಣ ಅಯ್ಯಂಗಾರ್ಯರವರಿಗೂ, ಮುದ್ರಣ ಮತ್ತು ಪ್ರಕಟಣ ಕಾರ್ಯದಲ್ಲಿ ನೆರವಾದ ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದವರಿಗೂ, ಮತ್ತು ಹಲವು ಪಡಿಯಚ್ಚುಗಳನ್ನು ಆದರದಿಂದ ಕೊಟ್ಟಿರುವ ಶ್ರೀಯುತ ಎಸ್. ವಿ. ಕೃಷ್ಣಮೂರ್ತಿರಾಯರವರು, ಬೆಂಗಳೂರಿನ ಸ್ಕೌಟ್ ಹೆಡ್ ಕ್ವಾರ್ಟರ್ಸ್ ಅಧಿಕಾರಿಗಳು ಮತ್ತು ಬೆಂಗಳೂರು ಪ್ರೆಸ್—ಇವರೆಲ್ಲರಿಗೂ ಈ ಲೇಖಕನು ಕೃತಜ್ಞನು.

ಕೋಲಾರ,<br>
೩೧–೫–೧೯೩೭.

**ಮು. ವೆಂಕಟಕೃಷ್ಣಪ್ಪ,**<br>
ಶಿಡ್ಲಘಟ್ಟ.

# ವಿಷಯ ಸೂಚಿಕೆ


| | | ಪುಟ |
|---|---|---|
| ೧. | ಕೋಲಾರದ ನೆಲವೂ ನೀರೂ | ೧ |
| ೨. | ಕೋಲಾರದ ಜನವೂ ಜನಪದವೂ | ೪ |
| ೩. | ಕೋಲಾರದ ಕೈವಾಡ | ೯ |
| ೪. | ಕೋಲಾರದ ಹೆಸರು | ೧೪ |
| ೫. | ಮುಚುಕುಂದನ ಕತೆ (ತೇರುಹಳ್ಳಿ — ಕೋಲಾರ) | ೧೬ |
| ೬. | ನೀತಿ (ಕೋಲಾರ) | ೧೯ |
| ೭. | ಕ್ಷೀರಸಾಗರ (ಗುಡಿಬಂಡೆ) | ೨೧ |
| ೮. | ವಿದುರಾಶ್ವತ್ಥ (ಗೋರಿಬಿದನೂರು) | ೨೩ |
| ೯. | ಭೀಮನೂ ಬಕನೂ (ಕೈವಾರ — ಚಿಂತಾಮಣಿ) | ೨೬ |
| ೧೦. | ನಂದಿ (ಚಿಕ್ಕಬಳ್ಳಾಪುರ) | ೨೮ |
| ೧೧. | ದಾಸಯ್ಯನ ಶಂಖು (ಚಿಕ್ಕಬಳ್ಳಾಪುರ) | ೩೧ |
| ೧೨. | ಬೈಚೇಗೌಡ (ಚಿಕ್ಕಬಳ್ಳಾಪುರ) | ೩೩ |
| ೧೩. | ಅಗ್ಗಿ ತಿಮ್ಮನಾಯಕ (ಗುಮ್ಮನಾಯಕನಪಾಳೆಯ — ಬಾಗೇಪಲ್ಲಿ) | ೩೬ |
| ೧೪. | ಇಮ್ಮಡಿ ಕದಿರೆಪ್ಪನಾಯಕ | ೩೭ |
| ೧೫. | ಬೇತಮಂಗಲದ ಕೆರೆ (ಬೌರಿಂಗ್‌ಪೇಟೆ) | ೩೯ |
| ೧೬. | ಹೈದರ್ ಆಲಿ (ಬೂದಿಕೋಟೆ — ಬೌರಿಂಗ್‌ಪೇಟೆ) | ೪೨ |
| ೧೭. | ಬಂಗಾರದ ಗಣಿಗಳು (ಬೌರಿಂಗ್‌ಪೇಟೆ) | ೪೪ |
| ೧೮. | ಮಾಲೂರು | ೪೭ |
| ೧೯. | ಲವಕುಶರು (ಆವನಿ — ಮುಳುಬಾಗಲು) | ೪೯ |
| ೨೦. | ಶ್ರೀಪಾದರಾಯರು (ಮುಳುಬಾಗಲು) | ೫೧ |
| ೨೧. | ಹನುಮೇಲಿಂಗ (ಬಸೆಟ್ಟಿಹಳ್ಳಿ — ಶಿಡ್ಲಘಟ್ಟ) | ೫೪ |
| ೨೨. | ಹಲಸೂರಮ್ಮ (ಅಬಲೂಡು — ಶಿಡ್ಲಘಟ್ಟ) | ೫೫ |
| ೨೩. | ಚಿಕ್ಕರಾಯರು (ಸುಗಟೂರು — ಶಿಡ್ಲಘಟ್ಟ) | ೫೮ |
| ೨೪. | ವೀರರ ತಂಡ (ಶ್ರೀನಿವಾಸಪುರ) | ೬೦ |




DRAWN BY M.V.H. SIDLAGHATTA. 9.1935.

ಕೋಲಾರ ನಾಡು

# ಕೋಲಾರ
# ನಾಡೂ–ಕತೆಗಳೂ

## ೧. ಕೋಲಾರದ ನೆಲವೂ ನೀರೂ

ಕೋಲಾರ ನಾಡು (ಡಿಸ್ಟ್ರಿಕ್ಟ್) ಮೈಸೂರು ಸೀಮೆಯ ಪೂರ್ವ ಭಾಗವಾಗಿದೆ. ಇದರ ವಿಸ್ತಾರ ೩,೧೯೧ ಚದರ ಮೈಲಿಗಳು. ಈ ನಾಡಿನ ಪಶ್ಚಿಮಕ್ಕೆ ತುಮಕೂರು, ಬೆಂಗಳೂರು ನಾಡುಗಳೂ, ಉಳಿದ ಕಡೆಗೆ ಮದರಾಸು ಆಧಿಪತ್ಯದ ನಾಡುಗಳೂ ಇವೆ. ಉತ್ತರಕ್ಕೆ ಅನಂತಪುರ, ಪೂರ್ವಕ್ಕೆ ಕಡಪ ಮತ್ತು ಉತ್ತರ ಆರ್ಕಾಟು ಮತ್ತು ದಕ್ಷಿಣಕ್ಕೆ ಸೇಲಂ ನಾಡುಗಳು ಇವೆ. ಕೋಲಾರದ ನಾಡು ಪೂರ್ವ ಘಟ್ಟಗಳ ಸಮೀಪದಲ್ಲಿಯೇ ಇದ್ದು ಘಟ್ಟಗಳ ಪೂರ್ವದ ಪಕ್ಕದ ನೆಲಕ್ಕಿಂತ ಎತ್ತರವಾಗಿದೆ.

ಈ ನಾಡಿನ ಬೆಟ್ಟಗುಡ್ಡಗಳ ಸಾಲುಗಳು ಉತ್ತರ ದಕ್ಷಿಣವಾಗಿವೆ. ಪಶ್ಚಿಮದ ಕಡೆ ನಂದಿಯ ಬೆಟ್ಟದ ಸಾಲಿನಲ್ಲಿ ನಂದಿಯ ದುರ್ಗವು ೪,೮೫೧ ಅಡಿ ಎತ್ತರವಾಗಿದೆ. ಮಧ್ಯದ ಕಡೆ ದೊಂಗಲಕೊಂಡ ಸಾಲಿನಲ್ಲಿ ಅತಿ ಉತ್ತರದಲ್ಲಿ ಇಟ್ಟಂಗಿ ದುರ್ಗವು ಎತ್ತರವಾಗಿದೆ. ನಾಡಿನ ಮಧ್ಯೆ ಅಂಬಾಜಿ ದುರ್ಗವು ೪,೩೯೯ ಅಡಿ ಎತ್ತರವೂ, ದಕ್ಷಿಣದಲ್ಲಿ ಕೋಲಾರ ಬೆಟ್ಟವು ೪,೦೨೬ ಅಡಿ ಎತ್ತರವೂ, ಪೂರ್ವದಲ್ಲಿ ಕುರುಡುಮಲೆಯು ೩,೩೧೨ ಅಡಿ ಎತ್ತರವೂ ಇದ್ದು ನಾಡಿನ ಪಂಚಕಲಶಗಳಂತಿವೆ.

ನಂದಿಯ ಬೆಟ್ಟದ ಸಾಲಿನಲ್ಲಿ ಏಳು ನದಿಗಳು ಉಗಮಿಸಿ ಎಲ್ಲ ದಿಕ್ಕಿಗೂ ಹರಿಯುತ್ತವೆ. ಇವುಗಳಲ್ಲಿ ನಂದಿಯ ಪಶ್ಚಿಮದ ಕಡೆ ಹುಟ್ಟುವ ಉತ್ತರ ಪಿನಾಕಿನೀ ನದಿಯು ಉತ್ತರಕ್ಕೆ ಹರಿದು ಪೂರ್ವಕ್ಕೆ

ತಿರುಗಿ ನೆಲ್ಲೂರಿನ ಆಚೆ ಬಂಗಾಳಾ ಕೊಲ್ಲಿಯನ್ನು ಸೇರುತ್ತದೆ. ಇದಕ್ಕೆ ಈ ನಾಡಿನ ಚಿತ್ರಾವತೀ ಮತ್ತು ಪಾಪಘ್ನೀ ನದಿಗಳು ಉಪನದಿಗಳಾಗಿವೆ. ಕುಶಾವತೀ ಎಂಬ ಹೆಸರಿನ ಒಂದು ಹೊಳೆಯು ಚಿತ್ರಾವತಿಗೂ ಪಾಪಘ್ನಿಗೂ ಹೋಗಿ ಸೇರುತ್ತದೆ.

ನಂದಿಯ ಪೂರ್ವ ಭಾಗದಲ್ಲಿ ಹುಟ್ಟುವ ಪಾಲಾರ್ ಅಥವಾ ಕ್ಷೀರ ನದಿಯು ಪೂರ್ವಕ್ಕೆ ಹರಿದು ಕಂಚಿಯ ಆಚೆ ಬಂಗಾಳಾ ಕೊಲ್ಲಿಗೆ ಬೀಳುತ್ತದೆ. ಇದಕ್ಕೆ ಈ ನಾಡಿನಲ್ಲಿ ಎರಡು ಹೊಳೆಗಳು ಸೇರುತ್ತವೆ.

ನಂದಿಯ ಪೂರ್ವಕ್ಕೇ ಹುಟ್ಟುವ ದಕ್ಷಿಣ ಪಿನಾಕಿನೀ ನದಿಗೆ ತಮಿಳಿನಲ್ಲಿ ಪೊನ್ನೇರ್ ಎಂದೂ ಹೆಸರುಂಟು. ಇದು ದಕ್ಷಿಣಕ್ಕೆ ಹರಿದು ಪೂರ್ವಕ್ಕೆ ತಿರುಗಿ ಕಡಲೂರಿನ ಬಳಿ ಬಂಗಾಳಾ ಕೊಲ್ಲಿಗೆ ಬೀಳುತ್ತದೆ. ಇದಕ್ಕೆ ಈ ನಾಡಿನಲ್ಲಿ ಹುಟ್ಟುವ ವೃಷಭಾವತಿ ಎಂಬ ಹೊಳೆಯು ಉಪನದಿಯಾಗಿದೆ. ಮಾರ್ಕಾಂಡ ಎಂಬ ಹೊಳೆಯು ವೃಷಭಾವತಿಯನ್ನು ಸೇರುವುದು.

ನಂದಿಯ ಪಶ್ಚಿಮಕ್ಕೆ ಹುಟ್ಟಿ ದಕ್ಷಿಣಕ್ಕೆ ಹರಿಯುವ ಅರ್ಕಾವತಿಯು ಕಾವೇರೀ ನದಿಗೆ ಉಪನದಿಯಾಗಿರುವುದು.

ಈ ನದಿಗಳ ನೀರನ್ನೆಲ್ಲಾ ವ್ಯವಸಾಯಕ್ಕೆ ಅಣೆ ಕಟ್ಟಿ, ಕಾಲುವೆ, ತಲಪರಿಗೆಗಳ ಮೂಲಕವೂ, ಅಡ್ಡ ಕಟ್ಟಿ ಹಾಕಿ ಕೆರೆಗಳನ್ನು ಮಾಡುವುದರ ಮೂಲಕವೂ ಉಪಯೋಗಿಸುವರು. ಈ ನಾಡಿನಲ್ಲಿ ಒಟ್ಟು ೩,೯೪೪ ಕೆರೆಗಳು ಇವೆ. ಇವುಗಳಲ್ಲಿ ಭದ್ರನಕೆರೆ, ಶ್ರೀನಿವಾಸಸಾಗರ, ಭೈರಸಾಗರ, ಪಾಟಿಡಹೊಸಪಳ್ಳಿ ಕೆರೆ, ರಾಮಸಾಗರ, ರಾಮಸಮುದ್ರ, ಸೋಮಾಂಬುಧಿ ಎಂಬ ಕೆರೆಗಳು ಹೆಚ್ಚು ವಿಶಾಲವಾಗಿವೆ. ಆದ್ದರಿಂದ ಈ ನಾಡನ್ನು ಕೆರೆಗಳ ನಾಡು ಎಂದು ಕರೆಯಬಹುದು. ವ್ಯವಸಾಯಕ್ಕೂ ಕುಡಿಯುವ ನೀರಿಗೂ ಅನೇಕ ಬಾವಿಗಳೂ ಇವೆ.

ಬೌರಿಂಗ್‌ಪೇಟೆಯ ಬಳಿ ಚಿನ್ನವೂ ಅದರೊಂದಿಗೆ ಸ್ವಲ್ಪ ಬೆಳ್ಳಿಯೂ ಗಣಿಗಳಲ್ಲಿ ದೊರೆಯುತ್ತವೆ. ಬಾಗೇಪಲ್ಲಿ ಮತ್ತು ಶ್ರೀನಿವಾಸಪುರಗಳ ಎಡೆಯಲ್ಲಿ ಮೊದಲು ಕಬ್ಬಿಣವನ್ನು ಅಲ್ಪವಾಗಿ ತೆಗೆಯುತ್ತಿದ್ದರು.

ಸೀಸದಕಡ್ಡಿಗೆ ಉಪಯೋಗಿಸುವ ಗ್ರಾಫೈಟ್ ಎಂಬುದೂ, ಹೆಂಚುಗಳನ್ನು ಮಾಡಲು ಬಳಸುವ ಕೇಯೊಲಿನ್ ಎಂಬ ಮಣ್ಣೂ ಸ್ವಲ್ಪ ಸ್ವಲ್ಪ ದೊರೆಯುತ್ತವೆ. ಮಧ್ಯಪ್ರದೇಶದಲ್ಲಿ ಜಟ್ಟು ಎಂಬ ಉತ್ಕೃಷ್ಟವಾದ ಗಟ್ಟಿಮಣ್ಣೂ ಅದರ ತಳಗೆ ಸುದ್ದೆಯೂ ಹೇರಳವಾಗಿವೆ.

ಈ ನಾಡಿನ ಉತ್ತರ ಮತ್ತು ಈಶಾನ್ಯ ಭಾಗಗಳನ್ನು ಕಲ್ಲುಸೀಮೆ ಎಂದೂ, ದಕ್ಷಿಣ ಮತ್ತು ಆಗ್ನೇಯ ಭಾಗಗಳನ್ನು ಕೆಂಪು ಅಥವಾ ಬಯಲು ಸೀಮೆ ಎಂದೂ ಕರೆಯುವ ರೂಢಿಯುಂಟು.

ಆಗಸ್ಟ್ ಮತ್ತು ಸೆಪ್ಟೆಂಬರ್‌ಗಳಲ್ಲಿ ಮಳೆಯೂ, ಡಿಸೆಂಬರ್ ಮತ್ತು ಜನವರಿಗಳಲ್ಲಿ ಚಳಿಯೂ, ಏಪ್ರಿಲ್ ಮತ್ತು ಮೇಗಳಲ್ಲಿ ಸೆಕೆಯೂ, ಜೂನ್ ಮತ್ತು ಜುಲೈಗಳಲ್ಲಿ ಗಾಳಿಯೂ ಎಂದಿಗಿಂತ ಹೆಚ್ಚಾಗಿರುತ್ತವೆ.

೧೯೩೧ನೇ ಇಸವಿಯ ಜನಗಣತಿಯ ಪ್ರಕಾರ ಈ ನಾಡಿನಲ್ಲಿ ೮,೪೫,೯೪೭ ಜನರಿದ್ದರು. ಇಲ್ಲಿನ ಜನಸಾಂದ್ರತೆ ಚದರ ಮೈಲಿಗೆ ೨೬೬. ಇವರಲ್ಲಿ ನೂರಕ್ಕೆ ೯೦ಕ್ಕೆ ಮೀರಿ ಹಿಂದೂಗಳೂ, ಏಳು ಮಂದಿ ಮುಸಲ್ಮಾನರೂ, ಉಳಿದವರು ಇತರ ಮತಗಳವರೂ ಆಗಿದ್ದಾರೆ. ಇವರಲ್ಲಿ ಸುಮಾರು ೧,೮೬,೦೦೦ ಮಂದಿ ಒಕ್ಕಲಿಗರೂ, ಸುಮಾರು ೧,೩೭,೦೦೦ ಮಂದಿ ಹೊಲೆಯರೂ ಇರುವರು. ಆದುದರಿಂದ ವ್ಯವಸಾಯವೇ ಈ ನಾಡಿನ ಹೆಚ್ಚು ಮಂದಿಯ ಜೀವನಾಧಾರವಾಗಿದೆ.

ಕುರಿ, ಸೀಮೆ ಕೋಳಿ, ರೇಷ್ಮೆ ಹುಳುಗಳನ್ನು ಸಾಕುವುದು ಕೆಲವರ ಉದ್ಯೋಗಗಳು.

ಶಿವಾರಪಟ್ಟಣದಲ್ಲಿ ಈಗಲೂ ಕಲ್ಲಿನ ವಿಗ್ರಹಗಳನ್ನು ಕೆತ್ತುವರು.

ಈ ನಾಡಿನಿಂದ ವರ್ಷಕ್ಕೆ ಸಾಧಾರಣವಾಗಿ ಮೂರು ಕೋಟಿ ರೂಪಾಯಿಗಳ ಬಂಗಾರವು ಇಂಗ್ಲೆಂಡಿಗೆ ಹೋಗುವುದು. ರಾಗಿ, ಬೆಲ್ಲ, ಸಕ್ಕರೆ, ತೊಗಲು, ಬೇಳೆ ಮತ್ತು ಹುಣಿಸೆಹಣ್ಣು ವಿಶೇಷವಾಗಿ ಇತರ ಕಡೆಗಳಿಗೆ ರಫ್ತಾಗುವುವು. ಇತರ ಕಡೆಗಳಿಂದ ಅಕ್ಕಿ, ಎಣ್ಣೆ, ಅಡಿಕೆ, ಚಿನ್ನ, ರೇಷ್ಮೆಯ ಮತ್ತು ಇತರ ಬಟ್ಟೆಗಳು—ಇವುಗಳನ್ನು

ಹೆಚ್ಚಾಗಿ ತರಿಸಿಕೊಳ್ಳುವರು. ಚಿಂತಾಮಣಿ ಸಂತೆಯು ಸುತ್ತು ಮುತ್ತಲಿಗೆಲ್ಲಾ ದೊಡ್ಡದು. ಸಂದಿ, ಆವಸಿ, ವಾಸರಾಶಿ ಜಾತ್ರೆಗಳಲ್ಲಿ ದನಗಳು ವಿಶೇಷವಾಗಿ ಮಾರಾಟಕ್ಕೆ ಬರುತ್ತವೆ.

ಈ ನಾಡಿನಲ್ಲಿ ಸುಮಾರು ಆರು ನೂರು ಮೈಲಿ ಗಾಡಿ ರಸ್ತೆ ಇರುವುದು. ಬೆಂಗಳೂರು ಮದರಾಸು ರೈಲು ಮಾಲೂರು ಬೌರಿಂಗ್ ಪೇಟೆಗಳ ಮಾರ್ಗವಾಗಿಯೂ, ಬೆಂಗಳೂರು ಗುಂತಕಲ್ಲು ರೈಲು ಗೌರಿ ಬಿದನೂರಿನ ಮಾರ್ಗವಾಗಿಯೂ, ಬೆಂಗಳೂರು ಬೌರಿಂಗ್ ಪೇಟೆಯ ರೈಲು ಚಿಕ್ಕಬಳ್ಳಾಪುರ ಚಿಂತಾಮಣಿ ಕೋಲಾರಗಳ ಮಾರ್ಗವಾಗಿಯೂ ಇರುವುವಲ್ಲದೆ, ಬೌರಿಂಗ್ ಪೇಟೆಯಿಂದ ಮಾರಿಕುಪ್ಪದವರೆಗೆ ಗಣಿಗಳ ರೈಲೂ ಇರುವುದು.

ಈಚೆಗೆ ವಿದ್ಯುಚ್ಛಕ್ತಿಯು ದೀಪಗಳಿಗೂ, ವ್ಯವಸಾಯಕ್ಕೂ, ಕೈಗಾರಿಕೆಗೂ ವಿಶೇಷವಾಗಿ ಉಪಯೋಗಿಸಲ್ಪಡುತ್ತಿದೆ. ವರ್ಷ ವರ್ಷವೂ ಇದು ಹೆಚ್ಚುತ್ತಿರುವುದು.

ಆಡಳಿತದ ಸೌಕರ್ಯಕ್ಕಾಗಿ ಈ ನಾಡು ೧೦ ತಾಲೂಕುಗಳಾಗಿಯೂ, ಒಂದು ಸಬ್-ತಾಲೂಕಾಗಿಯೂ ವಿಭಾಗಿಸಲ್ಪಟ್ಟಿರುವುದು. ಕೋಲಾರ, ಮುಳುಬಾಗಲು, ಮಾಲೂರು, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ, ಗೌರಿ ಬಿದನೂರು, ಬೌರಿಂಗ್‌ಪೇಟೆ ಇವು ತಾಲೂಕುಗಳು. ಗುಡಿಬಂಡೆಯೇ ಸಬ್-ತಾಲೂಕು. ಈ ನಾಡಿನಲ್ಲಿ ಒಟ್ಟು ೨,೭೫೧ ಹಳ್ಳಿಗಳಿವೆ. ಇವುಗಳ ಪೈಕಿ ೮೮ ಹಳ್ಳಿಗಳು ಚಿನ್ನದ ಗಣಿಗಳಿರುವ ಪ್ರದೇಶದಲ್ಲಿವೆ.

---

## ೨. ಕೋಲಾರದ ಜನವೂ ಜನಪದವೂ

ಕೋಲಾರದ ನಾಡು ಆಡಳಿತದ ಅನುಕೂಲಕ್ಕಾಗಿ ಈಗ ಹನ್ನೊಂದು ಭಾಗಗಳಾಗಿರುವುದಷ್ಟೆ. ಅತಿ ಪುರಾತನ ಕಾಲದಲ್ಲಿ ಈ ನಾಡೆಲ್ಲವೂ ಮಹಾದಂಡಕಾರಣ್ಯದ ಒಂದು ಭಾಗವಾಗಿದ್ದಿತು.

ಕುಂದಾರಣ್ಯವೆಂಬ ಆದರ ಒಂದು ಉಪಭಾಗವೂ ಈ ನೆಲದ ಕೆಲದಲ್ಲಿಯೇ ಇದ್ದಿತೆಂದೂ ಆಗ ಇಲ್ಲಿ ವಾಲ್ಮೀಕಿ, ಗೌತಮ, ಕೂಷ್ಮಾಂಡ, ಕೌಂಡಿನ್ಯ, ಶಾಕ ಎಂಬ ಋಷಿಗಳೂ, ಭಸ್ಮಾಸುರ, ಬಕಾಸುರ ಎಂಬ ರಾಕ್ಷಸರೂ ವಾಸಮಾಡುತ್ತಿದ್ದರೆಂದೂ ಪ್ರತೀತಿಯುಂಟು.

ಶ್ರೀರಾಮ, ಪಾಂಡವರು, ಮುಚುಕುಂದ, ಪರಶುರಾಮ, ವಿದುರ, ಘಟೋತ್ಕಚ ಮುಂತಾದ ಮಹಾಕಾವ್ಯಗಳಲ್ಲಿ ಉಕ್ತರಾದ ವ್ಯಕ್ತಿಗಳು ಈ ಪ್ರಾಂತ್ಯದಲ್ಲಿ ಸಂಚರಿಸಿದರೆಂದು ಸ್ಥಳಪುರಾಣಗಳು ಹೇಳುತ್ತವೆ.

ಉತ್ತರದ ಕಡೆಯಿಂದ ಕುರುಬರೂ, ಅನಂತರ ಈಶಾನ್ಯ ಕಡೆಯಿಂದ ಬ್ರಾಹ್ಮಣರೂ, ಪೂರ್ವ ಆಗ್ನೇಯಗಳಿಂದ ಒಕ್ಕಲಿಗರೂ ಈ ನಾಡಿಗೆ ವಲಸೆಬಂದರೆಂದು ಇತಿಹಾಸ ಸಂಶೋಧಕರು ಹೇಳುತ್ತಾರೆ.

ಈಗ್ಗೆ ಸುಮಾರು ೨೦೦೦ ವರ್ಷಗಳ ಹಿಂದೆ ಮಹಾವಲಿ ಅಥವಾ ಬಾಣರೆಂಬ ಅರಸರು ಈ ನಾಡಿನ ಕೆಲವು ಭಾಗಗಳನ್ನು ಆಕ್ರಮಿಸಿದ್ದು ಕಡೆಗೆ ಚೋಳರಿಂದ ಜಯಿಸಲ್ಪಟ್ಟರು. ಇವರಲ್ಲಿಯ ವಿಜಯಾದಿತ್ಯನು ಬೇತಮಂಗಲವನ್ನು ಸ್ಥಾಪಿಸಿ ಅಲ್ಲಿನ ಕೆರೆಯನ್ನು ಕಟ್ಟಿದನು. ಬಾಣ ವಿದ್ಯಾಧರನ ಹೆಂಡತಿಯಾದ ರತ್ನಾವಳಿಯು ನಂದಿಯ ದೇವಾಲಯದ ಮೂಲಗೃಹವನ್ನು ಕಟ್ಟಿಸಿದಳು.

ಕ್ರಿ. ಶ. ೨ನೆಯ ಶತಮಾನದಲ್ಲಿ ಗಂಗರೆಂಬ ಅರಸರು ಈ ನಾಡಿನ ದಕ್ಷಿಣ ಭಾಗವನ್ನು ಗೆದ್ದರು. ಇವರಿಗೂ ಬಾಣರಿಗೂ ಆಗಾಗ ಯುದ್ಧಗಳಾಗುತ್ತಲೇ ಇದ್ದುವು. ಗಂಗರಾಜರು ಕೆಲವು ಊರುಗಳನ್ನೂ ದೇವಾಲಯಗಳನ್ನೂ ಕಟ್ಟಿಸಿದುದಲ್ಲದೆ ಜನೋಪಕಾರಕವಾದ ಇತರ ದಾನಧರ್ಮಗಳನ್ನೂ ಸಹ ಮಾಡಿಸಿದರು.

ನೊಳಂಬ ರಾಜರೂ ಇದೇ ಸಮಯದಲ್ಲಿ ಕೆಲವು ಭಾಗಗಳನ್ನು ಆಕ್ರಮಿಸಿದ್ದರು. ಆದರೆ ಕಂಚಿಯ ಪಲ್ಲವರು ಗಂಗರ ಮೇಲುಕೈಯಾದರು. ಹುಸುಕುಂದವೆಂಬ ಊರು ಇವರೆಲ್ಲರ ಗಡಿನಾಡಾಗಿದ್ದು ಅನೇಕ ವೇಳೆ ಅಲ್ಲಿ ಯುದ್ಧಗಳು ನಡೆಯುತ್ತಿದ್ದುವು. ಈ ಯುದ್ಧಗಳಲ್ಲಿ

ಈ ನಾಡಿನ ಅನೇಕ ವೀರರು ಬಹು ಸಾಹಸದಿಂದ ಕಾದಿ ಮಡಿದರು. ಅವರ ವಂಶಕ್ಕೆ ತೊಡಗುತ್ತ ಶಾಸನಗಳು ಅನೇಕವು ಅವರ ಸಾಹಸಗಳನ್ನು ವರ್ಣಿಸಿವೆ.

ನೊಳಂಬರೆಂಬ ರಾಜರು ಈಗ್ಗೆ ಸುಮಾರು ೧೦೦೦ ವರ್ಷಗಳ ಹಿಂದೆ ಉತ್ತರದ ಕೆಲವು ಭಾಗಗಳನ್ನು ವಶಮಾಡಿಕೊಂಡರು.

ಆದರೆ ಚೋಳರು ನೊಳಂಬರನ್ನು ಸೋಲಿಸಿ, ಗಂಗರನ್ನು ಗೆದ್ದು ಕಡೆಗೆ ಈ ನಾಡೆಲ್ಲವನ್ನೂ ಆಕ್ರಮಿಸಿದರು.

ಅಷ್ಟು ಹೊತ್ತಿಗೆ ದ್ವಾರಸಮುದ್ರದ ಹೊಯ್ಸಳರು ಪ್ರಬಲರಾಗಿ ಚೋಳರನ್ನು ಓಡಿಸಿ ನಾಡನ್ನು ಆಕ್ರಮಿಸಿದರು. ಮುಸಲ್ಮಾನರು ದಕ್ಷಿಣ ದೇಶಕ್ಕೆ ನುಗ್ಗಿ ಅವರ ರಾಜಧಾನಿಯನ್ನು ಹಾಳು ಕೆಡಹಿದಾಗ ಅವರರಸನು ಇಲ್ಲಿಗೇ ಬಂದು ನೆಲಸಿದನು.

ಈ ವೇಳೆಗೆ ವಿಜಯನಗರದ ಸಂಸ್ಥಾನವು ತಲೆಯೆತ್ತಿತು. ಅಲ್ಲಿನ ರಾಯರು ಇಬ್ಬರು ಘನಾಯಕ ಸಹೋದರರನ್ನು ಹೆಗ್ಗಡೆಗಳನ್ನಾಗಿ ಮುಳಬಾಗಿಲಿನಲ್ಲಿಟ್ಟು ಈ ಪ್ರಾಂತ್ಯದಲ್ಲಿ ಅಧಿಕಾರವನ್ನು ನಡೆಸ ತೊಡಗಿದರು. ಈ ಸಂದರ್ಭವನ್ನು ಅನುಕೂಲಪಡಿಸಿಕೊಂಡು ನಾಡಿನ ಪಾಳೆಯಗಾರರು ಅಲ್ಲಲ್ಲಿಯೇ ಪ್ರಬಲರಾಗುತ್ತಲೂ, ಹೊಸ ಪಾಳೆಯಗಳನ್ನು ಕಟ್ಟುತ್ತಲೂ ಬಂದರು. ಹೀಗೆ ಬಲಿತವರಲ್ಲಿ ಗುಮ್ಮನಾಯಕನ ಪಾಳೆಯದ ಪಾಳೆಯಗಾರರು, ಸುಗಟೂರು ನಾಡುಪ್ರಭುಗಳು, ಚಿಕ್ಕಬಳ್ಳಾಪುರದ ಗೌಡರು ಪ್ರಸಿದ್ಧಿಗೆ ಬಂದರು. ಇವರುಗಳೆಲ್ಲರೂ ಅನೇಕ ಜನೋಪಕಾರಕೃತಿಗಳನ್ನು ಮಾಡಿದ್ದಲ್ಲದೆ ರಾಜ್ಯವನ್ನು ಬೆಳೆಸುವುದರಲ್ಲಿಯೂ, ಸಂಪಾದಿಸಿದ ರಾಜ್ಯವನ್ನು ವಿಚಕ್ಷಣೆಯಿಂದ ಆಳುವುದರಲ್ಲಿಯೂ ಬಹಳ ಸಮರ್ಥರಾಗಿದ್ದರು. ತಾಳೀಕೋಟೆಯ ಯುದ್ಧದಲ್ಲಿ ವಿಜಯನಗರವು ಮುರಿದುಬಿದ್ದುದು ಇವರುಗಳಿಗೆ ರೆಕ್ಕೆ ಬಲಿತಂತಾಯಿತು. ಕಡೆಗೆ ಅಲ್ಲಲ್ಲಿ ಅನಾಯಕತೆ ಹೆಚ್ಚ ತೊಡಗಿತು.

ಈ ಸಮಯಕ್ಕೆ ಬಿಜಾಪುರದ ನವಾಬರ ದಂಡು ಇತ್ತ ಬಂದಿತು. ಅಲ್ಲಿಂದೀಚೆಗೆ ಮುಸಲ್ಮಾನರೂ ಮರಾಟೆಯವರೂ ಆಗಾಗ್ಗೆ ಈ ಕಡೆ

ಯಾತ್ರೆ ಬರುತ್ತಲೇ ಇದ್ದರು. ಬಿಜಾಪುರದವರು ಕೋಲಾರ ನಾಡನ್ನು ಸಿರಾ ಪ್ರಾಂತ್ಯಕ್ಕೆ ಸೇರಿಸಿದರು.

ಕಡೆಗೆ ಮರಾಟೆಯವರೂ, ಅವರಿಂದ ಕಡಪದ ನವಾಬರೂ, ಆದವಾನಿಯ ಮುಸಲ್ಮಾನರೂ ಇಲ್ಲಿ ಕೈಯಾಡಿಸಿದರು. ಈ ಸಮಯಕ್ಕೆ ಮೈಸೂರಿನ ಒಡೆಯರೂ ಇಂಗ್ಲಿಷರೂ ಈ ಕಡೆಗೇ ತಮ್ಮ ನೋಟವನ್ನು ಬೀರಿದರು.

ಮರಾಟೆಯವರಿಗೂ ಮೈಸೂರಿನವರಿಗೂ ಈ ಪ್ರಾಂತ್ಯಕ್ಕಾಗಿ ಹೋರಾಟಗಳು ನಡೆದು, ಮೈಸೂರಿನ ಹೈದರಾಲಿಯು ಗೆದ್ದನು. ಟೀಪುವಿನ ಮರಣಾನಂತರ ರಾಜ್ಯಗಳ ಹಂಚಿಕೆಯಲ್ಲಿ ಕೋಲಾರ ನಾಡು ಈವರೆವಿಗೂ ಸ್ಥಿರವಾಗಿ ಮೈಸೂರು ರಾಜ್ಯದ ಭಾಗವಾಗಿ ಉಳಿಯಿತು.

ಮೈಸೂರು ಇಂಗ್ಲೀಷು ವಶವಾಗಿದ್ದ ಐವತ್ತು ವರ್ಷಕಾಲ ಆಗಿನ ಸರ್ಕಾರದವರು ಈ ನಾಡಿನ ಅಭಿವೃದ್ಧಿಗೆ ಸಹಾಯಕವಾದ ಕೆಲಸಗಳನ್ನು ನಡೆಯಿಸಿದರು.

ಚಾಮರಾಜ ಒಡೆಯರವರು ಈ ನಾಡಿನ ವಿಚಾರವಾಗಿ ತುಂಬಾ ವಿಶ್ವಾಸಿಗಳಾಗಿದ್ದರು. ಈಗಿನ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರೂ ಈ ನಾಡಿಗೆ ಆಗಾಗ್ಗೆ ಬಂದೂ ನಾಡಿನ ಏಳಿಗೆಗೆ ಉಪಯುಕ್ತವಾದ ಕೆಲಸಗಳನ್ನು ನಡೆಯಿಸಿಕೊಡುತ್ತಲೂ ಜನಾನುರಾಗಿಗಳಾಗಿರುವರು.

ಕೋಲಾರವು ಕನ್ನಡ ನಾಡು. ಇಲ್ಲಿನ ಅತಿ ಪುರಾತನ ಶಾಸನಗಳೂ, ಸ್ಥಳಗಳ ಹೆಸರುಗಳೂ, ಜನಗಳ ನಡೆನುಡಿಗಳೂ ಇದನ್ನು ಸ್ಥಿರಪಡಿಸುತ್ತವೆ. ಆದರೆ ಮಧ್ಯೆ ಇತರ ರಾಜ್ಯಗಳ ಆಳ್ವಿಕೆಗೆ ಒಳಪಟ್ಟಿದ್ದ ಅವಧಿಯಲ್ಲಿ ಇಲ್ಲಿ ತೆಲುಗು ಭಾಷೆಯ ಪ್ರಾಬಲ್ಯವೂ, ಮುಸಲ್ಮಾನರ ಸಂಖ್ಯೆಯೂ, ಈಚೆಗೆ ತಕ್ಕಮಟ್ಟಿಗೆ ಕ್ರೈಸ್ತರ ಮತವೂ ಬೇರುಬಿಟ್ಟವು.

ವ್ಯವಸಾಯವೇ ಇಲ್ಲಿನ ಜನರ ಮುಖ್ಯ ಉದ್ಯೋಗ. ನೇಯಿಗೆಯ ಕೆಲಸವು ಬಹು ಹಿಂದಿನಿಂದ ಹೆಚ್ಚಾಗಿ ನಡೆದುಬಂದಿದೆ.

ಆಡಳಿತದ ಅನುಕೂಲಕ್ಕಾಗಿ ಕೋಲಾರ ಡಿಸ್ಟ್ರಿಕ್ಟು ಮೂರು ಸಬ್-ಡಿವಿಜನ್ನು (ರೆವೆನ್ಯೂ) ಗಳಾಗಿಯೂ, ಹನ್ನೊಂದು ತಾಲೂಕು ಗಳಾಗಿಯೂ, ೫೭ ಹೋಬಳಿಗಳಾಗಿಯೂ, ೩,೫೭೩ ಗ್ರಾಮ ಗಳಾಗಿಯೂ ವಿಭಾಗಿಸಲ್ಪಟ್ಟಿದೆ.

ವ್ಯವಹಾರಗಳ ತೀರ್ಪಿನ ಸೌಲಭ್ಯಕ್ಕಾಗಿ ಕೋಲಾರ, ಚಿಕ್ಕ ಬಳ್ಳಾಪುರ ಮತ್ತು ಚಿನ್ನದ ಗಣಿಗಳಲ್ಲಿ ಮೂರು ಮುನ್ಸಿಫ್ ಕೋರ್ಟು ಗಳೂ, ಮ್ಯಾಜಿಸ್ಟ್ರೇಟ್ ಕೋರ್ಟುಗಳೂ ಇವೆ.

ಈ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ ಮತ್ತು ವಾಣಿಜ್ಯಗಳ ಪ್ರೋತ್ಸಾಹನೆಯು 'ಕೋಲಾರದ ಡಿಸ್ಟ್ರಿಕ್ಟ್ ಬೋರ್ಡ್' ಎಂಬ ಸಂಸ್ಥೆಗೂ, ಗಣಿಗಳ ಪ್ರದೇಶದ ಈ ಬಗೆಯ ಆಡಳಿತವು 'ಕೋಲಾರ್ ಗೋಲ್ಡ್ ಫೀಲ್ಡ್ಸ್ ಸ್ಯಾನಿಟರಿ ಬೋರ್ಡ್' ಎಂಬ ಸಂಸ್ಥೆಗೂ, ದೊಡ್ಡ ಊರುಗಳಲ್ಲಿ 'ಮುನಿಸಿಪಲ್ ಕೌನ್ಸಿಲ್' ಮತ್ತು ಗ್ರಾಮಗಳಲ್ಲಿ 'ಗ್ರಾಮ ಪಂಚಾಯತಿ' ಎಂಬ ಸಂಸ್ಥೆಗಳಿಗೂ ವಹಿಸಲ್ಪಟ್ಟಿವೆ.

ಸೇಂದಿ, ಇಂಜನಿಯರಿಂಗ್, ಫಾರೆಸ್ಟ್, ವಿದ್ಯಾಭ್ಯಾಸ, ಪೋಲೀಸ್ ಮುಂತಾದ ಬೇರೆ ಬೇರೆ ಇಲಾಖೆಗಳ ಸೌಕರ್ಯಕ್ಕಾಗಿ ಹನ್ನೊಂದು ತಾಲೂಕುಗಳೂ ಬೇರೆ ಬೇರೆ ಶ್ರೇಣಿಗಳಾಗಿ ವಿಭಾಗಿಸಲ್ಪಟ್ಟಿವೆ.

ಅಂಚೆಯ ಇಲಾಖೆ ಮತ್ತು ತಂತಿಯ ಇಲಾಖೆಗಳವರು ಈ ಡಿಸ್ಟ್ರಿಕ್ಟನ್ನು ಮದ್ರಾಸ್ ಸರ್ಕಲ್ಲಿನ ಬೆಂಗಳೂರು ಹೆಡ್ ಆಫೀಸಿನ ಅಧಿಕಾರಕ್ಕೆ ಒಳಗೊಂಡಿರುವಂತೆ ಗಣಿಸುವರು.

ವೈದ್ಯ ಇಲಾಖೆಯವರೂ ವಿದ್ಯಾಭ್ಯಾಸದ ಇಲಾಖೆಯವರೂ ಸರ್ಕಾರದ ಸಹಾಯ ಪಡೆದ ಖಾಸಗಿಯ ಮತ್ತು ಸ್ವತಂತ್ರವಾದ ಸಂಸ್ಥೆಗಳನ್ನು ನೋಡಿಕೊಳ್ಳುವರು. ಈ ನಾಡಿನಲ್ಲಿ ಸರಾಸರಿ ನೂರಕ್ಕೆ ಎಂಟುಮಂದಿಗೆ ಮಾತ್ರ ಓದುಬರಹ ಬರುತ್ತದೆ. ಓದುಬರಹ ಬಲ್ಲ ಗಂಡಸರ ಒಟ್ಟು ಸಂಖ್ಯೆಯು ಸುಮಾರು ೫೫,೦೦೦, ಹೆಂಗಸರದು ಸುಮಾರು ೧೫,೦೦೦.

ಸಾಧಾರಣವಾಗಿ ಈ ನಾಡಿನ ಭೂಕಂದಾಯದಿಂದ ೧೭ ಲಕ್ಷವೂ, ಇತರ ರೀತಿಯಿಂದ ೨೩ ಸಾವಿರವೂ, ಡಿಸ್ಟ್ರಿಕ್ಟ್ ಬೋರ್ಡ್‌ಗಾಗಿ ೨ ಲಕ್ಷವೂ, ಮುನಿಸಿಪಾಲಿಟಿಗಳಿಂದ ೨ ಲಕ್ಷ ರೂಪಾಯಿಗಳೂ (ವರ್ಷಕ್ಕೆ) ಆದಾಯವಿರುವುದು.

ಜನಗಳು ವಿದ್ಯಾವಂತರೂ ನಾಗರಿಕರೂ ಆದಹಾಗೆಲ್ಲಾ ನಮ್ಮ ನಾಡೂ ಏಳಿಗೆಗೆ ಬರುತ್ತಲೇ ಇರುವುದು.

---

## ೩. ಕೋಲಾರದ ಕೈವಾಡ

ಈ ನಾಡಿನ ಜನರು ಬಹು ಹಿಂದಿನಿಂದಲೂ ಯುದ್ಧ, ಶಿಲ್ಪ, ಸಾಹಿತ್ಯ, ವಾಣಿಜ್ಯ, ವ್ಯವಸಾಯಗಳಲ್ಲಿ ಮುಂದುವರಿದಿರುವರು.

ಹಿಂದೂದೇಶದಲ್ಲಿ ದ್ರಾವಿಡರು ಮೆಲ್ಲಮೆಲ್ಲನೆ ಏಳಿಗೆಗೆ ಬರುತ್ತಿದ್ದ ಬಹು ಹಿಂದಿನ ಕಾಲದಲ್ಲಿಯೇ ಕೋಲಾರದ ಬಳಿಯಿಂದ ಚಿನ್ನವನ್ನು ತೆಗೆದು ಉತ್ತರ ಹಿಂದೂಸ್ಥಾನಕ್ಕೆ ಸಾಗಿಸುತ್ತಿದ್ದರೆಂದು ತಿಳಿದು ಬಂದಿದೆ. ಈಗಲೂ ಇಲ್ಲಿ ಚಿನ್ನವನ್ನು ತೆಗೆಯುತ್ತಿರುವುದು ತಿಳಿದೇ ಇದೆ. ಬಾಗೇಪಲ್ಲಿ ತಾಲೂಕಿನಲ್ಲಿಯೂ ಶ್ರೀನಿವಾಸಪುರದ ತಾಲೂಕಿನಲ್ಲಿಯೂ ಮೊನ್ನೆ ಮೊನ್ನೆಯವರಿವಿಗೂ ದೊರೆಯುತ್ತಿದ್ದ ಅದುರಿನಿಂದಲೇ ಕಬ್ಬಿಣವನ್ನು ಪಡೆದು ಆಯುಧಗಳನ್ನೂ ಸಣ್ಣಪುಟ್ಟ ಸಾಮಾನುಗಳನ್ನೂ ಮಾಡುತ್ತಿದ್ದರು.

ಹೊರದೇಶದಿಂದ ಯಂತ್ರಗಳು ಮಾಡಿದ ಗಾಜು ವಿಶೇಷವಾಗಿ ಬರುವುದಕ್ಕೆ ಮೊದಲು ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ ತಾಲೂಕುಗಳಲ್ಲಿ ಗಾಜಿನ ಬಳೆಗಳನ್ನು ಬಹಳವಾಗಿ ಮಾಡಿ ಮಾರುತ್ತಿದ್ದರು. ಕಾಗದವೂ ಕೈಯಿಂದಲೇ ಈ ಪ್ರಾಂತ್ಯದಲ್ಲಿ ತಯಾರಾಗುತ್ತಿದ್ದಿತು.

ನಂದಿ, ಮಂಡಿಕಲ್ಲು, ಚಿಕ್ಕಬಳ್ಳಾಪುರ ಮತ್ತು ಕೋಲಾರಗಳಲ್ಲಿ ಹೆಂಚನ್ನು ಮಾಡುವ ಕಾರ್ಖಾನೆಗಳು ಪ್ರಾರಂಭವಾದುವು. ಆದರೆ ಈಗ ಮಾತ್ರ ಕೋಲಾರದ ಕಾರ್ಖಾನೆಯು ಚೆನ್ನಾಗಿ ಕೆಲಸಮಾಡುತ್ತಿದೆ. ನಾಟಿ ಅಥವಾ ಕುಂಬಾರ ಹೆಂಚುಗಳು ಬಹು ಹಿಂದಿನಿಂದಲೂ

ಸುಡಲ್ಪಡುತ್ತಿದ್ದು ಈಗಲೂ ಕೂಡ ಅಲ್ಲಲ್ಲಿ ಮನೆಗಳಿಗೆ ಹೊದಿಸಲ್ಪಡುತ್ತವೆ.

ರತ್ನಪಡಿ ವ್ಯಾಪಾರಕ್ಕೆ ಚಿಂತಾಮಣಿಯು ಹೆಸರಾಗಿದ್ದಿತು. ಈಗ ಸಾಧಾರಣವಾಗಿ ಪ್ರತಿ ಮುಖ್ಯಸ್ಥಳಗಳಲ್ಲಿಯೂ ಸರಾಫ್ (ಚಿನಿವಾರರ) ಅಂಗಡಿಗಳು ಇವೆ.

ಕೋಲಾರದ ಕಂಬಳಿಗಳು ಈಗಲೂ ಉತ್ಕೃಷ್ಟವಾದುವೆಂದು ಗಣಿಸಲ್ಪಟ್ಟಿವೆ. ಒರಟು ಕಂಬಳಿಗಳು ಹಳ್ಳಿಗಳಲ್ಲಿ ತಯಾರಾಗಿ ವಾರ ವಾರವೂ ಸಂತೆಗಳಿಗೆ ಮಾರಾಟಕ್ಕೆ ಬರುತ್ತಿರುವುವು.

ನೇದಲವೇಣಿಯಲ್ಲಿ ಉತ್ಕೃಷ್ಟವಾದ ಪಂಚೆಗಳೂ, ತಾಯಲೂರು ಗುಡಿಬಂಡೆಗಳಲ್ಲಿ ಉತ್ತಮವಾದ ಸೀರೆಗಳೂ ಕೈಯಿಂದ ನೇಯಲ್ಪಡುತ್ತವೆ. ಈಚೆಗೆ ಹೊಸೂರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರೇ ಒಂದು ಖಾದಿ ಕೇಂದ್ರವನ್ನು ಆರಂಭಿಸಿರುವರು.

ಕೋಲಾರ ಮತ್ತು ಚಿಂತಾಮಣಿಗಳಲ್ಲಿ ಚರ್ಮ ಹದಮಾಡುವ 'ಟ್ಯಾನರಿ'ಗಳು ಇವೆ.

ರೇಷ್ಮೆ ಹುಳುಗಳನ್ನು ಸಾಕಿ, ಗೂಡಿನಿಂದ ರೇಷ್ಮೆಯನ್ನು ತೆಗೆದು, ರಫ್ತುಮಾಡಿ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಕೋಲಾರಗಳಲ್ಲಿ ಅನೇಕ ಮಂದಿ ಜೀವಿಸುತ್ತಿದ್ದಾರೆ.

ಶಿವಾರಪಟ್ಟಣದಲ್ಲಿ ಒಳ್ಳೆಯ ವಿಗ್ರಹಗಳು ಕಲ್ಲಿನಲ್ಲಿಯೂ ಲೋಹದಲ್ಲಿಯೂ ಮಾಡಲ್ಪಡುವುವು.

ಮುಂಚೇನಹಳ್ಳಿಯಲ್ಲಿಯೂ ಗೂಳೂರಿನಲ್ಲಿಯೂ ಶ್ರೇಷ್ಠತರವಾದ ಬೆಲ್ಲವೂ, ಕೋಲಾರದಲ್ಲಿ ಬೆಲ್ಲದಿಂದ 'ಕೋಲಾರ ಬೂರ' ಎಂಬ ಸಕ್ಕರೆಯೂ ಮಾಡಲ್ಪಟ್ಟು ರಫ್ತಾಗುತ್ತವೆ.

ಬೌರಿಂಗ್‌ಪೇಟೆಯಲ್ಲಿ ಸಿಗರೇಟುಗಳನ್ನು ಮಾಡುವ ಯಂತ್ರಾಲಯವೊಂದು ಬಹುಕಾಲದಿಂದಲೂ ಕೆಲಸಮಾಡುತ್ತಿದ್ದಿತು. ಈಚೆಗೆ ಬೀಡಿಗಳು ವಿಪರೀತವಾಗಿ ಅಲ್ಲಲ್ಲಿಯೇ ತಯಾರಾಗಿ ಮಾರಲ್ಪಡುತ್ತಿವೆ.

ಸುಗಂಧದ್ರವ್ಯಗಳ ತಯಾರಿಯು ಚಿಕ್ಕಬಳ್ಳಾಪುರ, ಚಿಂತಾಮಣಿ ಮತ್ತು ಕೋಲಾರಗಳಲ್ಲಿ ಹೆಚ್ಚಾಗಿ ನಡೆಯುವುದು.

ಮುದ್ರಣಾಲಯಗಳೂ, ಜೇಸುವ ಮತ್ತು ಕುಟ್ಟುವ ಯಂತ್ರಗಳೂ, ಬತ್ತ ಮತ್ತು ಕಡಲೇಕಾಯಿಗಳ ಯಂತ್ರಗಳೂ ಒಂದೇ ಸಮನಾಗಿ ಹೆಚ್ಚುತ್ತಿವೆ. ದೊರೆತ ಕಡೆಗಳಲ್ಲೆಲ್ಲಾ ವಿದ್ಯುಚ್ಛಕ್ತಿಯೂ ಉಪಯೋಗಿಸಲ್ಪಡುತ್ತಿರುವುದು.

ಮರಗೆಲಸವು ಗಣಿಗಳು ಮತ್ತು ಕೋಲಾರದಲ್ಲಿ ವಿಶೇಷವಾಗಿ ನಡೆಯುತ್ತಿರುವುದು. ಲೋಹದಲ್ಲಿ ಕೆಲಸಮಾಡುವ 'ವರ್ಕ್‌ಷಾಪ್'ಗಳು ಈ ಎರಡು ಕಡೆಯೂ ಇರುವುವು.

ಈ ರೀತಿಯಲ್ಲಿ ಕುಶಲವಿದ್ಯೆ ಕೈಗಾರಿಕೆಗಳಲ್ಲಿ ಕೋಲಾರವು ಮುಂದುವರಿಯುತ್ತಿರುವುದು.

ಮೈಸೂರು ಸೀಮೆಯಲ್ಲೆಲ್ಲಾ ವಿಶಾಲವಾದುದೆನ್ನಬಹುದಾದ ದೇವಾಲಯವು ಮುಳುಬಾಗಲಿಗೆ ನಾಲ್ಕು ಮೈಲಿ ದೂರದಲ್ಲಿ ವಿರೂಪಾಕ್ಷಿ ಎಂಬಲ್ಲಿದೆ. ಆದರೆ ಇದು ತೀರ ಶಿಥಿಲವಾಗಿಹೋಗಿರುವುದು.

ನೆಲದೊಳಗೆ ಅಗೆದು ಮಾಡಿರುವ ಗವಿಗಳು ಶಿಡ್ಲಘಟ್ಟದ ಬಳಿ ಇವೆ. ಇವುಗಳಲ್ಲಿ ದೊಡ್ಡದು ದಕ್ಷಿಣಕ್ಕೂ, ಸಣ್ಣದು ಪೂರ್ವಕ್ಕೂ ಒಂದೂವರೆ ಮೈಲಿ ದೂರದಲ್ಲಿವೆ. ಎರಡರಲ್ಲಿಯೂ ಬಸವಣ್ಣನ ವಿಗ್ರಹಗಳಿವೆ. ಸಣ್ಣ ಗವಿಯಲ್ಲಿ ಒಂದು ಕಿರುಕೋಣೆಯು ಕೂಡ ಇರುವುದು. ಶೈವಸಿದ್ಧರು ಯಾರೋ ಗೌಡರಸರ ಕಾಲದಲ್ಲಿ ತಮ್ಮ ಉಪಾಸನಾಸ್ಥಾನಗಳಿಗಾಗಿ ಇವುಗಳನ್ನು ಮಾಡಿಸಿಕೊಂಡಿರಬೇಕು.

ಪ್ರಾಚೀನ ಶಿಲ್ಪಕಲೆಯ ಶ್ರೇಷ್ಠ ಗುರುತುಗಳಾದ ದೇವಾಲಯಗಳು ನಂದಿ, ಕುರುಡುಮಲೆ, ಕೋಲಾರ, ಆವನಿ ಮತ್ತು ಮುಳುಬಾಗಲುಗಳಲ್ಲಿವೆ. ಹಿರೆಬಿದನೂರಿನ ಹಿನ್ನಾಮತೀಜೀ ದರ್ಗಾ ಎಂಬುದು ಮುಸಲ್ಮಾನರ ಉತ್ತಮ ಕಟ್ಟಡವಾಗಿರುವುದು. ಪ್ರಬಲ ಪಾಳೆಯವಾಗಿದ್ದ ಗುಮ್ಮನಾಯಕನ ಪಾಳೆಯವು ಬಾಗೇಪಲ್ಲಿಯ ತಾಲೂಕಿನಲ್ಲಿರುವುದು. ಅಲ್ಲಿ ಮೈಲಿಗಟ್ಟಲೆ ಪಾಳುಬಿದ್ದಿರುವ ಊರು, ಕೋಟೆ,

ದೇವಾಲಯ, ತಟಾಕಗಳನ್ನೂ ಅರಮನೆ, ಮಹರ್ನವಮಿಯ ದಿಲ್ಲಿ ದರ್ಬಾರಿನ ಅಂಗಳಗಳನ್ನೂ ಸನ್ನಿವೇಶವನ್ನೂ ನೋಡಿದರೆ ಈ ಪ್ರದೇಶವನ್ನು ಸಂಕೋಚವಿಲ್ಲದೆ "ಕೋಲಾರದ ಹಂಪೆ"ಯೆಂದು ಕರೆಯಬಹುದು.

ಕೋಲಾರವು ಕನ್ನಡ ನಾಡು. ಬಹು ಹಿಂದಿನ ಶಾಸನಗಳೂ ಇಲ್ಲಿನ ಸಂಸ್ಕೃತಿಯೂ ಇದನ್ನು ಸ್ಥಿರೀಕರಿಸುತ್ತವೆ. ಆದಾಗ್ಯೂ ಈ ನಾಡಿನಲ್ಲಿ ತೆಲುಗನ್ನು ಹೆಚ್ಚಾಗಿ ಮಾತನಾಡಲು ಬಲ್ಲರು. ಏಕೆಂದರೆ, ತೆಲುಗು ಪ್ರಾಂತ್ಯಗಳಾದ ಅನಂತಪುರ, ಚಿತ್ತೂರು, ಸೇಲಂಗಳು ಕೋಲಾರಕ್ಕೆ ಹೊಂದಿಕೊಂಡಿವೆ. ಆ ಕಡೆಯಿಂದ ಈ ನಾಡಿಗೆ ವಲಸೆ ಬಂದಿರುವವರು ವಿಶೇಷವಾಗಿದ್ದಾರೆ. ಇವರ ಸಂಖ್ಯೆ ಸುಮಾರು ೩೦ ಸಾವಿರವೆಂದು ಅಂದಾಜು ಮಾಡಲ್ಪಟ್ಟಿದೆ. ಇವರುಗಳೂ ಇವರೊಡನೆ ವ್ಯವಹರಿಸುತ್ತಿರುವವರೂ ತೆಲುಗನ್ನು ಆಡುವರು.

ಈ ಪ್ರದೇಶದಲ್ಲಿ ಹಿಂದಿನಿಂದಲೂ ಕವಿಗಳೂ, ಕೀರ್ತನಕಾರರೂ, ಕಾಲಜ್ಞಾನಿಗಳೂ, ಗ್ರಂಥಕರ್ತೃಗಳೂ ಅನೇಕರು ಇದ್ದರು. ವಿಶ್ವದ ಆದಿ ಕವಿಯಾದ ವಾಲ್ಮೀಕಿ ಮಹರ್ಷಿಯು ಇದ್ದ ಸ್ಥಳವು ಆವನಿಯೆಂದು ಹೇಳುವರು. ಮುಳುಬಾಗಲಿನ ಮಠಾಧಿಪತಿಗಳು ಕೆಲವರು ಸಂಸ್ಕೃತದಲ್ಲಿ 'ವ್ಯಾಸವಿಜಯ'ವೇ ಮೊದಲಾದ ಗ್ರಂಥಗಳನ್ನು ಬರೆದರು. ಸುಗಟೂರು ನಾಡಪ್ರಭುವಾದ ಮುಮ್ಮಡಿ ತಿಮ್ಮಭೂಪನು ಕನ್ನಡ, ತೆಲುಗು, ಸಂಸ್ಕೃತಗಳಲ್ಲಿ ಮೂರರಲ್ಲಿಯೂ ಗ್ರಂಥ ರಚನೆ ಮಾಡಿದನು. ಪ್ರತಿವಾದಿಭಯಂಕರ ಕುಲದ ಅಣ್ಣಂಗರಾಚಾರ್ಯರಿಂದಲೂ ಸಂಸ್ಕೃತದಲ್ಲಿ ಗ್ರಂಥಗಳು ಬರೆಯಲ್ಪಟ್ಟಿರುವವು. ಕೈವಾರದ ನಾರಣಪ್ಪನ ಅಮರನಾರಾಯಣ ಗೀತೆಗಳೂ ಕಾಲಜ್ಞಾನವೂ ಈ ನಾಡಿನಲ್ಲಿ ಪ್ರಸಿದ್ಧವಾಗಿರುವವು. ಬಾಗೇಪಲ್ಲಿಯ 'ಗುರುರಾಮವಿಠಲ' ಎಂಬುವರು ಅಸಂಖ್ಯಾತ ಕೃತಿಗಳನ್ನೂ ಕೀರ್ತನೆಗಳನ್ನೂ ರಚಿಸಿರುವರು. ಪೆರೆಯ ಸಂದ್ರದ ಸುಬ್ರಹ್ಮಣ್ಯ ಎಂಬುವರೂ ಇತರ ಕೆಲವರೂ ಅನೇಕ ದೇವರ ನಾಮಗಳನ್ನೂ ಕೀರ್ತನೆಗಳನ್ನೂ ಹಾಡಿರುವರು. ಶಿಡ್ಲಘಟ್ಟದ

ರಾಮರಾಯರೆಂಬುವರು ಈ ನಾಡಿಗೆ ಇಂಗ್ಲೀಷ್ ಭಾಷೆಯು ಹೆಜ್ಜೆಯಿಟ್ಟ ತರುಣದಲ್ಲಿಯೇ ಒಂದು ಡಿಕ್ಷನೆರಿಯನ್ನು ತಯಾರಿಸಿದರು. ಇಷ್ಟೇ ಅಲ್ಲದೆ ಪಾಳೆಯಗಾರರ ಬಖೈರುಗಳನ್ನು ಬರೆದವರೂ, ಅವರ ಬಳಿ ಇದ್ದ ಭಟರಾಜುಗಳೂ, ಇತರ ಲಾವಣಿಕಾರರೂ ಸುರಸವಾಗಿ ಗದ್ಯ ಪದ್ಯಗಳನ್ನು ಬರೆದಿರುವರು.

ಜನರ ಧಾರ್ಮಿಕ ಜೀವನಕ್ಕೆ ಸಹಾಯವಾಗಿರುವಂತೆ ಈ ಪ್ರಾಂತ್ಯದಲ್ಲಿ ಮಠಗಳಿರುವವು. ಮುಳಬಾಗಲಿನಲ್ಲಿ ಶ್ರೀಪಾದರಾಯರ (ಮಾಧ್ವ) ಮಠವೂ, ಆವನಿಯಲ್ಲಿ ಒಂದು ಸ್ಮಾರ್ತ ಮಠವೂ ಪ್ರಸಿದ್ಧವಾಗಿರುವವು. ಬ್ರಾಹ್ಮಣ ಮಠಕ್ಕೆ ಹೊಂದಿದ ಇನ್ನೂ ಕೆಲವು ಮಠಗಳು ಇರುವುವಲ್ಲದೆ, ಜೋಗಿ ಬೈರಾಗಿಗಳಿಗೂ ನಾಲ್ಕನೆಯ ಪಂಗಡದವರಿಗೂ ಸಹಾಯವಾಗಿರುವ ಅಮರನಾರಾಯಣ ಮಠವೆಂಬುದು ಕೈವಾರದಲ್ಲಿರುವುದು.

ಈ ರೀತಿ ಹಿಂದಿನಿಂದಲೂ ಈ ನಾಡು ಕೃಷಿ, ಕಲೆ, ವಾಣಿಜ್ಯ, ಧರ್ಮ ಮೊದಲಾದ ಎಲ್ಲ ವಿಷಯಗಳಲ್ಲಿಯೂ ಮುಂದುವರಿಯುತ್ತಿರುವುದು.

ಕ್ರೈಸ್ತ ಪಂಗಡದವರ ಲಂಡನ್ ಮಿಷನ್, ವೆಸ್ಲಿಯನ್ ಮಿಷನ್, ಮೆಥಡಿಸ್ಟ್ ಎಪಿಸ್ಕೋಪಲ್ ಮಿಷನ್ ಮತ್ತು ಕೆಥೋಲಿಕ್ಕರ ಪ್ರಚಾರಣಾ ಸಂಘಗಳು ಈ ಪ್ರಾಂತ್ಯದಲ್ಲಿ ಕೆಲಸಮಾಡುತ್ತಿರುವವು. ಕೋಲಾರ, ಗಣಿಗಳು ಮತ್ತು ಚಿಕ್ಕಬಳ್ಳಾಪುರಗಳು ಇವರ ಕೇಂದ್ರ ಕಾರ್ಯಸ್ಥಳಗಳಾಗಿರುವವು.

ಮುಹಮ್ಮದೀಯರ ಇಮಾಂಬರ ಮತ್ತು ದರ್ಗಗಳು ಅಲ್ಲಲ್ಲಿವೆ. ಕೆಲವು ಕಡೆ ಇವಕ್ಕೆ ಸಂಬಂಧಿಸಿ ವರ್ಷಂಪ್ರತಿ 'ಉರುಸು' ಎಂಬ ಜಾತ್ರೆಯೂ ನಡೆಯುವುದು.

# ೪. ಕೋಲಾರದ ಹೆಸರು

ಕೋಲಾರವೆಂದು ಹೆಸರಾದುದಕ್ಕೆ ಎರಡು ಕತೆಗಳನ್ನು ಹೇಳುತ್ತಾರೆ.

ಹಿಂದೆ ಜಮದಗ್ನಿ ಋಷಿಯು ಹೆಂಡತಿಯಾದ ರೇಣುಕೆಯ ಮೇಲೆ ರೋಷಗೊಂಡು ಆಕೆಯ ತಲೆ ಹೊಯ್ಯುವಂತೆ ತನ್ನ ಮಕ್ಕಳಿಗೆ ಹೇಳಿದನು. ಹಿರಿಯರೊಬ್ಬರೂ ಒಪ್ಪಲಿಲ್ಲ. ಆಗ ಕಿರಿಯವನಾದ ರಾಮನು ತಂದೆಯ ಆಜ್ಞೆಯಾದೊಡನೆಯೇ ಬಳಿಯಿದ್ದ ಕೊಡಲಿಯಿಂದ ತಾಯಿಯನ್ನು ಕೊಂದನು. ಮಗನ ಪಿತೃಭಕ್ತಿಗೆ ಮೆಚ್ಚಿ ಬೇಕಾದ ವರವನ್ನು ಬೇಡೆಂದು ತಂದೆಯು ಹೇಳಲು, ರಾಮನು "ತಾಯಿಯನ್ನು ಬದುಕಿಸಿ ಕೊಡಿ" ಎಂದು ಕೇಳಿ, ಮಹಾತ್ಮನಾದ ತಂದೆಯಿಂದ ತಾಯಿಯ ಪ್ರಾಣವನ್ನು ಮರಳಿ ಹೊಂದಿದನು.

ಈ ಸಮಾಚಾರವು ರಾಜನಾದ ಅರ್ಜುನನಿಗೆ ತಿಳಿಯಿತು. ಅತನೇ ಇಷ್ಟು ಅನರ್ಥಕ್ಕೂ ಕಾರಣನಾಗಿದ್ದನು. ಅವನು ಮತ್ತೂ ಕೋಪಗೊಂಡು ಬಂದು ತಪಸ್ಸಿನಲ್ಲಿದ್ದ ಜಮದಗ್ನಿಯ ಕತ್ತನ್ನು ಕತ್ತರಿಸಿದನು.

ರಾಮನು ಆಶ್ರಮಕ್ಕೆ ಬಂದ ಕೂಡಲೆ ಇದು ತಿಳಿಯಿತು. ಅವನು "ಈ ಕಾರ್ತವೀರ್ಯಾರ್ಜುನನನ್ನು ಮಾತ್ರವೇ ಅಲ್ಲ ಸಮಸ್ತ ಕ್ಷತ್ರಿಯರನ್ನೂ ಧ್ವಂಸಮಾಡುವೆನು" ಎಂದು ಹೊರಟು, ಕೈಯಲ್ಲಿ ಕೊಡಲಿಯನ್ನು ಹಿಡಿದು, ಇಪ್ಪತ್ತೊಂದು ಸಲ ದೇಶಗಳನ್ನು ಸುತ್ತಿ, ಸಿಕ್ಕಿದ ರಾಜರನ್ನೆಲ್ಲಾ ಕತ್ತರಿಸಿದನು. ಪರಶು(ಎಂದರೆ ಕೊಡಲಿ)ವನ್ನು ಹೊತ್ತ ಇವನಿಗೆ ಪರಶುರಾಮನೆಂದೇ ಹೆಸರಾಯಿತು.

ಪರಶುರಾಮನು ಮಾಹಿಷ್ಮತಿಯ ಅರಸನಾದ ಕಾರ್ತವೀರ್ಯಾರ್ಜುನನನ್ನು ಅಟ್ಟಿಸಿಕೊಂಡು ಹೋಗಿ ಶತಶೃಂಗಪರ್ವತದ ಬಳಿ ಅವನನ್ನು ಸೋಲಿಸಿದನು. ತನ್ನ ಪ್ರತಿಜ್ಞೆಯು ನೆರವೇರಿದೊಡನೆಯೇ ಅದ್ಭುತವಾದ ಕೋಲಾಹಲದಿಂದ ಕೂಗಿದನು. ಆ ಸಮೀಪದಲ್ಲಿ ಕಟ್ಟಿದ ಈ ಊರಿಗೆ ಆ ದಿನದಿಂದ ಕೋಲಾಹಲ ಎಂದೇ ಹೆಸರಾಯಿತು. ಪರಶುರಾಮನ ತಾಯಿಯಾದ ರೇಣುಕೆಯೂ ಕೋಲಾಹಲಾಂಬಾ

ಎಂಬ ಹೆಸರಿನಿಂದ ಅಲ್ಲಿಯೇ ನೆಲಸಿದಳು. ಕಾಲಕ್ರಮದಲ್ಲಿ ಕೋಲಾಹಲ ಎಂಬುದು ಕುವಲಾಲ ಎಂದೂ, ಕೋಲಾಳ ಎಂದೂ, ಕೋಲಾರ ಎಂದೂ ಬದಲಾಯಿತು.

ಈಗಲೂ ಕೋಲಾಹಲಮ್ಮನ ಗುಡಿಯೂ, ಕೆರೆಯ ಕಟ್ಟೆಯಲ್ಲಿ ಪರಶುರಾಮನ ಗುಡಿಯೂ ಇವೆ.

ಇನ್ನೊಂದು ಕತೆಯನ್ನು ಕೇಳಿ:

ಹಿಂದೂದೇಶದಲ್ಲಿ ಬಲು ಮೊದಲು ಬಿಲ್ಲರು, ಕೋಲರು ಎಂಬ ಕಾಡುಜನರು ಇದ್ದರು. ದ್ರಾವಿಡರು ಇವರನ್ನು ಸೋಲಿಸಿದಹಾಗೆಲ್ಲ ಇವರು ಬೆಟ್ಟಗುಡ್ಡಗಳಿಗೆ ಓಡಿಹೋಗುತ್ತಿದ್ದರು. ಉತ್ತರ ಹಿಂದೂಸ್ಥಾನದಲ್ಲಿ ಶತ್ರುಗಳ ಕಾಟ ಹೆಚ್ಚಾಗಲು ಇವರು ದಕ್ಷಿಣಕ್ಕೆ ಬಂದರು. ಅಲ್ಲಿಗೂ ವೈರಿಗಳು ಬರಲು ಇವರು ಪೂರ್ವಘಟ್ಟಗಳನ್ನು ಹಾರಿ, ಈಶಾನ್ಯದಿಂದ ನಮ್ಮ ನಾಡಿನ ಕಡೆಗೆ ಬಂದರು. ಇವರ ಮುಖ್ಯ ಉದ್ಯೋಗವು ಕುರಿ ಮೇಯಿಸುವುದಾಗಿತ್ತು.

ಈಗ್ಗೆ ೧೦೦೦ ವರ್ಷಗಳ ಹಿಂದೆ ನಮ್ಮ ನಾಡು ಚೋಳರಿಗೆ ಸೇರಿದ್ದಿತು. ಆಗ ಇಲ್ಲಿ ಕುರುಬರ ಯಜಮಾನನಾದ ಕೋಲ ಎಂಬುವನಿಗೆ ಉಳುತ್ತಿದ್ದಾಗ ಹಲಕ್ಕೆ (ನೇಗಲಿಗೆ) ಒಂದು ನಿಧಿಯು ತಡೆದು, ಅಗೆದ ಮೇಲೆ ದೊರೆಯಿತು. ಚೋಳರಾಜನಿಗೆ ವರ್ತಮಾನವು ಹೋಗಿ, ಆತನು ಕೋಲನನ್ನು ರಾಜಧಾನಿಯಾದ ಕಾಂಚೀನಗರಕ್ಕೆ ಕರೆಯಿಸಿಕೊಂಡು, ಕೋಲನಿಗೆ ಸಿಕ್ಕಿದ್ದ ಐಶ್ವರ್ಯವನ್ನು ಕಸಿದುಕೊಳ್ಳಲು ಯತ್ನಿಸಿದನು. ಆದರೆ ಆ ರಾತ್ರಿ ರಾಜನ ಕನಸಿನಲ್ಲಿ ರೇಣುಕಾದೇವಿಯು ಕಾಣಿಸಿಕೊಂಡು, ಹಾಗೆ ಮಾಡಲಾಗದೆಂದು ತಿಳಿಸಿದಳು. ರಾಜನಾದ ಉತ್ತಮ ಚೋಳನು ಆಕೆಯ ಅಪ್ಪಣೆಯಂತೆ ಕೋಲನಿಗೆ ಧನವು ಸಿಕ್ಕಿದ ಕಡೆ ರೇಣುಕಾದೇವಿಯ ದೇವಾಲಯವನ್ನು ಕಟ್ಟಿಸಿ, ಊರನ್ನು ನಿರ್ಮಿಸಿ, ಆ ಪ್ರಾಂತ್ಯಕ್ಕೆ ಕೋಲನನ್ನೇ ಅಧಿಕಾರಿಯನ್ನಾಗಿ ಮಾಡಿದನು. ಕೋಲನ ಹಲದ (ನೇಗಲಿನ) ಗುರುತಿಗಾಗಿ ಆ ಊರಿಗೆ ಕೋಲಾಹಲ ಎಂದೂ, ದೇವತೆಗೆ ಕೋಲಾಹಲಮ್ಮ ಎಂದೂ, ಆ

ಪ್ರಾಂತ್ಯಕ್ಕೂ ಕೋಲಾಹಲ ಎಂದೂ ಹೆಸರುಗಳಾದುವು. ಕೋಲನ ವಂಶದವರೇ ಬಹು ಕಾಲ ಈ ಕಡೆಯ ಅಧಿಕಾರಿಗಳಾಗಿದ್ದರು.

ಚೋಳರು ಈ ನಾಡಿಗೆ ನಿಕರಿಲಿ ಚೋಳಮಂಡಲ ಎಂದು ಹೆಸರಿಟ್ಟಿದ್ದರು.

ಈಗಲೂ ಈ ಕಡೆ ಕುರುಬರು ಹೆಚ್ಚು. ಕೋಲಾರದ ಕಂಬಳಿಗಳು ಪ್ರಸಿದ್ಧವಾದುವು.

ಕೋಲಾಹಲ ಎಂಬ ಹೆಸರಿನ ಗಂಗರಾಜನು ತಮ್ಮ ಗಂಗವಾಡಿ ವಿಷಯದಲ್ಲಿ ಕಟ್ಟಿದ ಊರಿಗೆ ಕೋಲಾಹಲ ಎಂದು ಅರಸನ ಹೆಸರೇ ಇಡಲ್ಪಟ್ಟಿತೆಂದೂ ಹೇಳುತ್ತಾರೆ.

ಕೋಲಾರದ ವಾಯುಗುಣವು ಬೆಂಗಳೂರಿನ ಹಾಗೆಯೇ ಹಿತಕರವಾದುದು. ಇಲ್ಲಿಗೆ ಅಮೆರಿಕದಿಂದ ಬಂದ ಕ್ರಿಶ್ಚಿಯನ್ ಉಪದೇಶಿಗಳು ನೆಲಕಾಣಿಗಳನ್ನು ಸಂಪಾದಿಸಿ ಮರದ ಕಾರ್ಖಾನೆ, ಮಠಗಳು, ವೈದ್ಯಾಲಯಗಳನ್ನು ಮಾಡಿಕೊಂಡು ನೆಲಸಿದ್ದಾರೆ. ಸೀಮೆ ಕೋಳಿಗಳನ್ನೂ ಇಲ್ಲಿ ಹೆಚ್ಚಾಗಿ ಸಾಕುತ್ತಾರೆ.

ಕೋಲಾರಕ್ಕೆ ಪಶ್ಚಿಮದಲ್ಲಿ ಎರಡು ಮೈಲಿ ದೂರದಲ್ಲಿರುವ ಬೆಟ್ಟಗಳಿಗೆ ಶತಶೃಂಗಪರ್ವತವೆಂದು ಹೆಸರು. ಇಲ್ಲಿ ಅಂತರಗಂಗೆಯೆಂಬ ದಿವ್ಯಜಲದ ಬುಗ್ಗೆಯೂ, ಪ್ರಯಾಣಿಕರು ಇಳಿದುಕೊಳ್ಳಲು ವಸತಿಯೂ ಇವೆ.

---

## ೫. ಮುಚುಕುಂದನ ಕತೆ

ಕೃತಯುಗದಲ್ಲಿ ಮಾಂಧಾತನೆಂಬ ರಾಜನಿಗೆ ಮುಚುಕುಂದನೆಂಬ ಮಗನಿದ್ದನು. ಸೂರ್ಯವಂಶದ ಈತನು ಅರಸನಾದಮೇಲೆ ಭೂಮಿಯ ರಾಜರನ್ನೆಲ್ಲಾ ಗೆದ್ದು ಕುಬೇರನನ್ನು ಗೆಲ್ಲಲು ಹೋದನು. ಕುಬೇರನು ಅನೇಕ ಯಕ್ಷರಾಕ್ಷಸರನ್ನು ಸೃಷ್ಟಿಸಿ ಮುಚುಕುಂದನ ಬಲವನ್ನು ಹಾಳುಮಾಡಿದನು. ಆದರೆ ಮುಚುಕುಂದನು ವಶಿಷ್ಠರನ್ನು ಆಶ್ರಯಿಸಿ ಅನೇಕ ಶಕ್ತಿಗಳನ್ನು ಪಡೆದು ಕುಬೇರನನ್ನು ಸೋಲಿಸಿಯೇ ಬಿಟ್ಟನು.

ಆಗ ಕುಬೇರನು "ಅಯ್ಯಾ ರಾಜನೆ, ನೀನೆಂತಹ ಕ್ಷತ್ರಿಯನು? ಬ್ರಾಹ್ಮಣರ ಸಹಾಯದಿಂದ ಶತ್ರುವನ್ನು ಜಯಿಸುವುದು ಒಂದು ಸಾಮರ್ಥ್ಯವೊ?" ಎಂದು ಹಿಯ್ಯಾಳಿಸಿದನು. ಅರಸನು, "ಎಲೈ ವೈಶ್ರವಣನೆ, ಬ್ರಾಹ್ಮಣ ಕ್ಷತ್ರಿಯರ ಒಗ್ಗಟ್ಟಿನಿಂದಲೇ ರಾಜ್ಯಕ್ಕೆ ಕ್ಷೇಮ. ರಾಜನೀತಿಯಲ್ಲಿ ಇದು ಅತ್ಯಾವಶ್ಯಕವೂ ಅನಿವಾರ್ಯವೂ ಆದುದು" ಎಂದು ಕುಬೇರನಿಗೇ ಬುದ್ಧಿ ಹೇಳಿದನು.

ದೇವತೆಗಳೂ ಸಹ ರಾಕ್ಷಸರ ಮೇಲಿನ ಯುದ್ಧಗಳಲ್ಲಿ ಮುಚುಕುಂದನ ಸಹಾಯವನ್ನು ಕೋರುತ್ತಿದ್ದರು. ಕ್ಷೀರಸಮುದ್ರವನ್ನು ಕಡೆಯುವಾಗಲೂ, ಕುಮಾರಸ್ವಾಮಿಯು ತಾರಕಾಸುರನನ್ನು ಕೊಲ್ಲುವಾಗಲೂ ಮುಚುಕುಂದನು ಸಹಾಯಮಾಡಿದನು. ಕಡೆಗೆ ದೇವತೆಗಳು ಮತ್ತೂ ಮೆಚ್ಚಿ, "ಅಯ್ಯಾ ದೊರೆಯೆ, ನಮ್ಮಿಂದ ಕೊಡಲು ಸಾಧ್ಯವಲ್ಲದ ಮೋಕ್ಷವೊಂದನ್ನು ಬಿಟ್ಟು ನಿನಗೆ ಬೇಕಾದ ಏನನ್ನಾದರೂ ಕೇಳು, ಕೊಡುವೆವು" ಎಂದರು.

ಮುಚುಕುಂದನು "ಅನಿಮಿಷರೇ, ಮೋಕ್ಷವನ್ನು ಕೊಡುವವನು ಭಗವಂತನೊಬ್ಬನೇ ಸರಿ. ಈಗಿನ ಯುದ್ಧಗಳಿಂದ ನನಗೆ ಆಯಾಸವಾಗಿದೆ. ಈಗ ನನಗೆ ಒಳ್ಳೆಯ ವಿಶ್ರಾಂತಿಯು ಬೇಕು. ನನಗೆ ದೀರ್ಘನಿದ್ರೆಯನ್ನು ಅನುಗ್ರಹಿಸಿರಿ. ನನ್ನ ನಿದ್ರಾಭಂಗ ಮಾಡಿದವನು ಬೂದಿಯಾಗಲಿ. ಇದೇ ನನ್ನ ಕೋರಿಕೆ" ಎಂದನು.

ದೇವತೆಗಳು "ತಥಾಸ್ತು" ಎಂದರು. ಅರಸನು ಒಂದು ಗವಿಯೊಳಕ್ಕೆ ಹೋಗಿ ಮಲಗಿದನು. ಯುಗಗಳಾದರೂ ಏಳಲೇ ಇಲ್ಲ.

ತ್ರೇತೆಯು ಕಳೆದು ದ್ವಾಪರವೂ ಮುಗಿಯುತ್ತ ಬಂದಿತು. ಜರಾಸಂಧನ ಆಪ್ತನಾದ ಕಾಲಯವನನು ಶ್ರೀಕೃಷ್ಣನನ್ನೇ ಹೆದರಿಸಿ ಅಟ್ಟಿಸಿಕೊಂಡು ಬಂದನು. ಕೃಷ್ಣನು ನುಸುಳಿ ನುಸುಳಿ ಓಡುತ್ತ ಕಡೆಗೆ ಒಂದು ಗವಿಯೊಳಕ್ಕೆ ನುಗ್ಗಿದನು. "ಕೃಷ್ಣನು ಸಿಕ್ಕಿಬಿಟ್ಟನು ಹೋ! ಓಹೋ!" ಎಂದು ಕೇಕೆ ಹಾಕುತ್ತ ಕಾಲಯವನನೂ ಒಳಕ್ಕೆ ನುಗ್ಗಿದನು. ಆದರೆ ಹಿಂದೆ ಕತ್ತಲಿನಲ್ಲಿ ನಿಂತಿದ್ದ ಕೃಷ್ಣನನ್ನು ಕಾಣದೆ, ಅಲ್ಲಿ

ಮಲಗಿದ್ದವನನ್ನೇ ಕೃಷ್ಣನೆಂದು ಭಾವಿಸಿ, "ಕಳ್ಳ ಕೃಷ್ಣಾ, ಸಿಕ್ಕಿದೆಯಾ? ಎದ್ದೇಳು! ನಿನ್ನನ್ನು ಅಗಿದುಬಿಟ್ಟೇನು! ಸಿಗಿದುಬಿಟ್ಟೇನು! ಹೂ, ಏಳು!" ಎಂದು ಒದೆದನು.

ಮಲಗಿದ್ದವನು ಎದ್ದು, ದುರದುರನೆ ನೋಡುತ್ತಲೇ, ನಿಂತಲ್ಲಿಯೇ ಕಾಲಯವನನು ಭಸ್ಮವಾದನು. ಮಲಗಿದ್ದವನು ಮುಚುಕುಂದನು.

ಅನಂತರ ಮುಚುಕುಂದನು ಶ್ರೀಕೃಷ್ಣನನ್ನು ಕಂಡು, ಪರಮಾತ್ಮನ ಗುರುತು ಹಿಡಿದು, ಆನಂದದಿಂದ ಹೊಗಳಿದನು. ಆತನ ತಪ್ಪುಗಳು ಕ್ಷಮಿಸಲ್ಪಟ್ಟುವು. ಭಗವಂತನ ಅನುಗ್ರಹದಂತೆ ಆತನು ಅಲ್ಲಿಯೇ ತಪಸ್ಸುಮಾಡಿದನು.

ತನಗೆ ದೇಹಶಕ್ತಿಯು ಕುಂದಿರುವುದರಿಂದ ಕಾಶಿಗೆ ಹೋಗಲು ಕಷ್ಟವೆಂದೂ ತಾನಿರುವಲ್ಲಿಯೇ ಗಂಗಾಸ್ನಾನವನ್ನನುಗ್ರಹಿಸಬೇಕೆಂದೂ ಬೇಡಿಕೊಂಡನು. ದೇವನು ಅಲ್ಲಿಯೇ ಉದ್ಭವಿಸಿದ್ದ ಒಂದು ಚಿಲುಮೆಯನ್ನು ತೋರಿಸಿ "ಈ 'ಅಂತರಗಂಗೆ'ಯಲ್ಲಿ ಸ್ನಾನಮಾಡಿದರೆ ನಿನಗೆ ಗಂಗಾಸ್ನಾನದ ಫಲವು ಬರುವುದು" ಎಂದು ಹೇಳಿ ತೆರಳಿದನು.

ಮುಚುಕುಂದನು ಅಲ್ಲಿಯೇ ಮತ್ತಷ್ಟು ಕಾಲ ತಪಸ್ಸನ್ನಾಚರಿಸಿ ಸಾಯುಜ್ಯವನ್ನು ಪಡೆದನು.

ಆತನು ತಪಸ್ಸುಮಾಡಿದ ಬೆಟ್ಟಗಳಿಗೆ ಶತಶೃಂಗಗಿರಿಯೆಂದು ಹೆಸರು. ಅದನ್ನೇ ಈಗ ಕೋಲಾರದ ಬೆಟ್ಟಗಳು ಎನ್ನುತ್ತೇವೆ. ಈ ನಾಡಿನ ದಕ್ಷಿಣದ ಒಂದು ಗುಡ್ಡವನ್ನು "ಮುಚುಕುಂದಗಿರಿ" ಎಂದು ಕರೆಯುವೆವು. ಅಲ್ಲಿಯೇ ಇರುವ ತೇರಹಳ್ಳಿಯ ಬಳಿ ಮುಚುಕುಂದನು ಇದ್ದ ಗವಿಯು ಇದೆ. ಅನತಿದೂರದಲ್ಲಿ "ಮುಚುಕುಂದವರದ"ನ ದೇವಾಲಯವು (ಕೊಂಡರಾಜನಹಳ್ಳಿಯಲ್ಲಿ) ಇದೆ.

ಅಂತರಗಂಗೆಯೂ ಸಮೀಪದಲ್ಲಿದೆ. ಮುಚುಕುಂದ ಕ್ಷೇತ್ರವೂ ಅಂತರಗಂಗೆಯೂ ಎರಡೂ ಕೋಲಾರದ ಊರಿಗೆ ಎರಡೂವರೆ ಮೈಲಿಗಳ ದೂರದಲ್ಲಿವೆ. ಬಹು ರಮ್ಯಪ್ರದೇಶಗಳೆಂದೂ, ಪುಣ್ಯಕರ ತೀರ್ಥಗಳೆಂದೂ ಹೆಸರಾಗಿವೆ.

ತೇರುಹಳ್ಳಿಯ ಬಳಿಯ ಚಿಲುಮೆಗೆ "ಶಿವಗಂಗೆ" ಎಂದು ಹೆಸರು. ಇಲ್ಲಿ ಹಾಳುಬಿದ್ದ ಭವ್ಯವಾದ ದೊಡ್ಡ ಶಿವಾಲಯವೊಂದಿದೆ.

---

## ೬. ಸೀತಿ

ಕೋಲಾರ ತಾಲೂಕಿನ ವೇಮುಗಲ್ಲು ಹೋಬಳಿಯಲ್ಲಿ "ಸೀತಿ" ಎಂಬ ಒಂದು ಗುಡ್ಡ ಇದೆ. ಇದಕ್ಕೆ ಹಿಂದಿನ ಕಾಲದಲ್ಲಿ "ಸೀಹತಿ" ಎಂದೂ, "ಶ್ರೀಪತಿ" ಎಂದೂ ಹೆಸರುಗಳಿದ್ದುವು. ಈ ಗುಡ್ಡದ ಮೇಲೆ ಬಿದ್ದಷ್ಟು ಮಳೆಯ ನೀರೂ ಇಂಗಿಹೋಗುವುದು. ಈ ಗುಡ್ಡವೆಲ್ಲಾ ಬರಿಯ ಬೂದಿಯ ರಾಶಿಯಾಗಿರುವುದೇ ಇದಕ್ಕೆ ಕಾರಣವಂತೆ. ಭಸ್ಮಾಸುರನು ಬೂದಿಯಾದ ಸ್ಥಳವು ಇದೇ ಎನ್ನುವರು.

ಬಹು ಪೂರ್ವದಲ್ಲಿ ಭಸ್ಮಾಸುರನು ತನ್ನ ತಪಸ್ಸಿನಿಂದ ಈಶ್ವರನನ್ನು ಮೆಚ್ಚಿಸಿದನು. ಮತ್ತು ಇವನು ಕೇಳಿದಂತೆ ಈಶ್ವರನು ಈ ರಾಕ್ಷಸನು ಯಾರ ತಲೆಯ ಮೇಲೆ ಕೈಹಿಡಿದರೂ ಅವರು ಕೂಡಲೇ ಭಸ್ಮವಾಗುವಂತೆ ವರಪ್ರದಾನ ಮಾಡಿದನು.

ತಕ್ಷಣವೇ ರಾಕ್ಷಸನ ಬುದ್ಧಿಯು ಕೆಟ್ಟಿತು. ಅವನು ತನ್ನ ಸಾಮರ್ಥ್ಯವನ್ನು ಈಶ್ವರನ ಮೇಲೆಯೇ ಪರೀಕ್ಷಿಸಲು ಯತ್ನಿಸಿದನು. ಕೈಯನ್ನು ತನ್ನ ಮೇಲೆ ಹಿಡಿಯುವನೆಂದು ತೋರಿದ ಕೂಡಲೇ ಈಶ್ವರನು ಓಡತೊಡಗಿದನು. ಮದಾಂಧನಾದ ರಾಕ್ಷಸನ ಮುಂದೆ ಮಹದೇವನಾದ ಶಂಕರನು ಬಹು ದೂರ ಓಡಿದನು.

ದಾರಿಯಲ್ಲಿ ಗೌತಮ ಋಷಿಯು ಒಂದು ಗವಿಯಲ್ಲಿ ತಪಸ್ಸಿಗೆ ಕುಳಿತಿದ್ದನು. ಈಶ್ವರನು ಪ್ರಯಾಸಪಟ್ಟು, ಅಸುರನನ್ನು ಹಿಂದೆ ಮರೆಯಿಸಿ ಗೌತಮನ ಹಿಂದೆ ಸೇರಿಬಿಟ್ಟನು.

ರಾಕ್ಷಸನಿಗೆ ಈಶ್ವರನು ಕಾಣಿಸಲಿಲ್ಲ. ಬಳಿಯಲ್ಲಿಯೇ ಉಳುತ್ತಿದ್ದ ಒಬ್ಬ ರೈತನನ್ನು ರಾಕ್ಷಸನು "ಈ ಕಡೆ ಓಡಿಬಂದವನು ಎಲ್ಲಿ ಹೋದ?" ಎಂದು ಕೇಳಿದನು. ರೈತನು ಹೆದರುತ್ತ "ಅಗೋ ಆ

ಗವಿಯ ಕಡೆಗೆ" ಎಂದು ತೋರಿಸಿದನು. ರಾಕ್ಷಸನು "ಹೋ!" ಎಂದು ಅರಚುತ್ತ ಗವಿಯ ಕಡೆಗೆ ನುಗ್ಗಿದನು.

ಈಶ್ವರನಿಗೆ ಕಳವಳವಾಯಿತು. "ದುರುಳರಿಗೆ ಎಷ್ಟುಮಾತ್ರವೂ ಸಹಾಯಮಾಡಬಾರದು" ಎಂದುಕೊಳ್ಳುತ್ತ ವಿಷ್ಣುವನ್ನು ಧ್ಯಾನಿಸಿದನು.

ಒಡನೆಯೇ ವಿಷ್ಣುವು ಒಬ್ಬ ಸುಂದರಿಯಂತೆ ರಾಕ್ಷಸನ ಕಣ್ಣಿಗೆ ಕಾಣಿಸಿದನು. ಕೂಡಲೇ ಆ ದುಷ್ಟನು ತಾನು ಬಂದ ಕಾರ್ಯವನ್ನು ಮರೆತು ಈ ಮೋಹಿನಿಗೆ ಮರುಳಾದನು. ಆಕೆಯ ಒಲವು ವೈಯ್ಯಾರಗಳಿಗೆ ಮನಸೋತು ಆಕೆಯ ಆಜ್ಞೆಯಂತೆ ತನ್ನ ಕೈಗಳನ್ನು ತನ್ನ ಮೇಲೆಯೇ ಎತ್ತಿ ಹಿಡಿದುಕೊಂಡನು. ತಕ್ಷಣ ಅಲ್ಲಿಯೇ ಭಸ್ಮವಾದನು. ಅವನ ಬೂದಿಯೇ ಒಂದು ಗುಡ್ಡದಷ್ಟಾಯಿತು.

ವಿಷ್ಣುವನ್ನು ಈಶ್ವರನು ಮೆಚ್ಚಲು ವೀರಭದ್ರನು ಅವತರಿಸಿದನು. ತಾನು ಅವಿತಿದ್ದಾಗ ತೋರಿಸಿಕೊಟ್ಟ ಆ ಒಕ್ಕಲಿಗನ ಬೆರಳುಗಳನ್ನೂ, ಹಾಗೆಯೇ ಅವನ ವಂಶದವರ ಬೆರಳುಗಳನ್ನೂ ಕತ್ತರಿಸಿ ಕಾಣಿಕೆ ಗೊಳ್ಳುತ್ತ ಅಲ್ಲಿಯೇ ಇರುವಂತೆ ಈಶ್ವರನು ಆತನಿಗೆ ಅಜ್ಞಾಪಿಸಿದನು. ಕಾಲಭೈರವನು ಹಾಗೆಯೇ ಮಾಡಿ ಅಲ್ಲಿಯೇ ನೆಲಸಿದನು.

ಅಂದಿನಿಂದ ಆ ಒಕ್ಕಲಿಗ ಜನಕ್ಕೆ ಬೆರಳು ಒಕ್ಕಲಿಗರು ಎಂದು ಹೆಸರಾಯಿತು. ಹೆಬ್ಬೆಟ್ಟೂ ತೋರ್ಬೆರಳುಗಳೂ ಇಲ್ಲದಂತೆ ಆಗಲು ವ್ಯವಸಾಯಕ್ಕೆ ತುಂಬಾ ತೊಂದರೆಯಾದುದರಿಂದ ಅವರು ಕೆಲವು ಕಾಲದ ಮೇಲೆ ತಮ್ಮ ಬೆರಳು ಕಾಣಿಕೆಯನ್ನು ನಿಲ್ಲಿಸಿಬಿಟ್ಟರು. ಅವರ ಒಕ್ಕಲಗಿತ್ತಿಯರು ಮಾತ್ರ ಎಡಗೈಯ ಕಿರುಬೆರಳನ್ನು ಕಾಣಿಕೆಯನ್ನಾಗಿ ಸ್ವಲ್ಪ ಕಾಲದ ಹಿಂದಿನವರೆವಿಗೂ ಒಪ್ಪಿಸುತ್ತಿದ್ದರು. ಈಚೆಗೆ ಸರ್ಕಾರದವರು ಇದನ್ನೂ ನಿಲ್ಲಿಸಿದರು.

ಸೀತಿ ಬೆಟ್ಟದಲ್ಲಿ ಕಾಲಭೈರವನ ದೇವಾಲಯವು ಈಗಲೂ ಹಾಗೆಯೇ ಇದೆ. ಅಲ್ಲಿನ ಸ್ಥಳ ಪರಿಚಯಮಾಡಿಕೊಡುವ ಅನೇಕ ಶಾಸನಗಳು ಇನ್ನೂ ಇವೆ. ಬೆರಳು ಒಕ್ಕಲಿಗರಲ್ಲಿ ಬಹು ಜನಕ್ಕೆ

ಮೊರಸು ಒಕ್ಕಲಿಗರೆಂದೂ ಹೆಸರು. ಕೋಲಾರ ನಾಡಿನಲ್ಲಿ ಮೊರಸು ಒಕ್ಕಲಿಗರು ಹೆಚ್ಚು.

ಸೀತಿಯು ಅವರ ಯಾತ್ರಾಸ್ಥಳವಾಗಿದೆ.

---

## ೭. ಭೈರಸಾಗರ

ಗುಡಿಬಂಡೆಯ ಊರ ಮುಂದಿನ ದೊಡ್ಡ ಕೆರೆಗೆ ಭೈರಸಾಗರವೆಂದು ಹೆಸರು. ಆವಲಕೊಂಡ ಎಂಬ ಬೆಟ್ಟದಲ್ಲಿ ಹುಟ್ಟಿ ಚಿತ್ರಾವತಿಗೆ ಉಪನದಿಯಾಗಿರುವ ವೃಷಭಾವತೀ ನದಿಗೆ ಅಣೆಯನ್ನು ಹಾಕಿ ಈ ಕೆರೆಯನ್ನು ಮಾಡಿದ್ದಾರೆ.

ಗುಡಿಬಂಡೆಯ ಸುತ್ತುಮುತ್ತಲಿನ ಬೆಟ್ಟಗಳು ಬಹು ದಟ್ಟವಾದ ಪೊದೆಗಳಿಂದ ಕೂಡಿ, ಕಡಿದಾಗಿಯೂ ರಮ್ಯವಾಗಿಯೂ ಇವೆ. ಊರ ಬೆಟ್ಟದ ಮೇಲೆ ಭದ್ರವೂ ಪುಟ್ಟದೂ ಆದ ಕೋಟೆಯಿದ್ದು, ರಾಮೇಶ್ವರ ದೇವಾಲಯ, ನೀರಿನ ದೊಣೆ, ಮದ್ದಿನ ಮನೆ, ಪಾಳೆಯಗಾರರ ಕಣಜ ಮುಂತಾದುವು ಇವೆ. ಬೆಟ್ಟದ ಮೇಲಿನಿಂದ ಕಾಣುವ ಸುಂದರವಾದ ಸಂಜೆಯ ನೋಟಕ್ಕೆ ಮರುಳಾಗಿ ಬುದ್ಧಿವಂತರು ಈ ಪ್ರಾಂತ್ಯವನ್ನು "ಕೋಲಾರದ ಸ್ವಿಟ್ಜರ್ಲೆಂಡ್" ಎಂದಿದ್ದಾರೆ.

ಈಗ್ಗೆ ಮುನ್ನೂರು ವರ್ಷಗಳ ಹಿಂದೆ ಈ ಪ್ರದೇಶವು ಯುದ್ಧಕಗ್ಗವಾಗಿದ್ದಿತು. ಪುಂಡರೂ ಠಕಾಯಿತರೂ ಈ ಗುಡ್ಡಗಾಡುಗಳಲ್ಲಿ ಸೇರಿಕೊಂಡು ಸುತ್ತುಮುತ್ತಿನ ಜನರಿಗೆ ಬಹು ಹಾವಳಿ ಮಾಡುತ್ತಿದ್ದರು. ಆ ವೇಳೆಗೆ ಮರಾಟಾ ರಾಜ್ಯಸ್ಥಾಪಕನಾದ ಶಿವಾಜಿಯು ತೀರಿಹೋಗಲು ಆತನ ಮಗನು ತನ್ನ ರಾಜ್ಯಕ್ಕೆ ದೂರದಲ್ಲಿರುವ ಬೆಂಗಳೂರನ್ನು ಚಿಕ್ಕದೇವರಾಜ ಒಡೆಯರಿಗೆ ಮಾರಬೇಕೆಂದಿದ್ದನು. ಆದರೆ ಮರಾಟಿಯವರ ಮತ್ತೊಬ್ಬ ಸರದಾರನೂ, ಔರಂಗಜೇಬನ ದಳವಾಯಿಯಾದ ಕಾಸಿಂಖಾನನೂ ಹರಾಜಿನ ವೇಳೆಗೆಂದು ಹೊರಟರು. ಕಾಸಿಂಖಾನನು ತನ್ನ ದಾರಿಯಲ್ಲಿರುವ ಪ್ರದೇಶವನ್ನೆಲ್ಲ ಗೆದ್ದು ಬರುತ್ತ ದೊಡ್ಡಬಳ್ಳಾಪುರವನ್ನು ತನ್ನ ಕೈಕೆಳಗಿನ ಸೇನಾನಾಯಕನಾದ ಆಲಿ

ಕೂಲಿಖಾನನಿಗೂ, ಗುಡಿಬಂಡೆಯ ಪ್ರಾಂತ್ಯವನ್ನು ಹಾವಳಿ ಭೈರೇಗೌಡನಿಗೂ ಜಹಗೀರುಗಳಾಗಿ ಕೊಟ್ಟನು.

ಹಾವಳಿ ಭೈರೇಗೌಡನು ಗುಡ್ಡಗಾಡಿನಲ್ಲಿ ಸೇರಿದ್ದ ದರೋಡೆಗಾರರನ್ನೆಲ್ಲಾ ತನ್ನ ಬುದ್ಧಿವಂತಿಕೆಯಿಂದ ತನ್ನವರನ್ನಾಗಿ ಮಾಡಿಕೊಂಡನು. ಕಂಡವರ ಮನೆ ಕೆಡಿಸಿ ಕಾಯುವನ್ನು ಹೊರುವುದಕ್ಕಿಂತ ಕಷ್ಟಪಟ್ಟು ಬೇಸಾಯ ಮಾಡುವುದೇ ಉತ್ತಮವೆಂದು ಅವರಿಗೆ ಮನಗಾಣಿಸಿದನು. ಅದರಂತೆ ಅವರೂ ಒಪ್ಪಿ ಆತನ ಮುಂದಾಳುತನದಲ್ಲಿಯೇ ಒಕ್ಕಲುತನವನ್ನು ಪ್ರಾರಂಭಿಸಿದರು. ಹಳೆಯ ಗುಡಿಬಂಡೆಯನ್ನು ಮೊದಲು, ಅನಂತರ (ಊರ ಬಳಿ ಇರುವ) ಬೆಟ್ಟವನ್ನು ಭದ್ರಪಡಿಸಿದರು. ಸಾಧ್ಯವಾದ ಕಾಡುಮೇಡುಗಳನ್ನು ಸಲಸಮಮಾಡಿ ಫಲವತ್ತಾದ ಜಮೀನನ್ನಾಗಿ ಮಾರ್ಪಡಿಸಿದರು. ಹೊಲಗಳೂ ತೋಟಗಳೂ ಆದವು.

ಭೈರೇಗೌಡನು ತನ್ನನ್ನು ನಂಬಿದವರಿಗೆ ತರಿ ಜಮೀನುಗಳನ್ನು ಮಾಡಿಕೊಡಲು ಯೋಚಿಸಿ ಕುಶಾವತಿಗೆ ಕಟ್ಟೆಯನ್ನು ಕಟ್ಟಿ ಕೆರೆಯನ್ನು ಮಾಡಿಸತೊಡಗಿದನು. ಒಗ್ಗಟ್ಟಿನಿಂದ ಎಲ್ಲರೂ ದುಡಿಯಲು ಬಹು ಬೇಗ ಎತ್ತರವಾದ ಏರಿಯು ಎದ್ದಿತು. ಮಳೆ ಬಂದೊಡನೆಯೇ ನೀರೂ ತುಂಬಿಕೊಂಡಿತು. ಎಲ್ಲರೂ ಸಂತೋಷದಿಂದ ತುಂಬಿದ ಕೆರೆಗೆ ಗಂಗಾಪೂಜೆಯನ್ನು ಸಲ್ಲಿಸಿದರು.

ಮಾರನೆಯ ಬೆಳಗ್ಗೆ ನೋಡುವಾಗ್ಗೆ ಏರಿಯ ನಟ್ಟನಡುವೆ ದೊಡ್ಡ ಬಿರುಕು ಒಡೆದು ಹಿಂದಿನ ರಾತ್ರಿಯೇ ನೀರೆಲ್ಲವೂ ನುಗ್ಗಿಹೋಗಿ ಆಚೆಯ ಭೂಮಿಯನ್ನೂ ಕೆಡಿಸಿಬಿಟ್ಟಿದ್ದಿತು.

ಗೌಡನಿಗೆ ಕಾರಣ ಹೊಳೆಯಲಿಲ್ಲ. ಯಾರು ಯಾರನ್ನೋ ವಿಚಾರ ಮಾಡಿದನು. ಒಬ್ಬ ತುಂಬು ಬಸುರಿಯನ್ನು ಬಲಿಗೊಟ್ಟರೆ ಕಟ್ಟೆಯು ನಿಲ್ಲುವುದೆಂದು ಕಡೆಗೆ ತಿಳಿಯಿತು. ಆದರೆ ಬಲಿದಾನವನ್ನು ಕೊಡಲು ಮುಂದೆ ಬರುವವರು ಯಾರು?

ಗೌಡನಿಗೆ ಪೇಚಾಟಕ್ಕಿಟ್ಟಿತು. ಆಗ ಗೌಡನ ಹೆಂಡತಿ ಗರ್ಭಿಣಿಯಾಗಿದ್ದಳು. ಗೌಡತಿಯೇ ತುಂಬ ಧೈರ್ಯದಿಂದ ಎಲ್ಲರ ಎದುರಿಗೂ

ನಿಂತು 'ನನ್ನ ಗಂಡನು ಕಷ್ಟಪಟ್ಟು ಈ ರಾಜ್ಯವನ್ನು ಸಂಪಾದಿಸಿದ್ದಾನೆ. ಆತನ ಸಾಹಸದಿಂದಲೇ ಈ ಕೆರೆಯೂ ಕಟ್ಟಿದೆ. ನನ್ನ ಗಂಡನ ಹೆಸರನ್ನೂ ಕೃತಿಯನ್ನೂ ಉಳಿಸುವುದು ನನ್ನ ಕರ್ತವ್ಯ. ನಾನೇ ಈಗ ಬಲಿಯಾಗುತ್ತೇನೆ' ಎಂದು ನುಡಿದಳು. ಯಾರು ಯಾರೋ ಎಷ್ಟೆಷ್ಟೋ ಬಗೆಯಾಗಿ ಹೇಳಿದರೂ ಕೇಳದೆ ತಾನೇ ಹೋಗಿ ಒಡೆದಿದ್ದ ಕಟ್ಟೆಯ ನಡುವೆ ನಿಂತು ಬಲಿಯಾದಳು. ಮಣ್ಣಿನ ರಾಶಿಗಳು ಬಿದ್ದು ಕಟ್ಟೆಯು ಮಟ್ಟವಾಗಿ ಎದ್ದಿತು.

ಏರಿಯು ಎದ್ದಿತು, ಏರಿಯು ನಿಂತಿತು. ಈಗ ಆ ಭೈರಸಾಗರದ ನೀರಿನಿಂದ ಸಹಸ್ರಾರು ಎಕರೆಯ ಫಲವತ್ತಾದ ಭೂಮಿಯು ತಪ್ಪದೆ ಪ್ರತಿವರ್ಷವೂ ಬೇಸಾಯವಾಗುತ್ತಿದೆ. ಸಾವಿರಾರು ಜನರು ಅದರಿಂದ ಬದುಕುತ್ತಿದ್ದಾರೆ.

ಗೌಡತಿಗೆ ಏರಿಯ ಮೇಲೆ ಗುಡಿಯನ್ನು ಕಟ್ಟಿದರು. ಅಲ್ಲಿ ಈಗಲೂ ವರ್ಷಂಪ್ರತಿ ಪೂಜೆಯು ನಡೆಯುವುದು. ತಿಳಿದೋ ತಿಳಿಯದೆಯೋ ಮಂದಿಯು ಭಕ್ತಿಯಿಂದ ಗಂಡನಿಗಾಗಿಯೂ ಸಂಜದವರಿಗಾಗಿಯೂ ಪ್ರಾಣವನ್ನು ಕೊಟ್ಟ ಮಹಾತಾಯಿಯನ್ನು ನೆನೆಸುವರು.

ಗೌಡನು ಬೇರೆ ಮದುವೆಯಾಗಲಿಲ್ಲ. ಮಕ್ಕಳಿಲ್ಲದೆಯೇ ಸತ್ತನು. ಆತನ ನಂತರ ಹೆಂಡತಿಯ ತಮ್ಮ ರಾಮಗೌಡನು ಮುಂದೆ ಯಜಮಾನನಾದನು.

---

## ೮. ವಿದುರಾಶ್ವತ್ಥ

ಕೌರವರೂ ಪಾಂಡವರೂ ಜೂಜಾಡಿ, ಪಾಂಡವರು ವನವಾಸ ಅಜ್ಞಾತವಾಸಗಳನ್ನು ಮಾಡಿದರು. ಆ ಬಳಿಕ ಅವರು ಕೌರವರನ್ನು ತಮ್ಮ ಹಕ್ಕಾದ ಅರ್ಧ ರಾಜ್ಯವನ್ನು ಕೊಡಿರೆಂದು ಕೇಳಿದರು. ಕೌರವರು ಒಂದು ಗೇಣು ಭೂಮಿಯನ್ನಾದರೂ ಕೊಡಲಾರೆವೆಂದರು. ಎರಡು ಪಕ್ಷದವರಿಗೂ ಸಂಧಿಮಾಡಲು ಶ್ರೀಕೃಷ್ಣನು ಹಸ್ತಿನಾವತಿಗೆ

ಹೊರಟನು. ರಾಯಭಾರಿಗಾಗಿ ಕೌರವರು ಬೇಕಾದಷ್ಟು ಸಿದ್ಧತೆಗಳನ್ನು ಮಾಡಿದರು. ಆದರೆ ಶ್ರೀಕೃಷ್ಣನು ರಾಜಮರ್ಯಾದೆಯ ಆಡಂಬರಗಳಿಂದ ಮೆರೆಯುವ ಅರಮನೆಗೆ ಹೋಗದೆ, ಪ್ರೀತಿ ಭಕ್ತಿಗಳಿಂದ ತುಂಬಿದ ವಿದುರನೆಂಬ ಬಡವನ ಮನೆಗೆ ತಾನಾಗಿಯೇ ಹೋದನು. ಪರಮ ಭಕ್ತನಾದ ವಿದುರನು ವಿಶ್ವಾಸದಿಂದ ಅರ್ಪಿಸಿದ ಹಣ್ಣು ಹಾಲುಗಳನ್ನೇ ಸ್ವಾಮಿಯು ಆನಂದದಿಂದ ಉಂಡನು.

ವಿದುರನು ಪಾಂಡವ ಕೌರವರಿಬ್ಬರಿಗೂ ಬಂಧುವೂ ಹಿತೈಷಿಯೂ ಆಗಿದ್ದನು. ಆದುದರಿಂದಲೇ ಧೃತರಾಷ್ಟ್ರನು ವಿದುರನ ಸಲಹೆಯನ್ನು ಕೇಳಿದಾಗ ಆತನು ಮರೆಮಾಚದೆ ರಾಜಧರ್ಮವನ್ನೂ ಲೌಕಿಕ ನ್ಯಾಯವನ್ನೂ ವಿವರಿಸಿ, ಅವರ ಭಾಗವನ್ನು ಪಾಂಡವರಿಗೆ ಕೊಡುವುದೇ ಸರಿ ಎಂದು ಹೇಳಿದನು. ಆಗ ವಿದುರನು ಉಪದೇಶಿಸಿದ ಹಿತವಾದಗಳು "ವಿದುರ ನೀತಿ" ಎಂಬ ಪುಸ್ತಕದಲ್ಲಿ ವಿಶದವಾಗಿವೆ.

ದುರ್ಯೋಧನಾದಿ ದುಷ್ಟರಿಗೆ ವಿದುರನ ನೀತಿಮಾರ್ಗವು ಒಪ್ಪಲಿಲ್ಲ. ಅವರುಗಳು ವಿದುರನನ್ನು ಹಿಯ್ಯಾಳಿಸಿ, ನಿಂದಿಸಿ, ಸ್ವಜನದ್ರೋಹಿ ಎಂದು ಹೇಳಿ, ಏನೇ ಆದಾಗ್ಯೂ ತಮ್ಮ ಹಠದಿಂದ ಲೇಶವೂ ಕದಲುವುದಿಲ್ಲವೆಂದು ಹೇಳಿಬಿಟ್ಟರು.

ಇವರ ದುಸ್ಸಂಗವು ವಿದುರನಿಗೆ ಅಸಹ್ಯವಾಯಿತು. ದೇಶಾಟನ ಮಾಡುವುದಾಗಿ ಹೇಳಿ ಹೊರಟವನು ಕೌರವರ ಕಾಲದಲ್ಲಿ ಪುನಃ ಹಸ್ತಿನಾವತಿಗೆ ಬರಲೇ ಇಲ್ಲ. ಪುಣ್ಯಭೂಮಿಯಾದ ಭಾರತವರ್ಷದ ಅನೇಕ ಕಡೆ ಇರುವ ದಿವ್ಯತೀರ್ಥಗಳನ್ನೂ ಪವಿತ್ರಕ್ಷೇತ್ರಗಳನ್ನೂ ಸುತ್ತುತ್ತ ದೇವತಾರಾಧನೆ ಮಾಡಿಕೊಂಡು ಇದ್ದನು. ಉದ್ಧವನೆಂಬುವನಿಂದ ಕುರುಕ್ಷೇತ್ರದ ವರ್ತಮಾನವು ತಿಳಿದಾಗ ಬಹು ವಿಷಾದಪಟ್ಟನು. ಆಗ ಉದ್ಧವನು ವೇದಾಂತವನ್ನು ಬೋಧಿಸಿ ಆತನ ದುಃಖವನ್ನು ಪರಿಹರಿಸಿದನು. ಮತ್ತು ಇತರ ಅನೇಕ ಮಹನೀಯರಿಂದ ಭಾಗವತವನ್ನೂ ವೇದಸೂಕ್ತಗಳನ್ನೂ ಕೇಳಿ ವಿದುರನು ಮನಸ್ಸಮಾಧಾನ ಹೊಂದಿದನು.

ದ್ವಾಪರಾಂತ್ಯದಲ್ಲಿ ವಿದುರನು ಕ್ಷೇತ್ರದರ್ಶನ ಮತ್ತು ತೀರ್ಥ ಯಾತ್ರೆಗೆ ಹೊರಟಿದ್ದಾಗ ದಕ್ಷಿಣ ದೇಶದಲ್ಲಿರುವ ಉತ್ತರ ಪಿನಾಕಿನೀ ತೀರದಲ್ಲಿ ಕೆಲವು ಕಾಲ ನೆಲಸಿದನು. ನದಿಯ ತೀರದಲ್ಲಿ ಒಂದು ಅಶ್ವತ್ಥವೃಕ್ಷವನ್ನು ನೆಟ್ಟು, ಪೋಷಿಸುತ್ತ, ಪೂಜಿಸುತ್ತ ಇದ್ದನು. ಸಾವಿರಾರು ವರ್ಷಗಳಾದರೂ ಆ ಗಿಡವು ನಾಶವಾಗದೆ ಹೊಸ ಹೊಸ ದಾಗಿ ಬೇರುಗಳನ್ನೂ ಚಿಗುರುಗಳನ್ನೂ ಹಾಕಿಕೊಂಡು ಈಗಲೂ ನಿಂತಿದೆಯೆಂದೂ ಅದೇ ವಿದುರಾಶ್ವತ್ಥವೆಂದೂ ಪ್ರತೀತಿ. ಈಗಲೂ ಅನೇಕರು ಈ ಅಶ್ವತ್ಥವೃಕ್ಷವನ್ನು ಪೂಜಿಸುವುದಕ್ಕೂ ಮಾಡಿಕೊಂಡಿ ರುವ ಹರಕೆಗಳನ್ನು ಸಲಿಸುವುದಕ್ಕೂ ನೂರಾರು ಮಂದಿ ಈ ಸ್ಥಳಕ್ಕೆ ಬರುತ್ತಾರೆ.

ವಿದುರನು ನೆಲಸಿದ್ದ ಹರದಾರಿಯಲ್ಲಿ ವಿದುರೂರು ಎಂಬ ಗ್ರಾಮವಾಯಿತು. ಮುಂದೆ ಪಾಳೆಯಗಾರನೊಬ್ಬನು ಅದನ್ನು ತನ್ನ ಮಗಳಾದ ಗೌರಮ್ಮ ಎಂಬಾಕೆಗೆ ಬಳುವಳಿಯಾಗಿ ಕೊಟ್ಟನು. ಆಗ ಅದಕ್ಕೆ ಗೌರಿ ವಿದುರೂರು ಎಂದು ಹೆಸರಾಯಿತು. ಮುಂದೆ ಹೈದರನು ಬಿದನೂರು ಸಂಸ್ಥಾನವನ್ನು ಜಯಿಸಿ ಬಂದಮೇಲೆ, ಈ ಊರಿನ ಹೆಸರನ್ನು ಗೌರಿಬಿದನೂರು ಎಂದು ಬದಲಾಯಿಸಿದನು. ಅದೇ ಹೆಸರು ಈಗ ಗೌರಿಬಿದನೂರು ಎಂದಾಗಿದೆ.

ವಿದುರಾಶ್ವತ್ಥವು ಗೌರಿಬಿದನೂರಿಗೆ ಹರದಾರಿ ದೂರದಲ್ಲಿ ದೊಡ್ಡ ಕುರುಗೋಡು ಎಂಬ ಸ್ಟೇಷನ್ನಿನ ಪಕ್ಕದಲ್ಲಿದೆ. ಎರಡೂ ಉತ್ತರ ಪಿನಾಕಿನೀ ತೀರದಲ್ಲಿವೆ.

ನಮ್ಮ ಡಿಸ್ಟ್ರಿಕ್ಟಿನಲ್ಲೆಲ್ಲಾ ಗೌರಿಬಿದನೂರು ಪ್ರಾಂತ್ಯವು ಅತಿ ತಗ್ಗಾದುದು. ಅಲ್ಲಿ ಸೆಕೆ ಹೆಚ್ಚು. ನದಿಯು ಹರಿಯುತ್ತದೆ. ನೀರಿನ ವಸತಿ ಚೆನ್ನಾಗಿದೆ. ಗದ್ದೆಗಳೂ ಜನಸಾಂದ್ರತೆಯೂ ಹೇರಳವಾಗಿವೆ. ಉತ್ತಮವಾದ ಬೆಲ್ಲವೂ ಸಕ್ಕರೆಯೂ ತಯಾರಾಗುತ್ತವೆ.

ದೊಡ್ಡಕುರುಗೋಡಿನ ಆಚೆ ಮದ್ರಾಸು ಸೀಮೆಗೆ ಸೇರಿದ ಹಿಂದೂಪುರವು ಅತ್ಯುತ್ತಮವಾದ ಒಂದು ವ್ಯಾಪಾರಸ್ಥಳವಾಗಿದೆ.

ಹೊಯ್ಸಳರ ದ್ವಾರಸಮುದ್ರವು ಮಲ್ಲಿಕ್ ಕಾಫರ್ ಎಂಬವನಿಂದ ಹಾಳಾದ ಮೇಲೆ ಹೊಯ್ಸಳರ ಅರಸನಾದ ಬಲ್ಲಾಳ ನರಸಿಂಹನು ನಮ್ಮ ನಾಡಿಗೆ ಬಂದು ಗೋರಿಬಿದನೂರಿನ ಬಳಿ ನೆಲಸಿ ಒಂದು ಊರು ಕಟ್ಟಿದನು. ಹಳೆಯಬೀಡಿನಿಂದ ಗುರುತಾಗಿ ಇದಕ್ಕೆ ಹೊಸಬೀಡು ಎಂದು ಹೆಸರಾಯಿತು. ಈಗ ಇದಕ್ಕೆ ಹೊಸೂರು ಎಂದು ಹೆಸರಿದೆ. ಈ ಹೊಸೂರು ಗೋರಿಬಿದನೂರಿಗೆ ಏಳು ಮೈಲಿ ದೂರದಲ್ಲಿದೆ.

---

## ೯. ಭೀಮನೂ ಬಕನೂ

ಪಾಂಡವರೂ ಕೌರವರೂ ದಾಯಾದಿಗಳು. ಪಾಂಡವರನ್ನು ಕೊಲ್ಲಬೇಕೆಂದು ಅವರನ್ನು ಉಪಾಯದಿಂದ ಒಂದು ಮನೆಯಲ್ಲಿ ಕೂಡಿ ಹಾಕಿ ಆ ಮನೆಗೆ ಕೌರವರು ಬೆಂಕಿ ಹಚ್ಚಿದರು. ಆದರೆ ಭೀಮನು ಉಪಾಯದಿಂದ ತನ್ನ ಅಣ್ಣನಾದ ಧರ್ಮರಾಯನನ್ನೂ, ತಮ್ಮಂದಿರಾದ ಅರ್ಜುನ ನಕುಲ ಸಹದೇವರನ್ನೂ, ತಾಯಿಯಾದ ಕುಂತಿಯನ್ನೂ ರಕ್ಷಿಸಿ ದೂರ ಕರೆತಂದನು. ತಾವು ಬದುಕಿರುವುದು ಕೌರವರಿಗೆ ತಿಳಿಯಬಾರದೆಂದು ಅವರುಗಳು ದಕ್ಷಿಣ ದೇಶಕ್ಕೆ ಬಂದು ಬ್ರಾಹ್ಮಣರ ವೇಷವನ್ನು ಧರಿಸಿದರು. ಚಿಂತಾಮಣಿ ತಾಲೂಕಿನ ಕೈವಾರವೆಂಬ ಗ್ರಾಮಕ್ಕೆ ಆಗ ಏಕಚಕ್ರಪುರ ಎಂದು ಹೆಸರಿದ್ದಿತು. ಪಾಂಡವರು ಇಲ್ಲಿಗೆ ಬಂದು ಒಬ್ಬ ಕುಂಬಾರನ ಮನೆಯಲ್ಲಿ ಉಳಿದುಕೊಂಡರು.

ಅಗ್ರಹಾರದ ಹೊರಗಿನ ಬೆಟ್ಟದಲ್ಲಿ ಬಕನೆಂಬ ರಾಕ್ಷಸನು ಸೇರಿಕೊಂಡು ಆಗಾಗ ಊರಿನವರನ್ನು ಪೀಡಿಸುತ್ತಿದ್ದನು. ಅವನ ಕಾಟವನ್ನು ತಡೆಯಲಾರದೆ ಗ್ರಾಮಸ್ಥರು ನಿತ್ಯವೂ ಸರದಿಯ ಮೇರೆ ಮನೆಗೊಬ್ಬ ಆಳನ್ನೂ, ಎರಡು ಎತ್ತುಗಳನ್ನೂ, ಹನ್ನೆರಡು ಖಂಡುಗ ಅಕ್ಕಿಯ ಅನ್ನವನ್ನೂ, ತಕ್ಕ ಸಂಭಾರಣೆಯನ್ನೂ ಬಕನಿರುವಲ್ಲಿಗೇ ಕಳುಹಿಸುತ್ತಿದ್ದರು. ಯಾವ ದಿನವಾದರೂ ಸರದಿಯ ತಿಂಡಿಯು ಬರುವುದು ಸ್ವಲ್ಪ ತಡವಾದರೂ ಊರನ್ನೇ ನುಂಗಿಬಿಡುವೆನೆಂದು ಆ ಬಕನು ಹೆದರಿಸುತ್ತಿದ್ದನು.

ಪಾಂಡವರಿದ್ದ ಮನೆಯ ಪಕ್ಕದ ಬ್ರಾಹ್ಮಣರ ಹುಡುಗನಿಗೆ ಮದುವೆಯ ಏರ್ಪಾಟು ನಡೆದಿದ್ದಿತು. ಆಗ ಊರಾಳು ಬಂದು ನಾಳೆಯ ದಿನ ಬಕನಿಗೆ ಆ ಹುಡುಗನೇ ತಿಂಡಿಯಾಗಬೇಕೆಂದು ಹೇಳಿದನು. ಮನೆಯವರೆಲ್ಲಾ ಗೋಳಾಡಲು ಮೊದಲಿಟ್ಟರು.

ರೋದನವನ್ನು ಕೇಳಿ ಕುಂತಿಯು ಬಂದು, ಕಾರಣವನ್ನು ವಿಚಾರಿಸಿ ತಿಳಿದಳು. ಬಕನನ್ನು ಕೊಲ್ಲಲು ಭೀಮನೇ ತಕ್ಕವನೆಂದು ತಿಳಿದು ಆಕೆಯು ಮನೆಯ ಯಜಮಾನನೊಡನೆ "ಸ್ವಾಮಿ, ನನಗೆ ಐದುಮಂದಿ ಮಕ್ಕಳಿದ್ದಾರೆ. ಅವರಲ್ಲಿ ಒಬ್ಬ ಧಾಂಡಿಗನಿಗೆ ನಾನು ತಿಂಡಿ ಒದಗಿಸಲಾರೆ. ನಾಳೆ ನಿಮ್ಮ ಹುಡುಗನ ಬದಲು ನಮ್ಮ ಹುಡುಗನನ್ನೇ ರಾಕ್ಷಸನಿಗೆ ಕಳುಹಿಸುತ್ತೇನೆ. ಚಿಂತಿಸಬೇಡಿ" ಎಂದಳು.

ಆದರೆ ಬ್ರಾಹ್ಮಣನು ಒಪ್ಪಲಿಲ್ಲ. "ಕಂಡವರ ಪ್ರಾಣ ಉಳಿಸಲು ಹೆತ್ತ ಮಗನನ್ನು ಸಾಯಿಸಬಾರದು" ಎಂದನು. ಆದರೂ ಕುಂತಿಯು ಒಪ್ಪಿಸಿ ಮಾರನೆಯ ದಿನ ಭೀಮನನ್ನೇ ತಿಂಡಿಯೊಡನೆ ಕಳುಹಿಸಿದಳು.

ಆ ಊರಿಗೆ ಬಂದಾಗಿನಿಂದಲೂ ಭೀಮನಿಗೆ ಹೊಟ್ಟೆಯ ತುಂಬ ಒಂದು ದಿನವೂ ಊಟವಾಗಿರಲಿಲ್ಲ. ಆಕಸ್ಮಿಕವಾಗಿ ಸಿಕ್ಕಿದ ಆ ಆಹಾರವೆಲ್ಲವನ್ನೂ ನಿಮಿಷದಲ್ಲಿ ಮುಗಿಸಿಬಿಟ್ಟನು. ರಾಕ್ಷಸನು ಬರುವ ವೇಳೆಗೆ ಎಲ್ಲವೂ ಬರಿದೇ. ಬಕನಿಗೆ ಸಿಟ್ಟು ಉರಿದುಹೋಯಿತು. ಬಂದವನೇ ಭೀಮನ ಮೇಲೆ ನೆಗೆದನು.

ಇಬ್ಬರಿಗೂ ಹಣಾಹಣಿ ಯುದ್ಧವು ನಡೆಯಿತು. ಭಯಂಕರನಾದ ಬಕನನ್ನು ವೀರನಾದ ಭೀಮನು ಕೆಡವಿ ಸದೆಬಡಿದನು.

ಊರಿನವರೆಲ್ಲಾ ಸಂತೋಷಪಟ್ಟರು. ಕೃತಜ್ಞತೆಯಿಂದ ಭೀಮನನ್ನೂ ಕುಂತಿಯನ್ನೂ ಹೊಗಳಿದರು.

ಕೈವಾರದಲ್ಲಿ ಈಗಲೂ ಭೀಮನು ಪೂಜಿಸಿದ ದೇವರ ಗುಡಿಯೂ, ಅವನು ಬಕನ ಮೇಲೆ ಉರುಳಿಸಿದ ಗುಂಡೂ ಇವೆ. ಬಕನು ಇನ್ನೂ ಸತ್ತಿಲ್ಲವೆಂದೂ, ಆಗಾಗ ಅವನ ಮೈಯ ರಕ್ತವೂ ಕೀವೂ ಗುಂಡಿನ ಬುಡದಿಂದ ಜಿನುಗುವುದೆಂದೂ ಆ ಊರಿನವರು ಹೇಳುತ್ತಾರೆ.

ಕೈವಾರದ ಬೆಟ್ಟದ ಬಳಿಯೇ ಇನ್ನೊಂದು ದೊಡ್ಡ ಬೆಟ್ಟ ಇದೆ. ಅದಕ್ಕೆ ರಹಿಮಾನ್‌ಘರ್ ಎಂದು ಹೆಸರು. ಇದು ಬಲು ಕಡಿದು. ತುದಿಯನ್ನು ಸೇರುವುದು ಕಷ್ಟ. "ಆಪತ್ಕಾಲಕ್ಕೆ ಇರಲಿ" ಎಂದು ಟೀಪು ಸುಲ್ತಾನನು ಇದನ್ನು ಭದ್ರಪಡಿಸುತಲಿದ್ದನು. ನಂದಿಯ ದುರ್ಗವು ಇಂಗ್ಲಿಷರ ಕೈಸೇರಿದಾಗ ಟೀಪುವು ಇಲ್ಲಿಗೆ ಓಡಿಬರಲು ನೋಡಿದನು. ಆದರೆ ಉಪಯೋಗವಾಗಲಿಲ್ಲ.


ಕೈವಾರದಲ್ಲಿ ಅಮರನಾರಾಯಣನ ಮಠ ಎಂದು ಇದೆ. ಇಲ್ಲಿ ಕಾಲಜ್ಞಾನಿಯಾಗಿದ್ದ ಕೈವಾರದ ನಾರಾಯಣಪ್ಪನ ಸುಂದರವಾದ ವಿಗ್ರಹವೂ ದೇವಾಲಯವೂ ಇದೆ. ಅನೇಕ ಸಾಧುಗಳು ಇಲ್ಲಿಂದ ಆಶ್ರಮ ಪಡೆಯುತ್ತಾರೆ. ಕೈವಾರದ ನಾರಣಪ್ಪನ ಗೀತೆಗಳೂ, ಬೋಧೆಗಳೂ, ಕಾಲಜ್ಞಾನವೂ ಅನೇಕ ಜನರಿಗೆ ತೆಲುಗಿನಲ್ಲಿ ಪ್ರಿಯ ವಾಗಿವೆ.

---

## ೧೦. ನಂದಿ

ಒಂದು ದಿನ ಪರಶಿವನು ತನ್ನ ಭೃತ್ಯನಾದ ನಂದಿಯ ಸೇವೆಗೆ ಮೆಚ್ಚಿ ಬೇಕಾದ ವರವನ್ನು ಕೋರಿಕೊಳ್ಳುವಂತೆ ಹೇಳಿದನು. ನಂದಿಯು "ಸಾರೂಪ್ಯ"ವನ್ನು ಅನುಗ್ರಹಿಸಲು ಬೇಡಿದನು. ಶಂಕರನು "ಆಗಲಿ" ಎನ್ನಲು ಆ ಕ್ಷಣವೇ ನಂದಿಯು ಪರಮೇಶ್ವರನ ಸಾರೂಪ್ಯ ವನ್ನು ಹೊಂದಿ, ಮತ್ತೊಬ್ಬ ಪರಮೇಶ್ವರನೇ ತಾನು ಎಂಬಂತೆ ಕಾಣಿಸಿದನು.

ಈಶ್ವರನು ಒಮ್ಮೆ ಎಲ್ಲಿಯೋ ಹೋಗಿದ್ದಾಗ ನಂದಿಯು ಆಸ್ಥಾನದ ಬಾಗಿಲನ್ನು ಕಾಯುತ್ತಿದ್ದನು. ಶಿವನನ್ನು ಕಾಣಲು ಬಂದ ಪಾರ್ವತಿಯು ರೂಪಭೇದವನ್ನು ತಿಳಿಯದೆ ಅಲ್ಲಿದ್ದವನೇ ಶಿವನೆಂದು ಭ್ರಮಿಸಿದಳು. ನಂದಿಗೆ ಮನಸ್ಸು ಖಿನ್ನವಾಯಿತು. ಅವನು ನಂದಿ ಯೆಂದು ತಿಳಿದು ಪಾರ್ವತಿಗೂ ಸಂಕೋಚವಾಯಿತು.



ಭೋಗ ನಂದೀಶ್ವರ ದೇವಸ್ಥಾನ—ನಂದಿ ಬೆಟ್ಟ

ತಕ್ಷಣವೇ ನಂದಿಯು ಸಾರೂಪ್ಯವನ್ನು ತಾನಾಗಿಯೇ ತ್ಯಜಿಸಿ, ದೇವಿಯ ಮನಸ್ಸಿಗೆ ತಾನು ಭ್ರಾಂತಿಯುಂಟುಮಾಡಿದುದಕ್ಕೆ ಪಶ್ಚಾತ್ತಾಪಹೊಂದಿದನು. ಪ್ರಾಯಶ್ಚಿತ್ತರೂಪವಾಗಿ ತಪಸ್ಸನ್ನು ಮಾಡಲು ಕೂಷ್ಮಾಂಡನೆಂಬ ಋಷಿಯು ಹಿಂದೆ ತಪಸ್ಸುಮಾಡಿದ್ದ ಕೂಷ್ಮಾಂಡಗಿರಿಗೆ ಹೋದನು. ಅಲ್ಲಿ ತನ್ನ ಬೆನ್ನಡುಬ್ಬವನ್ನು ಕೆಳಗೆ ಮಾಡಿ ಮೇಲ್ಮೊಗನಾಗಿ ಮಲಗಿ ದೇಹವನ್ನು ಶ್ರಮಿಸಿ ತಪಸ್ಸು ಮಾಡಿದನು. ತನ್ನ ಮನಸ್ಸಿನಲ್ಲಿದ್ದ ಲೋಭವನ್ನು ನೀಗಿಕೊಂಡು, ಈಶ್ವರನ ಪರಿಪೂರ್ಣ ವಾತ್ಸಲ್ಯದಿಂದ ಕೈಲಾಸವನ್ನು ಪುನಃ ಸೇರಿದನು.

ನಂದಿಯು ತಪಸ್ಸುಮಾಡಿದ ಕೂಷ್ಮಾಂಡಗಿರಿಗೆ ನಂದಗಿರಿ ಎಂದೂ, ಪಕ್ಕದ ಗ್ರಾಮಕ್ಕೆ ನಂದಿ ಎಂದೂ ಹೆಸರಾಗಿವೆ. "ನಂದಿ ಮಹಾತ್ಮೆ" ಎಂಬ ಪದ್ಯಕಾವ್ಯದಲ್ಲಿ ಗೋವಿಂದ ಕವಿಯು ಈ ಕತೆಯನ್ನು ಬಹು ರಮ್ಯವಾಗಿ ಬರೆದಿದ್ದಾನೆ.

ಗಂಗರಾಜರು ಈ ಬೆಟ್ಟವನ್ನು "ನಂದಗಿರಿ" ಎಂದರೆ ದೇವೇಂದ್ರನ ವನದಷ್ಟು ರಮ್ಯವಾದ ಬೆಟ್ಟ ಎಂದು ಕರೆದರು.

ಬಾಣರಾಜನಾದ ಬಾಣ ವಿದ್ಯಾಧರನ ಹೆಂಡತಿ ರತ್ನಾವಳಿ ಎಂಬಾಕೆಯು ಈ ಗ್ರಾಮದ ಬಳಿಯಿರುವ ಭೋಗನಂದೀಶ್ವರ ದೇವಾಲಯವನ್ನು ಕಟ್ಟಿಸಲು ಮೊದಲುಮಾಡಿದಳು. ಅಂದಿನಿಂದ ರಾಷ್ಟ್ರಕೂಟರೂ, ಚೋಳರೂ, ಹೊಯ್ಸಳರೂ, ಪಾಳೆಯಗಾರರೂ ಅದರ ಕಟ್ಟಡವನ್ನು ವೃದ್ಧಿಗೊಳಿಸಿದರು. ಗ್ರಾಮವು ಅನತಿಯ ಭೈರೇಗೌಡನಿಂದ ಭದ್ರವಾಯಿತು.

ನಂದಿಯ ದೇವಾಲಯವು ಬಹು ಸುಂದರವಾದುದೂ, ವಿಶಾಲವಾದುದೂ, ಪವಿತ್ರವಾದುದೂ ಎಂದು ಹೆಸರಾಗಿದೆ.

ಶಿವರಾತ್ರಿಯಲ್ಲಿ ಇಲ್ಲಿ ದೊಡ್ಡ ಜನಗಳ ಜಾತ್ರೆಯೂ ದನಗಳ ಪರಿಷೆಯೂ ನಡೆಯುತ್ತವೆ.

ನಂದಿಯ ಬೆಟ್ಟವು ಕೋಲಾರ ನಾಡಿನಲ್ಲೆಲ್ಲಾ ಎತ್ತರವಾದ ಪ್ರದೇಶವು. ಬುಡದಿಂದ ೧,೮೦೦ ಅಡಿಗಳೂ ಸಮುದ್ರಮಟ್ಟದಿಂದ

೪,೮೫೧ ಅಡಿಗಳೂ ಎತ್ತರವಾಗಿದೆ. ಹವೆಯು ತುಂಬಾ ಆರೋಗ್ಯಕರವಾದುದರಿಂದ ಬೇಸಗೆಯಲ್ಲಿ ಬಹು ದೂರದಿಂದಲೂ ಅನೇಕರು ಇಲ್ಲಿಗೆ ತಂಪಿಗಾಗಿ ಬರುತ್ತಾರೆ. ಮಹಾತ್ಮ ಗಾಂಧಿಯವರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಇಲ್ಲಿಗೆ ಎರಡು ಬಾರಿ ಬಂದಿದ್ದರು.

ಬೆಟ್ಟದ ಮೇಲೆ ಸುಂದರವಾದ ಭೋಗನಂದೀಶ್ವರ ದೇವಾಲಯವಿದೆ. ಇದರಲ್ಲಿಯೇ ಕೂಷ್ಮಾಂಡ ಋಷಿಯ ವಿಗ್ರಹವೂ ಇದೆ. ವಿಶಾಲವಾದ ಬಂಗಲೆಗಳೂ, ಆಕಾಶಗಂಗೆ ಮತ್ತು ಕ್ಷೀರನದಿಯ ಮೂಲಸ್ಥಾನಗಳೂ, ಸಾಂದ್ರವಾದ ಅರಣ್ಯಗಳೂ ಇವೆ. ಟೀಪು ಸುಲ್ತಾನನು ಕಟ್ಟಿಸಿದ ಬಲವಾದ ಕೋಟೆಯೂ, ಆತನು ಆಗಾಗ ಬೇಸಿಗೆಯಲ್ಲಿ ಬಂದು ಇರುತ್ತಿದ್ದ ಮನೆಯೂ ಇವೆ.

ಬೆಟ್ಟಕ್ಕೆ ಮೆಟ್ಟಲುಗಳಿವೆ, ಟೆಲಿಫೋನ್ ಇದೆ. ಮೇಲುಗಡೆ ಪೋಸ್ಟಾಫೀಸ್, ಪೋಲೀಸ್ ಸ್ಟೇಷನ್, ವೈದ್ಯಾಲಯ, ಹೋಟೆಲು ಇವುಗಳು ಇವೆ. ಅಮೃತಸರೋವರವೆಂಬ ದಿವ್ಯ ಜಲಪೂರ್ಣ ಸರೋವರವಿದೆ. ವಿದ್ಯುದ್ದೀಪಗಳ ಸೌಕರ್ಯವಿರುವುದಲ್ಲದೆ ಒಂದು ಗಾಡಿ ರಸ್ತೆಯೂ ಆಗುತ್ತಿದೆ.

ಬೆಟ್ಟದ ಬುಡದಲ್ಲಿ ಸುಲ್ತಾನ್‌ಪೇಟೆ ಎಂಬ ಗ್ರಾಮವಿದೆ. ಹಿಂದೆ ಇಂಗ್ಲೀಷರು ಈ ಬೆಟ್ಟವನ್ನು ಮುತ್ತಿದಾಗ ಇದು ಅವರ ದಂಡಿನ ಠಾಣ್ಯವಾಗಿದ್ದಿತು. ಅದಕ್ಕೂ ಮೊದಲು ಇಲ್ಲಿ ಅತ್ಯುತ್ತಮವಾದ ಹಣ್ಣಿನ ತೋಟಗಳಿದ್ದುವು.

ಬೆಟ್ಟಕ್ಕೆ ಅನೇಕ ದಾರಿಗಳಿವೆ. ಇವುಗಳಲ್ಲೆಲ್ಲಾ ಸುಲ್ತಾನ್ ಪೇಟೆಯ ಕಡೆಯಿಂದ ಇರುವ ಮೆಟ್ಟಲು ದಾರಿಯನ್ನೂ, ದೊಡ್ಡಬಳ್ಳಾಪುರದ ಕಡೆಯಿಂದ ಬರುವಾಗ ಬಸವನ ಕಣಿವೆಯ ಬಳಿಯಿಂದ ಇರುವ "ಗಾಡಿಜಾಡ"ನ್ನೂ ಹೆಚ್ಚಾಗಿ ಉಪಯೋಗಿಸುತ್ತಾರೆ.

ನಂದಿಯ ರೈಲ್ವೆ ಸ್ಟೇಷನ್ನು ಊರಿಗೆ ಒಂದು ಮೈಲಿ ದೂರದಲ್ಲಿದೆ. ಚಿಕ್ಕಬಳ್ಳಾಪುರಕ್ಕೆ ಐದು ಮೈಲು ಇರುವ ಈ ಊರಿನಿಂದ ಬೇರೆ ಬೇರೆ ಕಡೆಗಳಿಗೆ ಬೇಕಾದಷ್ಟು ಹಾದಿಗಳಿವೆ.

ನಮ್ಮ ನಾಡಿನಲ್ಲಿ ನಂದಿಯನ್ನು ಕಾಣದವರು ಅತಿವಿರಳ. ಇದು ಕೋಲಾರ ನಾಡಿನ ಕಳಸದಂತೆಯೂ ಮೈಸೂರು ಸೀಮೆಯ ಮಾಣಿಕ್ಯದಂತೆಯೂ ಮೆರೆಯುತ್ತ ಕಂಗೊಳಿಸುತ್ತಿದೆ.

## ೧೧. ದಾಸಯ್ಯನ ಶಂಖು

ಈಗ್ಗೆ ಸುಮಾರು ೫೦೦ ವರ್ಷಗಳ ಹಿಂದೆ ರಣಬೈರೇಗೌಡನೆಂಬ ಒಕ್ಕಲಿಗನು ತನ್ನ ಬಂಧು ಬಳಗದೊಂದಿಗೆ ದಕ್ಷಿಣ ಕಾಂಚೀನಗರದ ಕಡೆಯಿಂದ ಬಂದು, ನಂದಿಯ ಬಳಿ ಆವತಿಯ ಹತ್ತಿರ ಇಳಿದುಕೊಂಡನು. ಆತನ ಹಿರಿಯ ಮಗನು ದೇವನಹಳ್ಳಿಯನ್ನೂ, ಎರಡನೆಯ ಮಗನು ದೊಡ್ಡಬಳ್ಳಾಪುರವನ್ನೂ ನಿರ್ಮಿಸಿ, ಅಲ್ಲಿಯೇ ಗೌಡರಾಗಿ ನಿಂತರು. ಕಿರಿಯವನಾದ ಮಲ್ಲಬೈರೇಗೌಡನಿಗೆ ತಾನೂ ಒಂದು ಊರನ್ನು ಕಟ್ಟಿ ಪ್ರಭುವಾಗಬೇಕೆಂಬ ಆಶೆಯಿದ್ದಿತು.

ಒಂದು ದಿನ ಕಂದವರದ ವರದರಾಜಸ್ವಾಮಿಯ ಸೇವೆಗಾಗಿ ಮಲ್ಲಬೈರೇಗೌಡನು ಮಗನಾದ ಮುನಿಗೌಡನೊಂದಿಗೆ ಬಂದಿದ್ದನು. ಗುಡಿಯಿಂದ ಹೊರಗೆ ಬಂದಾಗ ಕಾಣಿಸಿದ ಮೊಲದ ಮೇಲೆ ಗೌಡರು ತಮ್ಮ ಬೇಟೆನಾಯಿಗಳನ್ನು ಛೂಬಿಟ್ಟರು. ಮೊಲವೂ, ನಾಯಿಗಳೂ, ಗೌಡರೂ ಒಬ್ಬರ ಹಿಂದೊಬ್ಬರು ಓಡಿದರು. ಮೊಲವು ಕೋಡಿಮಂಚೇನಹಳ್ಳಿಯ ಕಡೆ ನುಗ್ಗಿತು.

ಆ ಹಳ್ಳಿಯ ಒಳಗೆ ಬರುತ್ತಲೇ ಕುಂದಿಲಿಯು ತಟಕ್ಕನೆ ಹಿಂದಿರುಗಿ ಅಟ್ಟಿಬರುತ್ತಿದ್ದ ನಾಯಿಗಳ ಮೇಲೆಯೇ ನುಗ್ಗಿತು! ನಾಯಿಗಳು ಗಾಬರಿಗೊಂಡು ಬೆನ್ನುತೋರಿ ಓಡಿಬಿಟ್ಟವು! ಗೌಡರಿಗೆ ಆಶ್ಚರ್ಯವಾಯಿತು. “ಒಂದು ಮೊಲವು ಎರಡು ನಾಯಿಗಳನ್ನು ಓಡಿಸುವುದೇ? ಇದೆಂತಹ ಗಂಡು ನೆಲವಿರಬಹುದು?” ಎಂದುಕೊಂಡರು. ಈ ಗಂಡು ಭೂಮಿಯಲ್ಲಿಯೇ ತಾನು ಹೊಸ ಊರನ್ನು ನಿರ್ಮಿಸಬೇಕೆಂದು ಮಲ್ಲಬೈರೇಗೌಡನು ನಿಶ್ಚಯಿಸಿದನು.

ಆದರೆ ಆ ಪ್ರದೇಶವೆಲ್ಲಾ ವಿಜಯನಗರದ ರಾಯರಿಗೆ ಅಧೀನ ವಾಗಿದ್ದಿತು. ಮಲ್ಲಬೈರೇಗೌಡನು ಬೈಚೇಗೌಡ ಮತ್ತು ಬೈರೇಗೌಡ ಎಂಬುವರೊಂದಿಗೆ ಆಲೋಚಿಸಿ, ರಾಯರಿಂದ ಅಪ್ಪಣೆ ಪಡೆದು ಬರಲು ವಿಜಯನಗರಕ್ಕೆ ಮರಿಗೌಡನನ್ನು ಕಳುಹಿಸಿದನು.

ರಾಯರು ಸಂತೋಷವೆಂದರು. ಮರಿಗೌಡನು ಸಫಲನಾಗಿ ಹಿಂದಕ್ಕೆ ಬೇಗ ಬಂದನು.

ಹೊಸ ಊರನ್ನು ಕಟ್ಟಲು ಸಿದ್ಧತೆಗಳು ನಡೆದುವು. ಜೋಯಿಸರು ದಿವ್ಯ ಮುಹೂರ್ತವನ್ನು ನಿಶ್ಚಯಿಸಿದರು. ಆ ಘಳಿಗೆಯಲ್ಲಿ ಶಂಕುಸ್ಥಾಪನೆಯಾದ ಊರು ನಿರಂತರ ಐಶ್ವರ್ಯಸ್ಥಿತಿಯಲ್ಲಿರುವುದೆಂದು ತಿಳಿಸಿದರು. ಕೋಟೆಯ ಪಾಯವನ್ನು ಅಗೆಯಬೇಕಾದ ಸ್ಥಳಗಳನ್ನು ಗುರುತಿಸಿ ಗೌಡರುಗಳು ಅಲ್ಲಲ್ಲಿ ಕೆಲಸಗಾರರೊಂದಿಗೆ ಅಣಿಯಾಗಿ ನಿಂತರು. ಮುಹೂರ್ತವು ಒದಗಿದುದನ್ನು ಬ್ರಾಹ್ಮಣರು ಮಲ್ಲಬೈರೇಗೌಡನಿಗೆ ಹೇಳುತ್ತಲೇ ಆತನು ಒಂದು ಶಂಖವನ್ನು ಧ್ವನಿಮಾಡಬೇಕು, ಒಡನೆಯೇ ಎಲ್ಲ ಕಡೆಯೂ ಕೆಲಸವು ಆರಂಭವಾಗಬೇಕು ಎಂದು ಎಲ್ಲರಿಗೂ ತಿಳಿಸಲಾಯಿತು.

ಮುಹೂರ್ತವು ಇನ್ನು ಅರ್ಧ ಘಂಟೆಗೆ ಒದಗುವುದು ಎನ್ನುವಷ್ಟರಲ್ಲಿ ಒಂದು ಶಂಖ ಧ್ವನಿಯು ಮೊಳಗಿಬಿಟ್ಟಿತು. ಸಡಗರದಿಂದ ಇದ್ದ ಮಂದಿಯು ತಳಪದಿಯನ್ನು ಆರಂಭಿಸಿಬಿಟ್ಟರು. ಗೌಡನಿಗೆ ಕಳವಳವೂ, ಬ್ರಾಹ್ಮಣರಿಗೆ ಆಶ್ಚರ್ಯವೂ ಆಯಿತು. ಮುಹೂರ್ತಕ್ಕೆ ಮೊದಲೇ ಶಂಖವನ್ನು ಊದಿದವರು ಯಾರು ?

ಇವರ ಸಂಕೇತದ ಸಮಾಚಾರವೇ ತಿಳಿಯದೆ ಇದ್ದ ಒಡ ದಾಸಯ್ಯನೊಬ್ಬನು ಸಂತೋಷ ಕಾಲದಲ್ಲಿ ಆನಂದದಿಂದ ತಾನಾಗಿಯೇ ತನ್ನ ಶಂಖವನ್ನು ಬಾಜಿಸಿಬಿಟ್ಟಿದ್ದನು.

ಆಗಿನ ಲಗ್ನವನ್ನೇ ಗುಣಿಸಿ ದೈವಜ್ಞರು "ಈಗ ಸ್ಥಾಪಿತವಾದ ಊರು ೩೦೦ ವರ್ಷಗಳು ಅತಿವೈಭವದಿಂದ ಬೆಳೆಯುವುದು" ಎಂದರು. ಹಾಗೆಯೇ ಆಯಿತು. ವೀರವರರಾದ ಗೌಡರುಗಳು ೩೦೦ ವರ್ಷಗಳ

ಕಾಲ ಅಲ್ಲಿ ಸ್ವೈಭವದಿಂದ ಆಳಿದರು. ಯುದ್ಧಮಾಡಿ ರಾಜ್ಯಗಳನ್ನು ಗೆದ್ದರು. ಸಂಧಾನದಿಂದ ಸೀಮೆಗಳನ್ನು ಸಂಪಾದಿಸಿದರು. ಹಣವನ್ನು ಕೊಟ್ಟು ಊರುಗಳನ್ನು ಕೊಂಡುಕೊಂಡರು. ಅವರುಗಳು ಕಟ್ಟಿ ಬೆಳಸಿದ ಊರು ಈಗಲೂ ನಮ್ಮ ನಾಡಿನ ಅತಿ ಮುಖ್ಯ ಊರಾಗಿದೆ. ಅದೇ ಚಿಕ್ಕಬಳ್ಳಾಪುರ.

ಬಳ್ಳಾಪುರದ ಮಧ್ಯೆ ಪಾಳೆಯಗಾರರ ಅರಮನೆಯಿದ್ದ ಬಯಲು ಇದೆ. ಕಂದಕದ ಗುರುತುಗಳೂ ಇವೆ. ಕೋಟೆಯು ಉರುಳುತ್ತಿದೆ.

ಈ ಸ್ಥಳವು ವ್ಯಾಪಾರಕ್ಕೆ ನಡುದಾಣವಾಗಿದೆ. ಕಾರ್ಖಾನೆಗಳೂ, ವಿದ್ಯಾಭ್ಯಾಸವೂ, ವ್ಯಾಪಾರವೂ, ನಾಗರಿಕತೆಯೂ ಇಲ್ಲಿ ಹರಡುತ್ತಿವೆ.

ಊರಿನ ಉತ್ತರಕ್ಕೆ ಎರಡು ಮೈಲಿ ದೂರದಲ್ಲಿ ಚಿತ್ರಾವತೀ ಎಂಬ ವಿಶಾಲವಾದ ಹಲಸು ಬಾವಿಯೂ, ಪಶ್ಚಿಮಕ್ಕೆ ಅಷ್ಟೇ ದೂರದಲ್ಲಿ ರಂಗಸ್ಥಳವೆಂಬ ರಮ್ಯವಾದ ದೇವಾಲಯ ಪ್ರದೇಶವೂ ಇವೆ. ಸುತ್ತಲೂ ಲೆಕ್ಕವಿಲ್ಲದಷ್ಟು ಪತಗಳೂ, ಕಪಿಲೆಯ ಬಾವಿಗಳೂ, ತೋಟಗಳೂ ಇವೆ. ಈರುಳ್ಳಿ, ಆಲೂಗಡ್ಡೆ, ಹಿಪ್ಪುನೇರಳೆಗಳು ಈ ಊರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಮುಖ್ಯ ಬೆಳೆಗಳು.

---

## ೧೨. ಬೈಚೇಗೌಡ

ಚಿಕ್ಕಬಳ್ಳಾಪುರವನ್ನು ಮಲ್ಲಬೈರೇಗೌಡನು ಕಟ್ಟಿದನು. ಈತನ ವಂಶದಲ್ಲಿ ಒಳ್ಳೊಳ್ಳೆಯ ವೀರರು ಜನಿಸಿದರು.

ದೊಡ್ಡ ಬೈರೇಗೌಡನ ಹೆಂಡತಿಯಾದ ವೆಂಕಟಮ್ಮ ಎಂಬ ಸ್ತ್ರೀಯೇ ಹದಿನೈದು ವರ್ಷ ರಾಜ್ಯವಾಳಿದಳು.

ಅಣ್ಣೆಗೌಡನು ಇಪ್ಪತ್ತು ಲಕ್ಷ ಆಸ್ತಿಯನ್ನು ಕೂಡಿಸಿದನು. ಒಂದು ಲಕ್ಷ ವರಹಕ್ಕೆ ಶಿಡ್ಲಘಟ್ಟವನ್ನು ಕೊಂಡನು. ತನ್ನ ತಮ್ಮನಿಗೆ ನಾದಲಿ, ಇಟ್ಟಿಂಗಿ ದುರ್ಗಗಳನ್ನು ಜಹಗೀರಿ ಕೊಟ್ಟನು.

ಒಂದನೇ ಬೈಚೇಗೌಡನ ಕಾಲದಲ್ಲಿ ಮೈಸೂರು ಒಡೆಯರ ದಂಡು ಚಿಕ್ಕಬಳ್ಳಾಪುರವನ್ನು ಮುತ್ತಿತು. ಆದರೆ ಗೌಡನು ಮರಾಟೆಯವರ ಸಹಾಯವನ್ನು ಪಡೆದು, ಮೈಸೂರ ದಳವಾಯಿ ಕಂಠೀರವನನ್ನು ಸೋಲಿಸಿದನು. ಅಲ್ಲಿಗೇ ಬಿಡದೆ ಕೊಡಿಕೊಂಡೆಯವರಿವಿಗೂ ಅಟ್ಟಿಸಿಕೊಂಡುಹೋಗಿ ಕೊಂದನು. ಬುರುದುಗುಂಟೆಯನ್ನು ತನ್ನ ಸೀಮೆಗಾಗಿ ಕೊಂಡುಕೊಂಡನು.

ಎರಡನೇ ಬೈಚೇಗೌಡನು ತುಂಬಾ ಅಭಿಮಾನಶಾಲಿ. ಈತನು ಒಂಬತ್ತೇ ತಿಂಗಳು ಅಧಿಕಾರಮಾಡಿದನು. ಅನಂತರ ಈತನ ಚಿಕ್ಕತಂದೆಯಾದ ಚಿಕ್ಕಪ್ಪಗೌಡನು ಪಟ್ಟಕ್ಕೆ ಬಂದನು. ಆದಾಗ್ಯೂ ಬೈಚೇಗೌಡನು ತನ್ನ ಚಿಕ್ಕತಂದೆಗೆ ಸಹಾಯಮಾಡುತ್ತಲೇ ಇದ್ದನು.

ಈ ವೇಳೆಗೆ ಹೈದರಲ್ಲಿಯು ಶ್ರೀರಂಗಪಟ್ಟಣದಲ್ಲಿ ಪ್ರಬಲನಾದನು. ಆತನು ಊರುಗಳನ್ನೂ ಸೀಮೆಗಳನ್ನೂ ಗೆದ್ದು ಪಟ್ಟಣಕ್ಕೆ ಸೇರಿಸುತ್ತಾ ಚಿಕ್ಕಬಳ್ಳಾಪುರಕ್ಕೂ ಬಂದನು. ಹೈದರನ ಮುತ್ತಿಗೆಯು ಬಲವಾಯಿತು. ಆಗ ಚಿಕ್ಕಪ್ಪಗೌಡನು ಒಪ್ಪಂದಕ್ಕೆ ಸಿದ್ಧನಾದನು. ತನಗೆ ಒಂದು ಬಂಗಾರದ ತಲೆಯನ್ನೂ ಐದು ಲಕ್ಷ ವರಹಗಳನ್ನೂ ಕೊಟ್ಟರೆ ಹಿಂದಿರುಗುವುದಾಗಿ ಹೈದರನು ಹೇಳಿದನು. ಗೌಡನು ಹೊನ್ನ ತಲೆಯನ್ನೂ ಸ್ವಲ್ಪ ಹಣವನ್ನು ಆಗಲೇ ಕೊಟ್ಟನು. ಉಳಿದ ಹಣವನ್ನು ಸಾಧಿಸಿ ಬರಲು ತನ್ನ ಕಡೆಯವರನ್ನು ಬಳ್ಳಾಪುರದಲ್ಲಿ ಬಿಟ್ಟು, ದಂಡಿನೊಂದಿಗೆ ಹೈದರನು ಹಿಂದಿರುಗಿದನು.

ಆದರೆ ಚಿಕ್ಕಪ್ಪಗೌಡನು ಮರಾಟೆಯವರ ಸಹಾಯಪಡೆದು ಬಳ್ಳಾಪುರವನ್ನು ಭದ್ರಮಾಡಿ, ನಂದಿದುರ್ಗದಲ್ಲಿ ಸೇರಿಕೊಂಡನು. ಇದು ತಿಳಿದ ಕೂಡಲೆ ಹೈದರನು ಕೋಪದಿಂದ ಹಿಂದಕ್ಕೆ ನುಗ್ಗಿ, ಬಳ್ಳಾಪುರವನ್ನು ಹಿಡಿದು, ನಂದಿಯನ್ನು ಗೆದ್ದು, ಬಳ್ಳಾಪುರದವರ ಎಲ್ಲಾ ಕೋಟೆಗಳನ್ನೂ ಕೆಡವಿ, ಚಿಕ್ಕಪ್ಪಗೌಡನನ್ನೂ, ಬೈಚೇಗೌಡನನ್ನೂ, ಅವರ ಮನೆಮಂದಿಯನ್ನೂ ಬೆಂಗಳೂರಲ್ಲಿ ಸೆರೆಹಾಕಿದನು.

ಬೆಂಗಳೂರಲ್ಲಿ ಚಿಕ್ಕಪ್ಪಗೌಡನು ಸತ್ತುಹೋಗಲು, ಬೈಚೇಗೌಡನು ತಪ್ಪಿಸಿಕೊಳ್ಳಲು ಯತ್ನಿಸಿದನು. ಇದನ್ನು ತಿಳಿದು ಹೈದರನು ಗೌಡನನ್ನು ಕೊಯಮುತ್ತೂರಿಗೆ ಸಾಗಿಸಿದನು. ಆತನು ಭಯಪಡಲೆಂದು ಆತನ ಕಡೆಯವರಿಗೆ ಚಿತ್ರಹಿಂಸೆಮಾಡಿಸಿದನು. ಅಭಿಮಾನಶಾಲಿಯಾದ ಮುದಿಗೌಡನ ತಂಟೆಗೆ ಮಾತ್ರ ಹೋಗಲಿಲ್ಲ. ಆದರೂ ಆತನ ಹೆಮ್ಮೆಯನ್ನು ಬಗ್ಗಿಸಬೇಕೆಂದು ನಿರ್ಧರಿಸಿ, ತನಗೆ "ಸಲಾಂ" ಮಾಡಿದರೆ ಬಿಡುಗಡೆಮಾಡುವುದಾಗಿ ಹೇಳಿಕಳುಹಿಸಿದನು. ಗೌಡನು "ಛೆ! ಎಂದಿಗೂ ನಾನು ಶತ್ರುವಿಗೆ ವಂದನೆಮಾಡುವುದಿಲ್ಲ!" ಎಂದನು.

ಹೇಗಾದರೂ ಮಾಡಿ ಗೌಡನು ತನ್ನ ಮುಂದೆ ತಲೆತಗ್ಗಿಸುವಂತೆ ಮಾಡಬೇಕೆಂದು ಹೈದರನು ಮನಸ್ಸುಮಾಡಿದನು. ಒಂದು ದಿಡ್ಡಿಯ ಬಾಗಿಲ ಮುಂದೆ ಕುಳಿತು ಗೌಡನನ್ನು ಆ ಬಾಗಿಲಿನಿಂದ ಒಳಕ್ಕೆ ಕರೆತನ್ನಿರೆಂದು ಹೇಳಿಕಳುಹಿಸಿದನು. ಗೌಡನು ಎತ್ತರವಾದ ಆಳು. ಆ ಬಾಗಿಲು ಗಿಡ್ಡ. ಅದರೊಳಗೆ ಪ್ರವೇಶಿಸಬೇಕಾದರೆ ಗೌಡನು ತಲೆಯನ್ನೂ ಮೈಯನ್ನೂ ತಗ್ಗಿಸಲೇ ಬೇಕಾಗುತ್ತಿದ್ದಿತು. ಅಷ್ಟಕ್ಕೇ ಗೌಡನು ತನಗೆ ತಲೆತಗ್ಗಿಸಿದನೆಂದು ಹೈದರನು ಹೇಳಬೇಕೆಂದಿದ್ದನು.

ಗೌಡನು ಇದಕ್ಕೂ ಅವಕಾಶಕೊಡಲಿಲ್ಲ. ಹೈದರನ ಕುಟಿಲವು ಈತನಿಗೆ ಮನವಾಯಿತು. ಬಾಗಿಲವರೆಗೂ ಬಂದವನು ಬಗ್ಗಿ ಒಳಗೆ ಹೋಗಲಿಲ್ಲ. ಎಕ್ಕಡವನ್ನು ಮೆಟ್ಟಿದ್ದ ಎಡಗಾಲನ್ನು ಎತ್ತಿ ಬಾಗಿಲಿನಿಂದ ಒಳಕ್ಕೆ ಹೈದರನ ಕಡೆಗೆ ನೀಡುತ್ತ "ಅಭಿಮಾನಶಾಲಿಗಳಿಗೆ ಅವಮಾನಮಾಡಲು ಯತ್ನಿಸುವ ಅಹಂಕಾರಿಗಳಿಗೆ ನಾನು ತೋರಿಸುವ ಗೌರವವು ಇದೇ!" ಎಂದನು.

ಹೈದರನಿಗೆ ತುಂಬಾ ಅವಮಾನವಾಯಿತು. ಕೋಪವೂ ಬಂದಿತು. "ಇವನು ಮುದುಕನಾದುದರಿಂದ ಬಿಟ್ಟುಬಿಡಬೇಕೆಂದಿದ್ದೆನು. ಆದರೆ ಗರ್ವಿಷ್ಠನಾದ ಇವನನ್ನು ಬಿಡಲಾರೆನು" ಎಂದನು.

ಗೌಡನೂ "ಶತ್ರುವಿಗೆ ತಲೆಬಾಗುವುದಕ್ಕಿಂತ ಚಿತ್ರಹಿಂಸೆಯಿಂದ ಸಾಯುವುದೇ ನನಗೆ ಸಂತೋಷ" ಎಂದನು.

ಗೌಡನಿಗೆ ಕೋಳಗಳನ್ನು ಹಾಕಿ ಕತ್ತಲೆಯ ಕೋಣೆಯಲ್ಲಿ ಹಾಕಿದರು. ಗೌಡನು ಅಲ್ಲಿಯೇ ಸತ್ತನು. ಕಡೆಯವರೆವಿಗೂ ಹೇಗೆ ಮಾಡಿದರೂ ಶತ್ರುವಿಗೆ ಕೈಮುಗಿಯಲಿಲ್ಲ, ತಲೆತಗ್ಗಿಸಲೂ ಇಲ್ಲ.

---

## ೧೩. ಅಗ್ಗಿ ತಿಮ್ಮನಾಯಕ

ತಿಮ್ಮನಾಯಕನು ಎರಡನೇ ಕದಿರಪ್ಪನಾಯಕನ ಮಗನು. ಈತನಿಗೆ "ನ್ಯಾಯಮೂರ್ತಿ"ಯೆಂಬ ಬಿರುದಿದ್ದಿತು. ನ್ಯಾಯ ವಿಮರ್ಶೆಯಲ್ಲಿ ಬೆಂಕಿಯಂತಹವನು. ಆದುದರಿಂದಲೇ ಆತನಿಗೆ ಅಗ್ನಿ (ತೆಲುಗಿನಲ್ಲಿ ಅಗ್ಗಿ) ತಿಮ್ಮನಾಯಕನೆಂದು ಹೆಸರಾಯಿತು.

ಈತನ ತಮ್ಮನಾದ ಕೃಷ್ಣಪ್ಪನು ಬಹು ತುಂಟನು. ಒಂದು ಸಲ ಈ ಕೃಷ್ಣಪ್ಪನು ಒಂದು ನೀಚ ಕೆಲಸವನ್ನು ಮಾಡಿದನು. ದೊರೆಗೆ ಇದು ತಿಳಿದ ಕೂಡಲೆ, ಕೃಷ್ಣಪ್ಪನು ತನ್ನ ತಮ್ಮನು ಎಂಬುದನ್ನೂ ಗಣಿಸದೆ ಆತನಿಗೆ ಕಿವಿ ಮೂಗುಗಳನ್ನು ಕೊಯಿಸಿ ಮರಣ ಶಿಕ್ಷೆ ವಿಧಿಸಿದನು.

ತಿಮ್ಮನಾಯಕನಿಗೆ ಹಿರಿಯ ಹೆಂಡತಿಯಲ್ಲಿ ವಸಂತನಾಯಕ, ಕಿರಿಯ ಹೆಂಡತಿಯಲ್ಲಿ ನಾಗಪ್ಪನಾಯಕ ಎಂಬ ಇಬ್ಬರು ಮಕ್ಕಳಿದ್ದರು. ನಾಗಪ್ಪನಾಯಕನು ತನ್ನ ಚಿಕ್ಕಪ್ಪನ ಹಾಗೆಯೇ ತುಂಟತನಕ್ಕೆ ಬಿದ್ದನು. ಎಷ್ಟು ಹೇಳಿದರೂ ತಿದ್ದಿಕೊಳ್ಳದೆ ಇರಲು ನಾಯಕನು ಮಗನನ್ನೇ ಸೆರೆಯಲ್ಲಿಡಿಸಿದನು. ಆದರೆ ಹೆಂಡತಿಯರ ಗೋಳಾಟವನ್ನು ನೋಡಲಾರದೆ ಆಮೇಲೆ ಸೆರೆಯನ್ನು ತಪ್ಪಿಸಿದನು.

ದುಷ್ಟನಾದ ನಾಗಪ್ಪನಾಯಕನು ಆ ಬಳಿಕ ಇನ್ನೂ ಒಂದು ಕೆಟ್ಟ ಕೆಲಸ ಮಾಡಿದನು. ವಸಂತನಾಯಕನು ಬದುಕಿದ್ದರೆ ತನಗೆ ರಾಜ್ಯ ಸಿಕ್ಕಲಾರದೆಂದೆಣಿಸಿ ಅಣ್ಣನ ಊಟದಲ್ಲಿ ವಿಷವನ್ನು ಹಾಕಿಸಿದನು. ದೇವರ ದಯೆಯಿಂದ ವಸಂತನಾಯಕನು ಸಾಯಲಿಲ್ಲ. ಅಸ್ವಸ್ಥತೆಯು ಮೂಡಿ ಯೋಗ್ಯ ಚಿಕಿತ್ಸೆಯಿಂದ ನಿಧಾನವಾಗಿ ಗುಣವಾಯಿತು.

ದೊರೆಯು ಸಮಾಚಾರವನ್ನೆಲ್ಲಾ ವಿಚಾರಿಸಿದನು. ವಿಷವನ್ನು ಬೆರೆಯಿಸಿದ್ದ ಅಡಿಗೆಯವನಿಗೆ ಕತ್ತೆಯ ಮೇಲೆ ಮೆರವಣಿಗೆ ಮಾಡಿಸಿ,

ತಲೆ ಹೊಯಿಸಿದನು. ಈ ದುರಾಲೋಚನೆಗೆ ಕಾರಣನಾದ ನಾಗಪ್ಪನಾಯಕನಿಗೂ ತಲೆ ಹೊಡೆಯಬೇಕೆಂದು ಆಜ್ಞೆ ಮಾಡಿದನು.

ಹೆಂಡತಿಯರು ಬಂದು ಪರಿಪರಿಯಾಗಿ ಬೇಡಿಕೊಂಡರು. ಆದರೆ ನಾಯಕನಿಗೆ ತನ್ನ ನೀಚನಾದ ಮಗನ ಮೇಲೆ ಕರುಣೆ ಬರಲಿಲ್ಲ. ಕಡೆಗೆ ವಸಂತನಾಯಕನೇ ಬಂದು, "ನನ್ನ ತಮ್ಮನಿಗೆ ಪ್ರಾಣದಾನ ಮಾಡಬೇಕು" ಎಂದು ಬೇಡಿಕೊಂಡನು. ನಾಯಕನು ಆಗಲೂ ಒಪ್ಪಲೇ ಇಲ್ಲ. ಆಗ ವಸಂತನಾಯಕನು ತನ್ನ ತಮ್ಮನನ್ನು ಉಳಿಸದೆ ಇದ್ದರೆ ತಾನೂ ಸಾಯುವುದಾಗಿ ಹಠಮಾಡಲು, ಅಗ್ಗಿತಿಮ್ಮನಾಯಕನು ನಾಗಪ್ಪನಾಯಕನಿಗೆ ವಿಧಿಸಿದ್ದ ಮರಣಶಿಕ್ಷೆಯನ್ನು ಬದಲಾಯಿಸಿ, ಗಡೀಪಾರು ಹೊರಡಿಸಿದನು.

ಈತನ ಧರ್ಮಪಕ್ಷಪಾತವನ್ನು ಕೇಳಿದ ವಿಜಯನಗರದ ಕೃಷ್ಣದೇವರಾಯನು ನಾಯಕನಿಂದ ಸಲ್ಲುತ್ತಿದ್ದ ಪೊಗದಿಯನ್ನು ತಗ್ಗಿಸಿ, ಮರ್ಯಾದೆ ಮಾಡಿದನು.

ಈ ನ್ಯಾಯಮೂರ್ತಿಯು ನಾಲ್ಕು ಶತಮಾನಗಳ ಹಿಂದೆ ನಮ್ಮ ನಾಡಿನಲ್ಲಿದ್ದನು.

---

## ೧೪. ಇಮ್ಮಡಿ ಕದಿರೆಪ್ಪನಾಯಕ

ವಿಜಯನಗರದಲ್ಲಿ ವೀರನರಸಿಂಗರಾಯನು ಆಳುತ್ತಿದ್ದಾಗ ಗುಮ್ಮನಾಯಕನ ಪಾಳೆಯದಲ್ಲಿ ಎರಡನೇ ಕದಿರೆಪ್ಪನಾಯಕನು ಪಾಳೆಯಗಾರನಾಗಿದ್ದನು. ಈ ಪಾಳೆಯಗಾರನು ಅರಸರಿಗೆ ಅವಿಧೇಯನಾದ ಒಬ್ಬ ಪುಂಡು ಪಾಳೆಯಗಾರನನ್ನು ಸೋಲಿಸಿದನು. ಅರಸರು ಕದಿರೆಪ್ಪನಾಯಕನನ್ನು ರಾಜಧಾನಿಗೆ ಕರೆಯಿಸಿ ಬಹುಮಾನ ಮಾಡಿದರು.

ಆಗ ನವರಾತ್ರಿಯು ಬಂದಿತು. ಉತ್ಸವವನ್ನು ನೋಡಲು ಅರಸರು ಪಾಳೆಯಗಾರನನ್ನು ನಿಲ್ಲಿಸಿಕೊಂಡರು. ಅನೇಕ ಇತರ ಪಾಳೆಯಗಾರರೂ ಪರದೇಶದವರೂ ಬಹುಮಂದಿ ಬಂದಿದ್ದರು. ಹತ್ತು ದಿನಗಳೂ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಒಂದು ಸಂಜೆ ಓಲಗವು (ದರಬಾರು) ನೆರೆದಿದ್ದಿತು. ಸಭೆಯ ಭವನವು ತುಂಬಿದ್ದಿತು. ಅರಸರೂ ಸಿಂಹಾಸನವನ್ನೇರಿದರು. ಆಗ ತಟಕ್ಕನೆ ಒಬ್ಬ ಭಟರಾಜುವು ಎದ್ದುನಿಂತು, ಸೊಂಟದ ಪಟ್ಟಿಯಿಂದ ಕಠಾರಿಯನ್ನು ಈಚೆಗೆ ಎಳೆದು, ಮೇಲಕ್ಕೆ ಎತ್ತಿ, ಸಿಕಾರವಾಗಿ ಆಡಿಸುತ್ತ, “ಇದು ವಿಜಯನಗರದ ರಾಯರ ಸಭೆ. ನಿಮ್ಮಲ್ಲಿ ಯಾರಾದರೂ ವೀರರಿದ್ದರೆ ಈಗ ನಾನು ಪರೀಕ್ಷಿಸುವೆನು. ಮುಂದೆ ಬರುವವರನ್ನು ಇದರಿಂದ ಇರಿಯುವೆನು. ಈ ಪೆಟ್ಟಿಗೆ ಹೆದರದವನೇ ವೀರನು. ನಿಮ್ಮಲ್ಲಿ ವೀರನು ಯಾರು?” ಎಂದನು.

ಕಠಾರಿಯಿಂದ ಚುಚ್ಚಿಸಿಕೊಳ್ಳಲು ಯಾರಿಗೆ ತಾನೇ ಇಷ್ಟವಾದೀತು? ಇತರರು ಸುಮ್ಮನೆ ಇದ್ದುದನ್ನು ಕಂಡು ಕದಿರಪ್ಪನಾಯಕನು ಮುಂದೆ ಬಂದು, “ಇಲ್ಲಿ ಅನೇಕ ವೀರರಿದ್ದಾರೆ. ನೀನು ಹೀಗೆಲ್ಲಾ ಮಾತನಾಡಬಾರದು. ನನ್ನನ್ನು ತಿವಿ” ಎಂದನು.

ಭಟರಾಜುವು ಘರ್ಜಿಸುತ್ತ ಕಠಾರಿಯಿಂದ ಚುಚ್ಚಿದನು. ಪಾಳೆಯಗಾರನ ಗುಂಡಿಗೆಯ ಸುತ್ತಲೂ ಕೆಂಪಗಾಯಿತು. ಸಭೆಯವರು ಗಾಬರಿಯಿಂದ “ಹಾ! ಹೋ!!” ಎಂದರು.

ಆದರೆ ಕದಿರಪ್ಪನಾಯಕನು ನಗುತ್ತಾ ಇದ್ದನು. ಆತನಿಗೆ ಅಪಾಯವೇ ಆಗಿರಲಿಲ್ಲ. ಆಗ ಆ ಭಟರಾಜುವು ಪುನಃ ಹೀಗೆಂದನು: “ಇದು ಕೃತ್ರಿಮದ ಕಠಾರಿ. ಈ ಕೆಂಪು ಓಕುಳಿಯ ಕೆಂಪು. ವೀರರನ್ನು ಹುಡುಕಲು ನಾನೇ ಇದನ್ನು ಮಾಡಿದೆನು. ಈ ಕದಿರಪ್ಪನಾಯಕನೇ ನಿಜವಾದ ವೀರನು. ನಾನು ಈತನನ್ನು ಈಗ ಹೊಗಳುವೆನು.” ಹೀಗೆನ್ನುತ್ತಾ ಭಟರಾಜುವು ಗುಮ್ಮನಾಯಕನ ವಂಶದ ಪಾಳೆಯಗಾರನ ಮೇಲೆ ಪದ್ಯಗಳನ್ನು ರಚಿಸುತ್ತಾ ಹೊಗಳಿದನು.

ಆ ಭಟರಾಜುವಿನ ಯುಕ್ತಿಯನ್ನೂ ಕವಿತಾಶಕ್ತಿಯನ್ನೂ ನೋಡಿ ಪಾಳೆಯಗಾರನಿಗೆ ಬಹು ಸಂತೋಷವಾಯಿತು. ಅಲ್ಲಿಯೇ ತಾನು ಹೊದೆದಿದ್ದ ಶಾಲು ಜೋಡಿಯನ್ನೂ, ತನ್ನ ಕೊರಳಲ್ಲಿದ್ದ ಮುತ್ತಿನ ಹಾರವನ್ನೂ ತೆಗೆದು ಆ ಭಟರಾಜುವಿಗೆ ಬಹುಮಾನವಾಗಿ ಕೊಟ್ಟುಬಿಟ್ಟನು.

ಇದನ್ನೆಲ್ಲಾ ಕಂಡು ಅರಸರು ನಾಯಕನನ್ನು ತುಂಬಾ ಮೆಚ್ಚಿದರು. ದೇವಿಕುಂಟೆ ಮುಂತಾದ ಗ್ರಾಮಗಳನ್ನೂ, ಅನೇಕ ಬಿರುದುಗಳನ್ನೂ, ಆಭರಣಗಳನ್ನೂ, ಪರಿವಾರವನ್ನೂ ದಯಪಾಲಿಸಿದರು.

ಕದಿರೆಪ್ಪನಾಯಕನ ಪಾಳೆಯವೇ ಈಗಿನ ಬಾಗೇಪಲ್ಲಿ ತಾಲೂಕಾಗಿದ್ದಿತು. ಈಗ ಮದರಾಸ್ ಪ್ರಾಂತ್ಯಕ್ಕೆ ಸೇರಿರುವ ಅನೇಕ ಹೋಬಳಿಗಳೂ ಈ ಗುಮ್ಮನಾಯಕನ ಪಾಳೆಯಕ್ಕೇ ಸೇರಿದ್ದುವು.

ಅವನ ಹೆಗ್ಗೋಟೆಯಾದ ಗುಮ್ಮನಾಯಕನ ಪಾಳೆಯವನ್ನು ನೋಡಿದರೆ ಈಗ ಕಣ್ಣಲ್ಲಿ ನೀರು ಬರುತ್ತದೆ. ಮೈಲಿಗಳ ದೂರ ಹಾಳು ಬಿದ್ದ ಮನೆಗಳೂ, ದೇವಮಂದಿರಗಳೂ, ಸರೋವರಗಳೂ ತುಂಬಿವೆ. ಮುರಿದ ಅರಮನೆಗಳಲ್ಲಿ ಗಿಡಗಂಟಿ ಮರಗಳು ಬೆಳೆದಿವೆ. ಕೋಲಾರದ ನಾಡಿಗೆ ಇದೊಂದು ಮರೆತುಹೋದ ಸಾಮ್ರಾಜ್ಯವಾದ ವಿಜಯನಗರವಾಗಿದೆ.

ಇಮ್ಮಡಿ ಕದಿರೆಪ್ಪನಾಯಕನು ಈಗ್ಗೆ ೪೫೦ ವರ್ಷಗಳ ಹಿಂದೆ ಜೀವಿಸಿದ್ದನು.

---

## ೧೫. ಚೇತಮಂಗಲದ ಕೆರೆ

ಈಗ್ಗೆ ಸಾವಿರ ವರ್ಷಗಳ ಹಿಂದೆ ಕೋಲಾರ ನಾಡಿನ ದಕ್ಷಿಣದಲ್ಲಿ ಮಹಾವಲಿ ವಂಶದ ಬಾಣರಾಜರು ಆಳುತ್ತಿದ್ದರು. ಅವರಲ್ಲಿ ಪ್ರಸಿದ್ಧನಾದ ವಿಜಯಾದಿತ್ಯ ಎಂಬುವನು ಬಳಿಯಲ್ಲಿ ಹರಿಯುತ್ತಿದ್ದ ಕ್ಷೀರ (ಪಾಲಾರ್) ನದಿಗೆ ಅಡ್ಡಕಟ್ಟೆ ಹಾಕಿಸಿ, ಒಂದು ಕೆರೆಯನ್ನು ಕಟ್ಟಿಸಿದನು. ಅದರ ಬಲದಡದಲ್ಲಿ ಆತನು ಕಟ್ಟಿಸಿದ ಊರಿಗೆ ವಿಜಯಾದಿತ್ಯಮಂಗಲ ಎಂದು ಹೆಸರಾಯಿತು. ಆ ಕೆರೆಯ ಆಸರೆಯಿಂದ ನೂರಾರು ಬಣ ಬೀಡಾಗಿದ್ದ ಎಷ್ಟೋ ಭೂಮಿಯು ಹಸುರು ತೆರೆಯಾಗಿ ಗದ್ದೆ ತೋಟಗಳಾಯಿತು. ಎಲ್ಲರೂ ವಿಜಯಾದಿತ್ಯನನ್ನೂ ಆತನ ಕೆರೆಯನ್ನೂ ಹೊಗಳಿದರು.

ನೂರು ವರ್ಷಗಳ ಬಳಿಕ ನೊಳಂಬರಾಜರು ಆ ಸ್ಥಳವನ್ನು ಆಕ್ರಮಿಸಿದರು. ಇರಿವ ನೊಳಂಬನು ಆಳುತ್ತಿದ್ದಾಗ ಒಮ್ಮೆ ಬಲವಾದ ಪ್ರವಾಹವು ಬಂದು, ಕೆರೆಯಲ್ಲಿ ನೀರೇರಿದ್ದು, ಕಟ್ಟೆಯು ಕಿತ್ತು ಹೋಯಿತು. ಒಡನೆಯೇ ಇರಿವರಾಜನು ಬುದ್ಧಿವಂತರಾದ ಕೆಲಸಗಾರರನ್ನು ಕರೆಯಿಸಿ, ಕೆರೆಯನ್ನು ಭದ್ರಪಡಿಸಿದನು. “ಲೋಕದ ಹಿತಕ್ಕಾಗಿ ತಾನು ಮಾಡಿದ ಕೆಲಸಕ್ಕೆ ಯಾರೂ ಮುಂದೆ ತೊಂದರೆ ಪಡದೆ ಇರಲಿ” ಎಂದು ಆ ಊರಿನ ವಿಜಯರಂಗಸ್ವಾಮಿಯ ಗುಡಿಯ ಗೋಡೆಯ ಮೇಲೆ ಕಲ್ಲಿನ ಶಾಸನವನ್ನು ಬರೆಯಿಸಿದನು.

ಮತ್ತೊಂದು ನೂರು ವರ್ಷಗಳು ಕಳೆಯಲು ಕೆರೆಯ ಏರಿಯು ಪುನಃ ಕಿತ್ತುಹೋಯಿತು. ನಿಂತಿದ್ದ ಬೆಳೆಗಳು ಹಾಳಾಗಿ, ಗದ್ದೆಗಳು ಬಯಲಾಗಿ, ಮುಂಚಿನ ವೇಳೆಗೆ ನೀರಿಲ್ಲದೆ ಮಹಾಸಾಗರದಂತೆ ಇದ್ದ ಕೆರೆಯ ಭಾಗದಲ್ಲಿ ನದಿಯು ಹರಿಯುವುದು ಸಣ್ಣ ಕಾಲುವೆಯಂತೆ ಆಗಿಹೋಯಿತು. ದಷ್ಟಪುಷ್ಟರಾಗಿದ್ದ ರೈತರು ಬಡವರಾಗಬೇಕಾದ ವೇಳೆಯು ಬಂದಿತು. ಸಾಲದುದಕ್ಕೆ ಚೋಳರಾಜರು ಗಂಗರನ್ನೂ ವೈದುಂಬರನ್ನೂ ಸೋಲಿಸಿ ಕೋಲಾರ ಸೀಮೆಯನ್ನು ಗೆದ್ದರು.

ಇಷ್ಟರಲ್ಲಿ ಇನ್ನೂ ಒಂದು ವಿದ್ಯಮಾನವು ನಡೆಯಿತು. ದ್ವಾರಸಮುದ್ರದಲ್ಲಿ ಪ್ರಬಲನಾದ ವಿಷ್ಣುವರ್ಧನನೆಂಬ ಹೊಯ್ಸಳರಾಜನು ಪೂರ್ವಕ್ಕೆ ದಂಡಯಾತ್ರೆ ಹೊರಟನು. ತಲಕಾಡನ್ನು ಗೆದ್ದು, ಮುಳುಬಾಗಲನ್ನು ಸೇರಿ, ನಂಗಲಿಯವರೆಗೂ ನಡೆದು ನಾಡನ್ನು ವಿಸ್ತರಿಸಿದನು.

ಆತನು ನಂಗಲಿಯಲ್ಲಿರುವಾಗ ವಿಜಯಾದಿತ್ಯಮಂಗಲದ ಕೆರೆಯ ದುಃಸ್ಥಿತಿಯು ಆತನಿಗೆ ತಿಳಿಯಿತು. ಒಡನೆಯೇ ತನ್ನ ದಳವಾಯಿ ಚೊಕ್ಕಮಯ್ಯನಿಗೆ ಅಪ್ಪಣೆಮಾಡಲು, ದಳವಾಯಿಯು ಎಚ್ಚರಿಕೆಯಿಂದ ಕೆರೆಯನ್ನು ಸರಿಪಡಿಸಿದನು. ಕೆರೆಯು ನೀರು ಕೂಡಿ ಪುನಃ ಕಂಗೊಳಿಸಿತು. ಅರಸನೇ ದಯಮಾಡಿ ಆ ತಟಾಕವನ್ನು ಅವಲೋಕಿಸಬೇಕೆಂದು ಚೊಕ್ಕಮಯ್ಯನು ಪ್ರಾರ್ಥಿಸಿದನು. ವಿಷ್ಣುವರ್ಧನನೂ ಒಪ್ಪಿ

ಸಹೋದರನಾದ ಉದಯಾದಿತ್ಯನನ್ನೂ ಆತನ ಮಗನನ್ನೂ ಕರೆದು ಕೊಂಡು ಬಂದನು. ಪ್ರಜೆಗಳೆಲ್ಲರೂ ವೀರನೂ ಉದಾರಿಯೂ ದೈವ ಭಕ್ತನೂ ಆದ ಅರಸನನ್ನು ಕಂಡು ಸಂತೋಷಿಸಿದರು. ಆ ಪುಣ್ಯಾತ್ಮನು ಸರಿಪಡಿಸಿದ ಆ ಸರೋವರವು ಒಂಭೈನೂರು ವರ್ಷಕಾಲ ನಿರಪಾಯ ದಿಂದಿದ್ದಿತು.

ಆಮೇಲೆ ಕ್ರಿ. ಶ. ೧೯೦೩ರಲ್ಲಿ ಪುನಃ ಪ್ರವಾಹವು ಬಂದು ಕಟ್ಟೆಯನ್ನು ಕಿತ್ತಿತು. ಆಗತಾನೇ ನಮ್ಮ ನಾಲ್ವಡಿಯ ಶ್ರೀ ಕೃಷ್ಣರಾಜ ಒಡೆಯರವರು ಪಟ್ಟಕ್ಕೆ ಬಂದಿದ್ದರು. ಈ ಸಲ ಮೈಸೂರು ಒಡೆಯರ ಒಲವಿಂದ ಕೆರೆಯು ಭದ್ರವಾಗಲ್ಪಟ್ಟಿತು.

ಹೀಗೆ ಒಂದು ಸಾವಿರ ವರ್ಷಗಳಿಂದಲೂ ಜನೋಪಯುಕ್ತವೆಂದು ಆ ಕೆರೆಯನ್ನು ಪುನಃ ಪುನಃ ಜೋಪಾನಮಾಡಿಕೊಂಡಿದ್ದಾರೆ.

ಈಗ ಅದರ ನೀರನ್ನು ವ್ಯವಸಾಯಕ್ಕೆ ಬಳಸುವುದಿಲ್ಲ. ಅಲ್ಲಿಗೆ ಆರು ಮೈಲಿ ದೂರದಲ್ಲಿರುವ ಕೋಲಾರದ ಚಿನ್ನದ ಗಣಿಗಳ ಜನರ ಉಪಯೋಗಕ್ಕಾಗಿಯೂ, ಯಂತ್ರ ಸೌಕರ್ಯಕ್ಕಾಗಿಯೂ ಮಾತ್ರವೇ ಉಪಯೋಗಿಸುವರು. ಈ ನೀರೇ ಗಣಿಗಳಿಗೆ ಮುಖ್ಯಾಧಾರ.

ವಿಜಯಾದಿತ್ಯಮಂಗಲಕ್ಕೆ ಈಗ ಬೇತಮಂಗಲ ಎಂದು ಹೆಸರು. ಮೊದಲು ಬೇತಮಂಗಲವೇ ತಾಲೂಕಿನ ಮುಖ್ಯಸ್ಥಳವಾಗಿದ್ದಿತು. ಈಗ ಬೌರಿಂಗ್‌ಪೇಟೆಯ ತಾಲೂಕಿನಲ್ಲಿ ಇದು ಸೇರಿದೆ.

ಇಲ್ಲಿನ ನೀರನ್ನು ಶೋಧಿಸುವ ಯಂತ್ರಗಳಿಗೆ "ಜ್ಯೂಯೆಲ್ ಫಿಲ್ಟರ್ಸ್" ಎಂದು ಹೆಸರು. ಮೊದಲು ಕೆರೆಯ ನೀರನ್ನು ಎತ್ತರವಾದ ತೊಟ್ಟಿಗಳಲ್ಲಿ ತುಂಬುವರು. ಅಲ್ಲಿ ಪಟಿಕಾರದ ನೀರನ್ನು ಬೆರೆಯಿಸಿ ಒಗ್ಗಡವು ಕೆಳಕ್ಕೆ ಹೋಗುವ ಹಾಗೆ ಮಾಡುವರು. ತಿಳಿಯಾದ ನೀರನ್ನು ಆಮೇಲೆ ದೊಡ್ಡ ಗುಂಡಾದ ತೊಟ್ಟಿಗಳಿಗೆ ಬಿಡುವರು. ಅಲ್ಲಿ ಮರಳು, ಜಲ್ಲಿಗಳನ್ನು ಸೇರಿಸಿ ಕಡೆದು ಕಲ್ಮಷಗಳನ್ನು ಬೇರೆ ಮಾಡುವರು. ಆಮೇಲೆ ಸಣ್ಣ ಕಾಲುವೆಯಿಂದ ಹರಿಯುವ ಹಾಗೆ ಮಾಡಿ, ಹರಿಯುತ್ತಿರುವಾಗ "ಕ್ಲೋರೀನ್" ಎಂಬ ವಸ್ತುವು ಬೆರೆದ ದ್ರಾವಕವನ್ನು

ಬೆರೆಯಿಸಿ ಸೂಕ್ಷ್ಮಾಣುಗಳನ್ನು ಕೊಲ್ಲುವರು. ಆ ಬಳಿಕ ಶುದ್ಧವಾದ ನೀರನ್ನು ಬಳಸಲು ನಳ್ಳಿಗಳಲ್ಲಿ ಬಿಡುವರು.

ವಿದ್ಯುಚ್ಛಕ್ತಿಯು ಈ ಕೆಲಸಗಳಲ್ಲಿ ತುಂಬಾ ಸಹಾಯಕವಾಗಿದೆ.

---

## ೧೬. ಹೈದರ್ ಆಲಿ

ಬಂಗಾರಪೇಟೆಗೆ ಏಳು ಮೈಲಿ ದೂರದಲ್ಲಿ ಬೂದಿಕೋಟೆ ಎಂಬ ಗ್ರಾಮವಿದೆ. ಅಲ್ಲಿ ಈಗ್ಗೆ ೨೦೦ ವರ್ಷಗಳ ಹಿಂದೆ ಫತ್ತೆ ಮಹಮ್ಮದ್ ಎಂಬಾತನಿಗೆ ಹೈದರ್ ಎಂಬ ಮಗು ಹುಟ್ಟಿತು. ಆ ಮಗುವು ಹುಟ್ಟಿದ ಮನೆಯಿದ್ದ ಭಾಗವನ್ನು ಈಗಲೂ ಗುರುತುಮಾಡಿ ಎಲ್ಲರೂ ನೋಡಲು ಏರ್ಪಡಿಸಿದ್ದಾರೆ.

ಹೈದರನ ತಂದೆಯು ಬಲು ಬಡವನು. ಆತನು ಕೋಲಾರದಲ್ಲಿ ಕೆಲವು ಕಾಲ ಕುದುರೆ ಸೈನ್ಯದಲ್ಲಿ ಕೆಲಸದಲ್ಲಿದ್ದನು. ಹೈದರನೂ ಚಿಕ್ಕಂದಿನಿಂದ ಸೈನ್ಯಕ್ಕೆ ಸೇರಲು ಹಂಬಲಿಸುತ್ತಿದ್ದನು. ಹೀಗಿರುವಾಗ ಫತ್ತೆ ಮಹಮ್ಮದನು ಸತ್ತುಹೋದನು. ಸಾಲಗಾರರ ಕಾಟ ಬಲವಾಯಿತು. ಹೈದರನ ತಾಯಿಯು ಮಕ್ಕಳನ್ನು ಕರೆದುಕೊಂಡು ದೊಡ್ಡಬಳ್ಳಾಪುರಕ್ಕೆ ನೆಂಟರ ಮನೆಗೆ ಹೋದಳು. ಅಲ್ಲಿಯೂ ಒಬ್ಬ ಸಾಲಗಾರನು ತನ್ನ ಬಾಕಿಯು ಫೈಸಲಾಗದೆ ಇದ್ದುದಕ್ಕಾಗಿ ಮಕ್ಕಳಾದ ಹೈದರನನ್ನೂ ಆತನ ತಮ್ಮನನ್ನೂ ಒಂದು ನಗಾರಿಯ ಕೆಳಗೆ ಕೂಡಿಸಿ, ನಗಾರಿಯನ್ನು ಬಾರಿಸಿ ಹಿಂಸಿಸಿದನು.

ಸ್ವಲ್ಪ ವಯಸ್ಸಾಗುತ್ತಲೇ ಹೈದರನು ಹತ್ತಿರ ಇರುವ ದೇವನಹಳ್ಳಿಗೆ ಹೋಗಿ, ಅಲ್ಲಿ ಕುದುರೆಯ ಚಾಕರಿಗೆ ಸೇರಿದನು. ಮೈಸೂರು ದಳವಾಯಿಗಳ ದಂಡು ಅಲ್ಲಿಗೆ ಬಂದಿದ್ದಾಗ ಅದರಲ್ಲಿ ಸೇರಿ ತನ್ನ ಸಾಹಸದಿಂದ ಸೈನಿಕನಾದನು. ಅವರೊಡನೆ ಅಲ್ಲಲ್ಲಿ ಯುದ್ಧಗಳಿಗೆ ಹೋಗಿ ಬರುತ್ತಾ ತನ್ನ ಪರಾಕ್ರಮದಿಂದ ದಂಡಿಗೆ ಮುಖಂಡನಾದನು.

ಆಗ್ಗೆ ಮೈಸೂರಿನ ಒಡೆಯರಾಗಿದ್ದ ಚಿಕ್ಕಕೃಷ್ಣರಾಜ ಒಡೆಯರು ಇನ್ನೂ ಚಿಕ್ಕವರು. ದಳವಾಯಿಯಾದ ಕರಾಚೂರಿ ನಂಜರಾಜಯ್ಯನೇ

ಅಧಿಕಾರವನ್ನೆಲ್ಲಾ ಪಡೆಯಬೇಕೆಂದಿದ್ದನು. ಆದರೆ ಹೈದರನು ದಳವಾಯಿಯನ್ನೇ ಮೀರಿಸಿ ಯುಕ್ತಿಯಿಂದಲೂ ಶಕ್ತಿಯಿಂದಲೂ ಮೈಸೂರು ದೇಶದಲ್ಲೆಲ್ಲಾ ಪ್ರಬಲನಾದನು. ಮರಾಟೆಯವರು, ಹೈದರಾಬಾದಿನವರು, ಇಂಗ್ಲಿಷರು ಇವರುಗಳನ್ನೆಲ್ಲಾ ಹಿಂದೆ ಹಾಕಿ, ಮೈಸೂರು ರಾಜ್ಯವನ್ನು ತುಂಬಾ ಹೆಚ್ಚಿಸಿದನು. ಫ್ರೆಂಚರ ಸಹಾಯವನ್ನು ಪಡೆದು ಮೈಸೂರಿನ ದಂಡಿನವರಿಗೆ ಉತ್ತಮ ರಣವಿದ್ಯೆಯನ್ನೂ ಶಿಸ್ತನ್ನೂ ಕಲಿಸಿದನು. ಈ ಕೆಲಸಗಳಲ್ಲೆಲ್ಲಾ ಪೂರ್ಣಯ್ಯನೆಂಬ ಬ್ರಾಹ್ಮಣನು ಹೈದರನಿಗೆ ತುಂಬಾ ಸಹಾಯವಾಗಿದ್ದನು. ಕಡೆಗೆ ಇಂಗ್ಲಿಷರ ಮೇಲೆ ಎರಡನೆಯ ಸಲ ಯುದ್ಧಮಾಡುತ್ತಿರುವಾಗ ಆರ್ಕಾಟಿನ ಬಳಿ ಬೆನ್ನುಫಣಿ ಕಾಯಿಲೆಯಿಂದ ಹೈದರನು ಕಾಲವಾದನು.

ಹೈದರನು ಹುಟ್ಟಿದುದು ನಾಲಗಾರನ ಬಡ ಗುಡಿಸಿಲಿನಲ್ಲಿ. ಇವನಿಗೆ ಓದುಬರಹವೇ ಬರುತ್ತಿರಲಿಲ್ಲ. ಆದರೂ ಸತ್ವದಿಂದ ಇಂಗ್ಲಿಷರನ್ನೇ ಸೋಲಿಸಿ, ಮೈಸೂರಿಗೆ ಅಧಿನಾಯಕನಾಗಿ ನವಾಬ್ ಹೈದರಲ್ಲೀ ಖಾನ್ ಬಹದ್ದೂರ್ ಎಂದು ಕೀರ್ತಿವಂತನಾದನು. ಈತನ ಮಗ ಟೀಪೂ ಸುಲ್ತಾನನು 'ಮೈಸೂರು ಹುಲಿ' ಎಂದು ಹೆಸರುಹೊಂದಿ ಇಂಗ್ಲಿಷರನ್ನು ಅದುರಿಸಿಬಿಟ್ಟನು.

ದೊಡ್ಡ ಪದವಿಗೆ ಬಂದರೂ ಹೈದರನು ತಾನು ಹುಟ್ಟಿದ ನೆಲವನ್ನು ಮರೆಯಲಿಲ್ಲ. ಕೋಲಾರದ ಬೆಟ್ಟಗಳಲ್ಲಿ ಕೋಟೆಯನ್ನು ಬಲಪಡಿಸಿದನು. ನಂದಿಯ ದುರ್ಗವನ್ನೂ ಸುತ್ತುಮುತ್ತಲಿನ ಪ್ರದೇಶವನ್ನೂ ಭದ್ರಪಡಿಸಿದನು. ನಂದಿಯ ಪಕ್ಕದಲ್ಲಿ ಹೈದರನು ಶತ್ರುಗಳನ್ನು ಸೆರೆಯಿಡುತ್ತಿದ್ದ ಗುಡ್ಡಕ್ಕೆ ಈಗಲೂ ಹೈದರ್ ಗುಡ್ಡ ಎಂದು ಹೆಸರಿದೆ.

ತನ್ನ ತಂದೆ, ತಾಯಿ ಮತ್ತು ಇತರ ನಂಟರ ಸಮಾಧಿಗಳನ್ನು ಕೋಲಾರದಲ್ಲಿ ಸುಂದರವಾದ "ದರ್ಗ"ವನ್ನು ಕಟ್ಟಿಸಿ ಅಲ್ಲಿ ಮಾಡಿಸಿದನು.

ಬುದ್ಧಿಯಿದ್ದರೆ ಸಿದ್ಧಿ ಎಂಬುದನ್ನು ಲೋಕಕ್ಕೆ ಹೈದರನು ಕಾಣಿಸಿದನು.

— —


# ೧೭. ಬಂಗಾರದ ಗಣಿಗಳು

ಕೋಲಾರದ ನೆಲದಲ್ಲಿ ಹೊನ್ನೂ (ಬಂಗಾರವೂ), ಕರ್ಬೊನ್ನೂ (ಕಬ್ಬಿಣವೂ) ಇರುವುದು ಬಹು ಹಿಂದಿನ ಕಾಲದಲ್ಲಿಯೇ ತಿಳಿದಿತ್ತು. ಈಗ್ಗೆ ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಕೋಲಾರದ ನೆಲದಲ್ಲಿ ತೆಗೆದ ಬಂಗಾರವನ್ನು ಉತ್ತರ ಹಿಂದೂಸ್ಥಾನದ ಸಿಂಧೂ ತೀರದ ಜನರು ಬಳಸಿದ್ದರೆಂದು ತಿಳಿದುಬಂದಿದೆ. ಬಂಗಾರವು ಬೌರಿಂಗ್‌ಪೇಟೆಯ ತಾಲೂಕಿನಲ್ಲಿಯೂ, ಕಬ್ಬಿಣವು ಬಾಗೇಪಲ್ಲಿ ಶ್ರೀನಿವಾಸಪುರ ತಾಲೂಕುಗಳಲ್ಲಿಯೂ ಹೇರಳವಾಗಿದೆ. ಆದರೆ ಯಂತ್ರ ಸೌಕರ್ಯಗಳ ಅಭಾವ ಮತ್ತು ಇನ್ನೂ ಸುಲಭವಾಗಿ ಬೇರೆ ಕಡೆ ದೊರೆಯುವುದು ಎಂಬ ಕಾರಣಗಳಿಂದ ನಮ್ಮ ಜಿಲ್ಲೆ ಕಬ್ಬಿಣದ ಕೈಗಾರಿಕೆಯು ನಿಂತು ಹೋಯಿತು.

ಟೀಪು ಸುಲ್ತಾನನಿಗೆ ಇಲ್ಲಿ ಬಂಗಾರವಿರುವುದು ತಿಳಿದಿತ್ತು. ಆತನು ರಾಜಾ ರಾಮಚಂದ್ರ ಎಂಬುವನ ಸಹಾಯದಿಂದ ಅಲ್ಲಿ ಕೆಲವು ಗಣಿಗಳನ್ನು ಶೋಧಿಸಿದನು. ಬಂಗಾರವೇನೋ ದೊರೆತಿತು. ಆದರೆ ಕಷ್ಟಕ್ಕೆ ತಕ್ಕ ಲಾಭವಿರಲಿಲ್ಲ. ಯಂತ್ರಗಳಿಲ್ಲ, ಬೆಳಕಿಲ್ಲ, ನೀರಿಲ್ಲ. ಹೀಗೆ ಆವಶ್ಯಕವಾದ ಯಾವ ಸರಿಯಾದ ಸಾಧನವೂ ಇಲ್ಲದೆ ಗಣಿಗಳನ್ನು ಹಾಗೆಯೇ ಬಿಟ್ಟು, ಗಣಿಗಳ ಕೆಲಸವನ್ನು ನಿಲ್ಲಿಸಿಬಿಟ್ಟನು.

ಟೀಪುವು ಮಡಿದ ಮೇಲೆ ರಾಜ್ಯವು ಮೈಸೂರು ಒಡೆಯರ ವಶಕ್ಕೆ ಬಂದಿತು. ಅವರು ತಮ್ಮ ಸೀಮೆಯನ್ನು ಅಳೆದು ಗುರುತಿಸಲು ಜಾನ್ ವಾರೆನ್ನನೆಂಬ ಇಂಗ್ಲೀಷರವನಿಗೆ ಅಧಿಕಾರಕೊಟ್ಟರು. ಈಗ್ಗೆ ನೂರಮೂವತ್ತು ವರ್ಷಗಳ ಹಿಂದೆ ಇಲ್ಲಿನ ನೆಲದಲ್ಲಿ ಅಪಾರವಾದ ಅಪರಂಜಿಯಿದೆ ಎಂದು ಆತನು ನಿರ್ಣಯಿಸಿದನು. ಅಷ್ಟರಲ್ಲಿ ಮೈಸೂರು ಸೀಮೆಯನ್ನು ಇಂಗ್ಲೀಷರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.

ಆಗ, ಎಂದರೆ, ಈಗ್ಗೆ ೭೦ ವರ್ಷಗಳ ಹಿಂದೆ ಲಾವಲೆ ಎಂಬಾತನು ತಾನು ಅಲ್ಲಿ ಬಂಗಾರ ತೆಗೆಯುವ ಸಾಹಸವನ್ನು ಮಾಡುವೆನೆಂದು ಹೇಳಿ ರಹದಾರಿಯನ್ನು ಪಡೆದನು.



ಕೋಲಾರದ ಚಿನ್ನದ ಗಣಿಗಳ ಒಂದು ದೃಶ್ಯ

ಈ ಸಮಯಕ್ಕೆ ಸರಿಯಾಗಿ ಇನ್ನೂ ಕೆಲವರು ಇಲ್ಲಿಗೆ ಸಮೀಪ
ದಲ್ಲಿಯೇ ವೈನಾಡಿನಲ್ಲಿ ಇನ್ನೂ ಸುಲಭವಾಗಿ ಮತ್ತೂ ಹೇರಳವಾಗಿ
ಹೊನ್ನು ದೊರೆಯುವುದೆಂದು ಪ್ರಕಟಿಸಿದರು. ಅನೇಕರು ನಾಮು
ತಾಮೆಂದು ಈ ಕೆಲಸಕ್ಕೆ ಹಣವನ್ನು ಮುಂದುಮಾಡಿದರು. ಆದರೆ
ಐದು ವರ್ಷಗಳೊಳಗಾಗಿ ವೈನಾಡಿನ ಬಂಗಾರದ ಬಡಾಯಿ ಭಂಗವಾಗಿ
ಹೋಯಿತು.

ಇದಾದ ಮೂರು ವರ್ಷಗಳಲ್ಲಿ ಮೈಸೂರು ರಾಜ್ಯವು ಒಡೆಯರ
ವಶಕ್ಕೆ ಮತ್ತೆ ದೊರೆಯಿತು. ಆಗ ಮತ್ತೊಂದು ಗುಂಪಿನ ಇಂಗ್ಲೀಷರು
ಅಪ್ಪಣೆಯನ್ನು ಪಡೆದು, ಹಣವನ್ನು ಕೂಡಿಸಿ, ಯಂತ್ರಗಳನ್ನು ತರಿಸಿ
ಪುನಃ ಕೆಲಸವನ್ನು ಪ್ರಾರಂಭಿಸಿದರು. ನಾಲ್ಕು ವರ್ಷಗಳವರೆಗೂ
ಏನೂ ಫಲವಾಗಲಿಲ್ಲ. ಕೋಲಾರದ ಕೆಲಸವು ವೈನಾಡಿನ ಬಡಾಯಿ
ಯಂತೆ ಅನ್ಯಾಯವಾಗುವುದೇನೋ ಎಂದು ಎಲ್ಲರೂ ಹೆದರಿದ್ದರು.

ಆದರೆ ಈಗ್ಗೆ ಐವತ್ತು ವರ್ಷಗಳ ಹಿಂದೆ (೧೮೮೫ರಲ್ಲಿ) ಛಾಂಪಿಯನ್
ಗೋಲ್ಡ್ ರೀಫ್ ಎಂಬ ಅದುರಿನ ಮೂಲವು ಕಾಣಿಸಿತು. ಕಂಪೆನಿ
ಯವರಿಗೆ ಧೈರ್ಯ ಬಂತು. ಕೆಲಸವನ್ನು ಬಲಪಡಿಸಿದರು. ಇದೇ
ಹೊತ್ತಿಗೆ ಶಿವನಸಮುದ್ರದ ಜಲಪಾತವನ್ನು ಉಪಯೋಗಿಸಿ ಮೈಸೂರು
ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಪಡೆದರು. ಗಣಿಗಳ ಗುಂಪಿ
ನವರು ಬಾಡಿಗೆಗೆ ಈ ಶಕ್ತಿಯನ್ನು ಪಡೆದರು. ಸ್ವಲ್ಪ ಕಾಲದಲ್ಲಿಯೇ
ಬೇತಮಂಗಲದ ಕೆರೆಯನ್ನು ಮೈಸೂರು ಸರ್ಕಾರದವರು ಭದ್ರಮಾಡಿ
ಸಲು ಗಣಿಗಳವರು ಆ ನೀರಿನ ಸೌಕರ್ಯವನ್ನು ಪಡೆದರು. ವಿದ್ಯುಚ್ಛಕ್ತಿ
ಯಿಂದ ಕೆಲಸಗಾರರಿಗೆ ನೀರು, ಬೆಳಕು, ಗಾಳಿ, ಯಂತ್ರಶಕ್ತಿ
ಮುಂತಾದ ಸಕಲ ಸೌಕರ್ಯಗಳೂ ಒದಗಿದುವು. ಹಣವು ಹೆಚ್ಚಾ
ದರೂ ಕೆಲಸವು ಬಹು ಸುಲಭವಾಯಿತು. ಪುಣ್ಯಕ್ಕೆ ತಕ್ಕಂತೆ ಹೊಸ
ಹೊಸ ಹೊನ್ನಿನ ಹೊಳಲುಗಳು ದೊರೆತುವು. ಅವಕ್ಕೆ ನಂದಿದುರ್ಗ,
ಬಾಲಘಾಟ್, ಕೋರಮಾಂಡೆಲ್ ಮುಂತಾದ ಹೆಸರುಗಳಿಟ್ಟು ಅಲ್ಲಲ್ಲಿಯೇ
ಕೆಲಸ ನಡೆಯಿಸತೊಡಗಿದರು. ರೈಲು ದಾರಿಯೂ ಏರ್ಪಾಟಾಗಿ

ಚಿನ್ನವನ್ನೆಲ್ಲಾ ಸೀಮೆಗೆ ಸಾಗಿಸುವುದೂ ಸುಲಭವಾಯಿತು. ಜಾನ್ ಟೈಲರ್ ಅಂಡ್ ಕಂಪೆನಿ ಎಂಬ ಸಂಘವೇ ಇಷ್ಟು ಸಾಹಸಮಾಡಿತು.

ಈಗ ಗಣಿಗಳ ಬಂಗಾರವನ್ನು ಸಂಘದವರು ಸೀಮೆಗೆ ಸಾಗಿಸಿ ಬಿಡುವರು. ಮೈಸೂರು ಸರ್ಕಾರದವರಿಗೆ ನೀರಿನ ತೆರಿಗೆ, ವಿದ್ಯುಚ್ಛಕ್ತಿಯ ಬಾಡಿಗೆ, ಬಂಗಾರದ ಮೇಲಿನ ರಾಜಾದಾಯ ಇವುಗಳು ದೊರೆಯುವುವು.

ಮೊದಲು ಬೆಂಗಾಡಿನಂತಿದ್ದ ಬಯಲು ಮನುಷ್ಯನ ಸಾಹಸದಿಂದ ಈಗ ಗಜಿಬಿಜಿಗುಟ್ಟುವ, ಲಕ್ಷಾಂತರ ಜನರು ತುಂಬಿದ, ಬಂಗಾರದ ಧೂಳೂ, ಹೊಗೆಯೂ ತುಂಬಿ ಘೋರಿಡುತ್ತಿರುವ ನಗರವಾಗಿದೆ. ಗಣಿಗಳಿರುವ ಪ್ರದೇಶದ ಜನಸಂಖ್ಯೆ ಸುಮಾರು ೮೫,೦೦೦. ಇಲ್ಲಿ ಸುಮಾರು ೪೦,೦೦೦ ಮಂದಿ ಇತರ ಪ್ರಾಂತ್ಯಗಳಿಂದ ಕೆಲಸಕ್ಕಾಗಿ ಬಂದಿರುತ್ತಾರೆ. ರಾಬರ್ಟ್‌ಸನ್ ಪೇಟೆ ಎಂಬುದೇ ಗಣಿಗಳ ಮುಖ್ಯ ವ್ಯವಹಾರ ಪ್ರದೇಶವಾಗಿದೆ.

ಆರು ಸಾವಿರ ಅಡಿಗಳವರೆಗೂ ಗುಣಿಗಳನ್ನು ತೋಡಿ, ಪಕ್ಕದ ಸುರಂಗಗಳನ್ನು ಮಾಡಿ, ಬಂಗಾರವಿರುವ ಕಲ್ಲುಗಳನ್ನು ತೆಗೆದು ತಂದು, ಪುಡಿಮಾಡುವರು. ಮೊದಲು ಪುಡಿಯನ್ನು ನೀರಿನಿಂದ ಜಾಲಿಸಿ ಬಂಗಾರವನ್ನು ಪಡೆಯುವರು. ಆಮೇಲೆ ಪಾದರಸದ ತಟ್ಟೆಗಳ ಮೇಲೆ ಹರಿಯಿಸಿ ಉಳಿದ ಚಿನ್ನವನ್ನು ತೆಗೆಯುವರು. ಕಡೆಗೆ ಸ್ಯಾನೈಡ್ ಎಂಬ ದ್ರಾವಕವನ್ನು ಬೆರೆಯಿಸಿ ನಿಂತ ಸುವರ್ಣವನ್ನು ಸೆಳೆಯುವರು. ತೆಗೆಯಲು ಅಸಾಧ್ಯವಾದ ಅತ್ಯಲ್ಪ ಭಾಗವಿರುವ ಮಣ್ಣನ್ನು ಗುಡ್ಡಗಳಂತೆ ರಾಶಿರಾಶಿಯಾಗಿ ಸುರಿದು ಕಾವಲಿರಿಸಿರುವರು. ಈ ಮಣ್ಣಿನಲ್ಲಿ ನಿಂತಿರುವ ಭಾಗದ ಬಂಗಾರವನ್ನು ಎಳೆದು ಬಿಡಲು ಉಪಾಯಗಳನ್ನು ಹವಣಿಸುತ್ತಿರುವರು.

ಗಣಿಗಳಿಗೆ ಹೋಗಿ ಒಂದುಸಲ ನೋಡಿದರೆ ಸಾಕು. ಮನುಷ್ಯನಿಗೆ ದೇವರು ಕೊಟ್ಟಿರುವ ಅದ್ಭುತವಾದ ಬುದ್ಧಿಬಲ, ಅವನ್ನು ಸಾಹಸಯುಕ್ತಿಗಳಿಂದ ಉಪಯೋಗಿಸಬಲ್ಲ ಸಾಮರ್ಥ್ಯ, ಯಂತ್ರಗಳ

ಅಸಾಮಾನ್ಯಶಕ್ತಿ, ಬಂಗಾರದ ಹೊಳಪು—ಇವು ಸ್ಪಷ್ಟವಾಗಿ ಮನಸ್ಸಿಗೆ ತಿಳಿಯುವುವು.

ಬೌರಿಂಗ್‌ಪೇಟೆಯಿಂದ ಕೆ. ಜಿ. ಎಫ್. (ಕೋಲಾರ ಗೋಲ್ಡ್ ಫೀಲ್ಡ್ಸ್) ರೈಲ್ವೆ ಎಂಬ ರೈಲು ದಾರಿಯು ಹತ್ತು ಮೈಲಿಗಳ ದೂರ ಗಣಿಗಳಿರುವ ಪ್ರದೇಶಗಳಿಗೆ ಹೋಗುವುದು.

---

## ೧೮. ಮಾಲೂರು

ಮಾಲೂರು ಕೋಲಾರಕ್ಕೆ ವಾಯುವ್ಯದಲ್ಲಿ ೧೮ ಮೈಲಿ ದೂರದಲ್ಲಿದೆ. ಈ ಎರಡು ಊರುಗಳ ನಡುವೆ ವಕ್ಕಲೇರಿ ಎಂಬ ಗ್ರಾಮದ ಬಳಿ ಗುಡ್ಡದ ಮೇಲೆ ಮಾರ್ಕಂಡೇಶ್ವರನ ಗುಡಿಯಿದೆ. ಹಿಂದೆ ಈ ದೇವರ ಪೂಜೆಗಾಗಿ ಮಲ್ಲಿಗೆ ಹೂವನ್ನು ಒದಗಿಸುವುದಕ್ಕಾಗಿ ತೋಟಗಳುಳ್ಳ ಒಂದು ಊರಿದ್ದಿತು. ಅದಕ್ಕೆ ಮಲ್ಲಿಕಾಪುರ ಎಂದು ಹೆಸರಿದ್ದಿತು. ಮರಾಟೆಯವರ ಹೃದಯರಾಮಸಿಂಗ್ ಎಂಬ ಜಮಾದಾರನು ಈ ನೆಲವನ್ನು ಗೆದ್ದಮೇಲೆ ಊರನ್ನು ಬಲಪಡಿಸಿ ಈಗ್ಗೆ ಸುಮಾರು ೨೦೦ ವರ್ಷಗಳ ಹಿಂದೆ ಇದಕ್ಕೆ ಮಾಲೂರು ಎಂದು ಹೆಸರನ್ನು ಬದಲಾಯಿಸಿದನು. ಬೆಂಗಳೂರು ಮದರಾಸು ರೈಲು ಈ ತಾಲೂಕಿನ ಮಾಲೂರು ಮತ್ತು ತ್ಯಾಕಲ್ಲು ಸ್ಟೇಷನ್ನುಗಳ ಮುಖಾಂತರ ಓಡುವುದು.

ಈ ತಾಲೂಕು ಹಿಂದೆ ಗಂಗರಾಜರು, ಚಾಲುಕ್ಯರು, ಹೊಯ್ಸಳರು, ವಿಜಯನಗರದವರು, ಯಲಹಂಕ ಮತ್ತು ಹೊಸಕೋಟೆಯ ಪಾಳೆಯಗಾರರು, ಇವರಿಗೆ ಕಾಲಾನುಕ್ರಮವಾಗಿ ಸೇರಿದ್ದಿತು. ಆ ಬಳಿಕ ಬಿಜಾಪುರದವರೂ ಅವರಿಂದ ಮರಾಟೆಯವರೂ ಪಡೆದು, ಕಡೆಗೆ ಹೈದರನಿಗೂ ಆಮೇಲೆ ಮೈಸೂರು ಒಡೆಯರ ರಾಜ್ಯಕ್ಕೂ ಸೇರಿತು. ಈಗಲೂ ಈ ತಾಲೂಕಿನ ಮಧ್ಯೆ ಕೆಲವು ಗ್ರಾಮಗಳು ಬ್ರಿಟಿಷರಿಗೆ ಸೇರಿವೆ.

ಗಂಗರಸರು ಜೈನ ಬಸ್ತಿಯನ್ನು ಕಟ್ಟಿಸಿ ದೇವಾದಾಯಗಳನ್ನು ಬಿಟ್ಟಿರುವುದಕ್ಕೂ, ಉತ್ತರ ರಾಜರೂ ಪಾಳೆಯಗಾರರೂ ದಾನಗಳನ್ನೂ ಮಾನ್ಯಗಳನ್ನೂ ಅಂಡುಗೆಗಳನ್ನೂ ಕೊಟ್ಟಿರುವುದಕ್ಕೂ ಈ ತಾಲೂಕಿನಲ್ಲಿ ಶಾಸನಗಳಿವೆ. ಕೆಲವು ವೀರಗಲ್ಲುಗಳೂ ಇವೆ. ಈ ತಾಲೂಕಿನಲ್ಲಿರುವ ಚೆನ್ನರಾಯಪುರದ ಬಳಿ ಒಬ್ಬ ಪೂಜಾರಿಯು ಒಂದು ಹುಲಿಯನ್ನು ತಿವಿದು ಕೊಂದುದಕ್ಕಾಗಿ ವೀರಗಲ್ಲನ್ನು ನೆಟ್ಟಿದ್ದಾರೆ.

ಬೆಳ್ಳೂರೆಂಬ ಊರಿನಲ್ಲಿ ಈಗ್ಗೆ ಸುಮಾರು ೬೦೦ ವರ್ಷಗಳ ಹಿಂದೆ ಮಣವಾಳ ಮಹಾಮುನಿಯ ಶಿಷ್ಯನೂ, ಪ್ರತಿವಾದಿಭಯಂಕರರ ವಂಶದವನೂ ಆದ ಅಣ್ಣಂಗರಾಚಾರ್ಯನೆಂಬುವನು ಕಂಚಿಯಿಂದ ಬಂದು ನೆಲಸಿದನಂತೆ. ಆತನ ಶಿಷ್ಯವರ್ಗಕ್ಕೆ ಸೇರಿದ ಇಲ್ಲಿನ ಬೇಡರು ಗೋಮಾಂಸ ಭಕ್ಷಕರಾಗಿದ್ದುದು ಆತನಿಗೆ ತಿಳಿದು, ಆತನು ಮೇಲುಕೋಟೆಗೆ ಹೊರಟುಹೋಗಬೇಕೆಂದು ಮನಸ್ಸುಮಾಡಿದನು. ಅಷ್ಟರಲ್ಲಿ ಆ ಶಬರರು ಗುರುಗಳ ಪಾದದ ಮೇಲೆ ಆಣೆಯಿಟ್ಟು ತಾವು ಗೋಹತ್ಯೆಯನ್ನೂ ಗೋಮಾಂಸ ಸೇವನೆಯನ್ನೂ ಬಿಡುವುದಾಗಿ ಹೇಳಿ ಹಾಗೆಯೇ ಮಾಡಿದರಂತೆ. ಈಗಲೂ ಆ ಗುರುಗಳ ಪಾದದ ಗುರುತನ್ನು ಆ ಗ್ರಾಮದಲ್ಲಿ ಪೂಜಿಸುತ್ತಾರೆ. ಈ ಊರಿಗೆ ವಿಷ್ಣುವರ್ಧನ ಚತುರ್ವೇದಿ ಮಂಗಲನೆಂದೂ ಹೆಸರಿದ್ದಿತು.

ಸುಮಾರು ಆ ವೇಳೆಯಲ್ಲಿಯೇ ಕಂಚಿಯ ಕಡೆಯಿಂದ ಚೊಕ್ಕಬಾಪಟಿ ಎಂಬುವನು ತನ್ನ ಮಗಳನ್ನು ರಕ್ಷಿಸಲು ಈ ಕಡೆಗೆ ಓಡಿ ಬಂದು ನೆಲಸಿದನು. ಆತನು ವಿಜಯನಗರದವರಿಗೆ ಮಾಡಿದ ಸಹಾಯದ ಪ್ರತಿಫಲವಾಗಿ ಈ ಪ್ರದೇಶವನ್ನು ಉಂಬಳಿಯಾಗಿ ಪಡೆದು ಮಾಸ್ತಿ ಎಂಬ ಊರನ್ನು ಕಟ್ಟಿ ಆಳಿದನು.

ಈ ತಾಲೂಕಿನ ಶಿವಾರಪಟ್ಟಣದಲ್ಲಿರುವ ಪಾಂಚಾಲರು ಈಗಲೂ ಉತ್ತಮ ತರಹೆಯ ಶಿಲಾವಿಗ್ರಹಗಳನ್ನೂ ಲೋಹಮೂರ್ತಿಗಳನ್ನೂ ಮಾಡುವರು.

ಯಜ್ಞೇಶ್ವರ ಪ್ರತಿಷ್ಠೆಯೆಂದೂ ಜನಮೇಜಯ ಊರ್ಜಿತನೆಂದೂ ಹೇಳಲ್ಪಡುವ ಶ್ರೀನಿವಾಸ ವಿಗ್ರಹವು ಈ ತಾಲೂಕಿನ ತಿರುಪತಿ ಎಂಬ ಗ್ರಾಮದಲ್ಲಿದೆ. ದೊಡ್ಡ ತಿರುಪತಿಗೆ ಹೋಗಲು ಆಗದ ಅನೇಕರು ಇಲ್ಲಿಯೇ ತಿರುಪತಿ ಯಾತ್ರೆಯನ್ನು ನಡಸುವರು.

ಇಲ್ಲಿಗೆ ಸಮೀಪದ ತೊರ್ನಹಳ್ಳಿಯಲ್ಲಿ ಸಪ್ಪಲಮ್ಮನ ಜಾತ್ರೆಯು ದೊಡ್ಡದಾಗಿ ನಡೆಯುವುದು.

ಮಾಲೂರು ತಾಲೂಕಿನ ಭೂಮಿಯು ಉತ್ತಮವಾಗಿದ್ದು ಒಳ್ಳೆಯ ತರಕಾರಿಗಳು ಬೆಳೆಯುವುವು. ಇಲ್ಲಿ ನೀರಿನ ವಸತಿಯೂ, ಜನಸಾಂದ್ರತೆಯೂ, ವಿದ್ಯಾಭ್ಯಾಸವೂ ಹೆಚ್ಚಾಗಿರುವುವು.

---

## ೧೯. ಲವ ಕುಶರು

ಆದಿಕವಿಯಾದ ವಾಲ್ಮೀಕಿಯು ಒಂದು ದಿನ ತನ್ನ ತಪೋವನದ ಒಳ ಸಂಚರಿಸುತ್ತಿದ್ದಾಗ ಗರ್ಭಿಣಿಯಾದ ಸೀತೆಯು ಗೋಳಾಡುತ್ತಿದ್ದುದನ್ನು ಕಂಡನು. ಶ್ರೀರಾಮನು ಲೋಕವನ್ನು ಮೆಚ್ಚಿಸುವುದಕ್ಕೂ, ಸೀತೆಯ ಪಾತಿವ್ರತ್ಯವನ್ನು ಎಲ್ಲರಿಗೆ ತಿಳಿಸುವುದಕ್ಕೂ ಅಗಸನು ನಿಂದಿಸಿದನೆಂಬ ನೆಪದಿಂದ ಸೀತೆಯನ್ನು ಅಡವಿಯಲ್ಲಿ ಏಕಾಕಿನಿಯಾಗಿ ಬಿಡಿಸಿದನು. ವಾಲ್ಮೀಕಿ ಮಹರ್ಷಿಯ ಆಶ್ರಮದಲ್ಲಿ ಸೀತೆಯು ಲವ ಕುಶ ಎಂಬಿಬ್ಬರು ಅವಳಿಮಕ್ಕಳನ್ನು ಹಡೆದಳು. ಋಷಿಯೇ ಅವರಿಗೆ ಸರ್ವವಿದ್ಯೆಗಳನ್ನೂ ಕಲಿಸಿ, ಅವರ ಗಾಯನಕ್ಕಾಗಿ ರಾಮಾಯಣವನ್ನು ರಚಿಸಿಕೊಟ್ಟನು.

ಮುಂದೆ ಶ್ರೀರಾಮನ ಅಶ್ವಮೇಧದ ಮುಡುಪಾದ ಕುದುರೆಯು ಲಕ್ಷ್ಮಣನ ಬೆಂಗಾವಲಿನಿಂದ ವಾಲ್ಮೀಕಿಗಳ ಆಶ್ರಮಕ್ಕೆ ಬಂದಿತು. ಲವ ಕುಶರು ಅದನ್ನು ತಡೆದರು. ಮಹಾಯುದ್ಧವಾಯಿತು. ಲಕ್ಷ್ಮಣ, ಶತ್ರುಘ್ನ, ಭರತ ಮೊದಲಾದವರು ಸೋತುದು ಸಾಲದೆ ಕಡೆಗೆ ಶ್ರೀರಾಮನೇ ಬಂದು, ಹೋರಾಡಿ, ತನ್ನ ಮಕ್ಕಳ ಕೈಯ

ಬಾಣದಿಂದಲೇ ಸೋತು ಮೂರ್ಛೆಗೊಂಡನು. ಆ ಹೊತ್ತಿಗೆ ಬಂದ ವಾಲ್ಮೀಕಿಗಳ ದಯೆಯಿಂದ ಎಲ್ಲವೂ ಮಂಗಳಕರವಾಗಿ ಕೊನೆಗಂಡಿತು. ಶ್ರೀರಾಮನು ಪತ್ನೀಪುತ್ರರೊಡನೆ ಅಯೋಧ್ಯೆಗೆ ಹಿಂದಿರುಗಿ ಸುಖವಾಗಿ ರಾಜ್ಯವಾಳಿದನು.

ಆದಿಕವಿಯೂ ಶ್ರೀಮದ್ರಾಮಾಯಣದ ಕರ್ತೃವೂ ಆದ ವಾಲ್ಮೀಕಿಯು ಇದ್ದ ಸ್ಥಳವೂ, ಗಂಡುಗಲಿಗಳಾದ ಮಕ್ಕಳು ಶ್ರೀರಾಮರನ್ನೇ ಗೆದ್ದ ನೆಲವೂ ಮುಳುಬಾಗಲು ತಾಲೂಕಿನ ಆವನೀ ಎಂಬ ಪ್ರದೇಶವೆಂದು ಇಲ್ಲಿನ ಜನರ ನಂಬಿಕೆ. ಅಲ್ಲಿಯ ಗುಡ್ಡದಲ್ಲಿ ವಾಲ್ಮೀಕಿಗಳು ವಾಸಿಸುತ್ತಿದ್ದ ಗುಹೆ, ಸೀತೆಯು ಮಕ್ಕಳನ್ನು ಹೆತ್ತ ಸ್ಥಳ, ಅವರನ್ನು ತೂಗುತ್ತಿದ್ದ ಪ್ರದೇಶ, ಯುದ್ಧವಾಗುತ್ತಿದ್ದಾಗ ಸೀತೆಯು ನೋಡಲು ಕುಳಿತಿದ್ದ ಬಂಡೆ ಮುಂತಾದುವೂ, ಗುಡ್ಡಕ್ಕೆ ಸಮೀಪದಲ್ಲೇ ಜಗಳದ ಬಂಡೆಯೂ ಇರುವುದನ್ನು ಈಗಲೂ ತೋರಿಸುವರು. ಶ್ರೀರಾಮರು ಸ್ಥಾಪಿಸಿದ ರಾಮೇಶ್ವರನಿಗೆ ದಿವ್ಯವಾದ ದೇವಾಲಯವಿದ್ದು ಈಗಲೂ ಪೂಜಾದಿಗಳು ನಡೆಯುತ್ತಿವೆ. ವಾನರ ಪ್ರಮುಖರು ಪ್ರತಿಷ್ಠಿಸಿದ ಲಿಂಗಗಳು ಅನೇಕವು ಸುತ್ತುಮುತ್ತಲೂ ಇವೆ.

ಪಾಂಡವರೂ ಈ ಕಡೆ ಸಂಚರಿಸಿದರೆಂದು ಸ್ಥಳೀಯ ಇತಿಹಾಸ ಪುರಾಣಗಳು ತಿಳಿಸುತ್ತವೆ. ಧರ್ಮೇಶ್ವರ ಮುಂತಾದ ಪಂಚಲಿಂಗಗಳು ಪಾಂಡವರಿಂದ ಗುಟ್ಟದ ಮೇಲೆ ಪ್ರತಿಷ್ಠಿಸಲ್ಪಟ್ಟಿವೆ.

ಪ್ರತಿ ಶಿವರಾತ್ರಿಯ ವೇಳೆ ಇಲ್ಲಿ ಒಂದು ದೊಡ್ಡ ಜಾತ್ರೆಯು ನಡೆಯುವುದು. ಜಾತ್ರೆಯಲ್ಲಿ ಅನೇಕ ದನಗಳ ಮಾರಾಟವಾಗುವುದು.

ಆವನಿಯು ಹೋಬಳಿಯ ಮುಖ್ಯಸ್ಥಳ. ಮುಳುಬಾಗಲಿನಿಂದ ಏಳು ಮೈಲಿ ದೂರದಲ್ಲಿದೆ. ಈ ಎರಡು ಕಡೆಗಳ ಮಧ್ಯೆ ಮೈಸೂರು ಸೀಮೆಯಲ್ಲೆಲ್ಲಾ ವಿಶಾಲವಾದ ದೇವಾಲಯವೊಂದು ವಿರೂಪಾಕ್ಷಿ ಎಂಬ ಕಡೆ ಹಾಳುಬಿದ್ದಿದೆ. ಕೋಲಾರ ಮುಳುಬಾಗಲು ರಸ್ತೆಯಿಂದ ಕಾಂತರಾಜ ರಸ್ತೆ ಎಂಬುದರ ಮೂಲಕವೂ ಆವನಿಯನ್ನು ಸೇರಬಹುದು. ಇಲ್ಲಿ ಪೂರ್ವಕಾಲದಿಂದಲೂ ನಡೆದು ಬಂದ ದಾನಧರ್ಮಗಳೇ ಮೊದಲಾದು

ವನ್ನು ಸ್ಥಾಪಿಸುವ ಅನೇಕ ಶಾಸನಗಳೂ, ಕೋಟೆಗಳೂ, ಮಂಟಪಗಳೂ ಇವೆ.

ಅವುಗಳಲ್ಲಿ ಶೃಂಗೇರೀ ಮಠಕ್ಕೆ ಸಂಬಂಧಿಸಿದ ಸ್ಮಾರ್ತರ ಮಠವೊಂದಿದೆ.

ಆಹವನೀಯವೆಂಬ ಯಜ್ಞವು ನಡೆದುದರಿಂದ ಈ ಕ್ಷೇತ್ರಕ್ಕೆ ಈಗಿನ ಹೆಸರೊದಗಿತೆಂದೂ, ದಕ್ಷಿಣ ಕಾಶಿ ಎಂದು ಈ ಪ್ರದೇಶವು ಪಾವನವಾಗಿರುವುದೆಂದೂ, ಧನುಷ್ಕೋಟಿಯೇ ಮುಂತಾದ ತೀರ್ಥಗಳು ಬೆಟ್ಟದ ಮೇಲಿರುವುವೆಂದೂ ಸ್ಕಂದಪುರಾಣದಲ್ಲಿ ಹೇಳಿದೆ.

ಈ ದಿವ್ಯವೂ, ಸುಂದರವೂ, ಪಾವನವೂ ಆದ ಕ್ಷೇತ್ರವನ್ನು ನೋಡಲು ಪ್ರತ್ಯಹವೂ ಅನೇಕ ಯಾತ್ರಿಕರು ಬಂದು ಹೋಗುತ್ತಿರುವರು.

---

## ೨೦. ಶ್ರೀಪಾದರಾಯರು

ಈಗ್ಗೆ ೫೦೦ ವರ್ಷಗಳ ಹಿಂದೆ ವಿಜಯನಗರದಲ್ಲಿ ವೀರನರಸಿಂಗ ರಾಜನು ಆಳುತ್ತಿದ್ದನು. ಒಂದು ದಿನ ಆಕಸ್ಮಿಕವಾಗಿ ಅರಸನ ಕೈಯಿಂದ ಒಬ್ಬ ಬ್ರಾಹ್ಮಣನು ಹತನಾಗಿ ಹೋದನು. ಅದರಿಂದ ಬ್ರಹ್ಮಹತ್ಯೆಯು ರಾಜನನ್ನು ಬಾಧಿಸತೊಡಗಿತು. ನಾನಾ ವಿಧವಾದ ವ್ರತ, ಅರ್ಚನೆ, ಔಷಧ ಮಂತ್ರಗಳಿಂದಲೂ ಗುಣವು ತೋರಲಿಲ್ಲ. ಅರಸನು ಅಪೇಕ್ಷಣೀಯವಾದ ಆ ಮಹಾಸಿಂಹಾಸನದ ಮೇಲೆ ಮಂಡಿಸಿದನೆಂದರೆ ಬ್ರಹ್ಮಹತ್ಯೆಯ ಪಾಪವು ಘೋರರೂಪದಿಂದ ಆತನ ಕಣ್ಣೆದುರಿಗೆ ಕಾಣುತ್ತಿದ್ದಿತು. ಅದನ್ನು ಕಂಡೊಡನೆ ರಾಯನು ಹುಚ್ಚನಂತೆ ಆಡುತ್ತಿದ್ದನು. ಬರಬರುತ್ತ ಇದರಿಂದ ದೊರೆಯು ಸಿಂಹಾಸನದ ಮೇಲೆ ಕೂಡುವುದಕ್ಕೇ ಆಗುತ್ತಿರಲಿಲ್ಲ. ಆಗ ಅರಸನು ಜೋಯಿಸರನ್ನು ವಿಚಾರಿಸಲು, ಅವರು, ಬ್ರಹ್ಮಹತ್ಯೆಯು ಭಯಪಡತಕ್ಕ ಮಹನೀಯರು ಯಾರನ್ನಾದರೂ ಒಂದು ದಿನ ಸಿಂಹಾಸನದ ಮೇಲೆ ಕುಳ್ಳಿರಿಸಿದರೆ

ಆ ದಿನದಿಂದ ಮುಂದೆ ಬ್ರಹ್ಮಹತ್ಯೆಯು ಆ ಸಿಂಹಾಸನವೇರುವವರನ್ನು ಬಾಧಿಸುವುದಿಲ್ಲವೆಂದು ತಿಳಿಸಿದರು.

ಅಂತಹ ಪುಣ್ಯಾತ್ಮರು ಈ ಪುಣ್ಯಭೂಮಿಯಲ್ಲಿ ಯಾರಿರಬಹುದೆಂದು ಅರಸರು ವಿಚಾರಿಸತೊಡಗಿದರು. ಕಡೆಗೆ ಮುಳುಬಾಗಿಲಲ್ಲಿ ಸಂನ್ಯಾಸಿಗಳಾಗಿರುವ ಶ್ರೀಪಾದಸ್ವಾಮಿಗಳೆಂಬುವರು ನಿಜವಾಗಿಯೂ ಮಹಾತ್ಮರೆಂದು ತಿಳಿಯಿತು. ಅರಸನು ತಕ್ಕ ಮರ್ಯಾದೆಯೊಡನೆ ಹೇಳಿಕಳುಹಿ, ಸ್ವಾಮಿಗಳು ಕೃಪೆಮಾಡಿ ಹರಿಹರರ ವಂಶವನ್ನು ಕಾಪಾಡಬೇಕೆಂದು ಬೇಡಿಕೊಂಡನು.

ದಯಾವಂತರಾದ ಸಂನ್ಯಾಸಿಗಳು ಒಪ್ಪಿ ವಿಜಯನಗರಕ್ಕೆ ಹೊರಟರು. ಸುಮುಹೂರ್ತವನ್ನು ನಿಶ್ಚಯಿಸಿ, ಅರಸನ ಪ್ರಾರ್ಥನೆಯಂತೆ, ಯುಧಿಷ್ಠಿರನ ಕಾಲದಿಂದ ಬಂದಿದ್ದ ಸಿಂಹಾಸನವನ್ನೇರಿ ಕುಳಿತು ವಿರಾಜಿಸಿದರು. ಸಿಂಹಾಸನವೇರುವವರನ್ನು ಹಿಡಿಯಲು ಕಾದಿದ್ದ ಬ್ರಹ್ಮಹತ್ಯೆಯು ಈ ಸ್ವಾಮಿಗಳ ದಿವ್ಯತೇಜಸ್ಸಿನಿಂದ ಸುಟ್ಟು ಲುಪ್ತವಾಗಿಹೋಯಿತು. ಸಿಂಹಾಸನವು ಭದ್ರತರವಾಯಿತು. ಅರಸನು ಧನ್ಯನಾದನು. ಆ ದಿನದಿಂದ ಅರಸಿಗೆ ಪುನಃ ಯಾವ ವಿಧವಾದ ತೊಂದರೆಯೂ ಸಂಭವಿಸಲಿಲ್ಲ. ರಾಯನು ಸ್ವಾಮಿಗಳನ್ನು ಬಹು ಪರಿಯಾಗಿ ಮರ್ಯಾದಿಸಿ ಮುಳುಬಾಗಲಿಗೆ ಕಳುಹಿಸಿಕೊಟ್ಟನು. ವಿಜಯನಗರದ ರಾಯರ ಸಿಂಹಾಸನದ ಮೇಲೆ ಕುಳಿತಿದ್ದುದರಿಂದ ಶ್ರೀಪಾದಸ್ವಾಮಿಗಳಿಗೆ ಶ್ರೀಪಾದರಾಯರೆಂದು ಹೆಸರಾಯಿತು.

ಶ್ರೀಪಾದರಾಯರ ಶಿಷ್ಯರು ವ್ಯಾಸರಾಯರು. ಇವರೂ ಸಹ ರಾಯರ ಸಿಂಹಾಸನದ ಮೇಲೆ ಕುಳಿತಿದ್ದುದರಿಂದ ಇವರಿಗೂ ರಾಯರೆಂಬ ಹೆಸರು ಸಾರ್ಥಕವಾಯಿತು. ಇವರ ಕಾಲದಲ್ಲಿ ಕೃಷ್ಣದೇವರಾಯನು ಆಳುತ್ತಿದ್ದನು.

ಸಿಂಹಾಸನಾರೂಢರಿಗೆ ಅನಿಷ್ಟಕಾರಕವಾದ ಒಂದು ಮುಹೂರ್ತವು ಕೆಲವು ದಿನಗಳಲ್ಲಿಯೇ ಒದಗುವುದೆಂದೂ, ಆ ಸ್ವಲ್ಪ ಹೊತ್ತು

ಮಹಾಸತ್ವಶಾಲಿಗಳಾದವರು ಸಿಂಹಾಸನಾಸೀನರಾಗಿದ್ದರೆ ಮಾತ್ರ ರಾಜರಿಗೆ ಶ್ರೇಯಸ್ಸಾಗುವುದೆಂದೂ ಆಸ್ಥಾನದ ಜೋಯಿಸರು ಕುಹೂವನ್ನು ಗುಣಿಸಿ ಹೇಳಿದ್ದರು. ರಾಯರ ಪಟ್ಟದಾನೆಯು ಸೊಂಡಲಿಗೆ ಹೂಮಾಲೆಯನ್ನು ಕೊಟ್ಟು ಅದನ್ನು ನಗರದಲ್ಲಿ ಕರೆತಂದಿದ್ದರು. ಅದೇ ವೇಳೆಗೆ ಮುಳುಬಾಗಲು ಶ್ರೀಪಾದರಾಯರ ಮಠದ ಶ್ರೀ ವ್ಯಾಸಸ್ವಾಮಿಗಳೂ ನಗರಕ್ಕೆ ಬಂದಿದ್ದರು. ಪಟ್ಟದಾನೆಯು ಶ್ರೀಗಳವರ ಕಂಠದಲ್ಲಿ ತನ್ನ ಸೊಂಡಿಲಲ್ಲಿದ್ದ ಹಾರವನ್ನು ಸಮರ್ಪಿಸಿತು. ಕೂಡಲೇ ಮುಂದೊಮ್ಮೆ ಸಿಂಹಾಸನಾಸೀನರಾಗಿದ್ದ ಗುರುಗಳ ಶಿಷ್ಯರೇ ಇವರೆಂದು ತಿಳಿದು ಅರಸರಿಗೂ ಹರುಷವಾಯಿತು. ದಯಮಾಡಿ ಒಂದು ಮುಹೂರ್ತ ಕಾಲ ಶ್ರೀ ವ್ಯಾಸಸ್ವಾಮಿಗಳವರೂ ಸಿಂಹಾಸನವನ್ನೇರಿ ತಮ್ಮನ್ನು ಕಾಪಾಡಬೇಕೆಂದು ರಾಯರು ಪ್ರಾರ್ಥಿಸಿದರು. ಸ್ವಾಮಿಗಳು ಒಪ್ಪಿ, ಆ ದಿನ, ಆ ಮುಹೂರ್ತದಲ್ಲಿ, ಸಿಂಹಾಸನವನ್ನೇರಿ ತಮ್ಮ ತಪಃಪ್ರಭಾವದಿಂದ ಅರಸರನ್ನು ಕಾಪಾಡಿದರು. ಅಂದಿನಿಂದ ಇವರಿಗೂ ಶ್ರೀ ವ್ಯಾಸರಾಯರೆಂದೇ ಹೆಸರಾಯಿತು.

ಈಗಲೂ ಮುಳುಬಾಗಲಿನಲ್ಲಿ ಶ್ರೀಪಾದರಾಯರ ಮಠವಿದೆ. ಅಲ್ಲಿಗೆ ಒಂದು ಮೈಲಿ ದೂರದಲ್ಲಿ ನೃಸಿಂಹತೀರ್ಥದ ಬಳಿ ಶ್ರೀಪಾದರಾಯರ ಬೃಂದಾವನವಿದೆ. ಬೃಂದಾವನದ ಮೇಲೆ ಶ್ರೀಪಾದರಾಯರ ವಿಗ್ರಹವೂ, ಪ್ರಾಂಗಣದಲ್ಲಿ ಶ್ರೀ ವ್ಯಾಸರಾಯರ ವಿಗ್ರಹವೂ ಇವೆ. ಇದು ಮಾಧ್ವರಿಗೆ ಪವಿತ್ರವಾದ ಯಾತ್ರಾಸ್ಥಳವಾಗಿದೆ. ಶ್ರೀಪಾದರಾಯರ ಶಿಷ್ಯವರ್ಗದವರು ಬಹಳವಾಗಿದ್ದಾರೆ.

ಮೊದಲು, ಎಂದರೆ ರೈಲು ಬರುವ ಮುಂಚೆ, ತಿರುಪತಿಗೆ ಹೋಗುವವರೆಲ್ಲರೂ ಈ ಕಡೆಯಿಂದಲೇ ಪಯಣ ಮಾಡುತ್ತಿದ್ದರು. ಈಗಲೂ ಮೈಸೂರು ಬೆಂಗಳೂರುಗಳಿಂದ ತಿರುಪತಿ, ಮದ್ರಾಸುಗಳಿಗೆ ಹೋಗಬೇಕಾದ ರಸ್ತೆಯು ಈ ಮಾರ್ಗವಾಗಿಯೇ ಇದೆ. ನಮ್ಮ ಸೀಮೆಗೆ ಇದೇ ಮೂಡಲ ಬಾಗಿಲು. ಇಲ್ಲಿ ಎತ್ತರವಾದ ಆಂಜನೇಯನ ವಿಗ್ರಹವುಳ್ಳ ದಿವ್ಯವಾದ ದೇವಮಂದಿರವು ಸುಂದರವಾಗಿ ಇಡಲ್ಪಟ್ಟಿದೆ.

ಶಿಲ್ಪಕಲಾ ಸೌಷ್ಠವವುಳ್ಳ ಸೋಮೇಶ್ವರನ ದೇವಸ್ಥಾನವೂ, ಮುಸಲ್ಮಾನರ ಜಾತ್ರೆಯು ನಡೆಯುವ ಹೈದರಾವಲ್ಲೀ ದರ್ಗವೂ ಇವೆ.

ಮುಳುಬಾಗಿಲಿಗೆ ಒಂದು ಮೈಲಿ ದೂರದಲ್ಲಿರುವ ಕುರುಡುಮಲೆಯಲ್ಲಿ ಅತಿಸುಂದರವಾದ ಈಶ್ವರಾಲಯವೂ, ಬಹು ಎತ್ತರವಾದ ಗಣಪತಿಯ ಗುಡಿಯೂ ಇವೆ. ಈ ಗಣಪತಿಯನ್ನು ಪೂಜಿಸಿ, ದೇವತೆಗಳು ಕೂಡಿಕೊಂಡು ಈಶ್ವರನ ಮುಂದಾಳುತನದಲ್ಲಿ ತ್ರಿಪುರಾಸುರರನ್ನು ಗೆದ್ದರಂತೆ!

---

## ೨೧. ಹನುಮೇ ಲಿಂಗ

ಶ್ರೀರಾಮನು ಕೊಂದ ರಾವಣನು ಬ್ರಾಹ್ಮಣನು. ಅದರಿಂದ ಬ್ರಹ್ಮಹತ್ಯಾದೋಷವು ರಾಮನಿಗೆ ಪ್ರಾಪ್ತವಾಯಿತು. ಲಂಕೆಯನ್ನು ಬಿಟ್ಟು ಭಾರತವರ್ಷಕ್ಕೆ ಬಂದ ಕೂಡಲೇ ಈಶ್ವರ ಪ್ರತಿಷ್ಠೆಯನ್ನು ಮಾಡಬೇಕೆಂದೂ ಅಯೋಧ್ಯೆಯನ್ನು ಸೇರುವತನಕ ಗಾವುದಕ್ಕೆ ಒಂದರಂತೆ ಲಿಂಗಗಳನ್ನು ಪ್ರತಿಷ್ಠಿಸಿಕೊಂಡು ನಡೆಯಬೇಕೆಂತಲೂ ಆತನು ಬಯಸಿದನಂತೆ. ಅದರಂತೆಯೇ ಮೊಟ್ಟಮೊದಲು ರಾಮೇಶ್ವರದ ಬಳಿ ಶುಭಮುಹೂರ್ತದಲ್ಲಿ ಮೊದಲನೆಯ ಶ್ರೇಷ್ಠತಮವಾದ ಶಿವಲಿಂಗವನ್ನು ಪ್ರತಿಷ್ಠಿಸಲು ಮನಸ್ಸು ಮಾಡಿ, ಗಂಗಾನದಿಯಿಂದ ಒಳ್ಳೆಯ ಲಿಂಗವೊಂದನ್ನು ಸಮಯಕ್ಕೆ ಸರಿಯಾಗಿ ತರುವಂತೆ ಹೇಳಿ ಹನುಮಂತನನ್ನು ಕಳುಹಿಸಿದನು.

ಶುಭಮುಹೂರ್ತದ ವೇಳೆಗೆ ಹನುಮಂತನು ಬರಲಿಲ್ಲ. ಶುಭಘಳಿಗೆಯು ವ್ಯರ್ಥವಾಗಬಾರದೆಂದು ರಾಮನು ಮರಳಿನಿಂದಲೇ ಲಿಂಗವನ್ನು ಮಾಡಿ ಶಾಸ್ತ್ರೋಕ್ತ ರೀತಿಯಲ್ಲಿ ಪ್ರತಿಷ್ಠಿಸಿದನು. ಆ ಸೈಕತಲಿಂಗವೇ ಈಗ ಪ್ರಸಿದ್ಧ ಯಾತ್ರಾಸ್ಥಳವಾದ ರಾಮೇಶ್ವರದಲ್ಲಿ ಇರುವುದು.

ಅಷ್ಟು ಹೊತ್ತಿಗೆ ಹನುಮಂತನು ಬಂದನು. ಆ ವೇಳೆಗೆ ಪ್ರತಿಷ್ಠಿತವಾಗಿದ್ದ ಲಿಂಗವನ್ನು ಕಿತ್ತುಹಾಕಿ, ತಾನು ತಂದ ಲಿಂಗವನ್ನು

ಸ್ಥಾಪಿಸಲು ಎಷ್ಟೆಷ್ಟೋ ಯತ್ನಮಾಡಿದನು. ಕಡೆಗೆ ಬಾಲವನ್ನು ಬಳಯಿಸಿ, ಬೀಸಿ, ಸುತ್ತಿ, ಎಳೆದರೂ ಮರಳಿನ ಲಿಂಗದ ಕಣವೂ ಅಲುಗಲಿಲ್ಲ.

ಅವನು ಸೋತುಹೋದುದಕ್ಕೆ ತಕ್ಕ ಶಿಕ್ಷೆಯಾಯಿತೆಂದು ಭಾವಿಸಿದನು. ತುಂಬ ಅವಮಾನದಿಂದಲೂ ದುಃಖದಿಂದಲೂ ಕುಗ್ಗಿದನು. ಅದನ್ನು ಕಂಡು ಶ್ರೀರಾಮನು "ನಾನು ಪ್ರತಿಷ್ಠಿಸಿರುವ ಲಿಂಗದ ಪಕ್ಕದಲ್ಲಿಯೇ ನೀನು ತಂದಿರುವ ಲಿಂಗವನ್ನೂ ಪ್ರತಿಷ್ಠಿಸು. ನಿನ್ನಿಂದ ಸ್ಥಾಪಿತವಾದ ಲಿಂಗಕ್ಕೆ ಪೂಜೆಯಾದರೆ ಮಾತ್ರವೇ ನಾನು ಸ್ಥಾಪಿಸಿದ ಲಿಂಗಪೂಜೆಯ ಫಲವು ಲಭಿಸುವುದು. ನಾನು ಅಯೋಧ್ಯೆಯನ್ನು ಸೇರುವವರೆಗೂ ಲಿಂಗವನ್ನು ಸ್ಥಾಪಿಸಿದ ಕಡೆಯೆಲ್ಲಾ ನೀನೂ ಸ್ಥಾಪಿಸು" ಎಂದು ಸಮಾಧಾನಮಾಡಿದನು.

ಹನುಮಂತನು ಹಾಗೆಯೇ ಮಾಡಿದನು. ರಾಮೇಲಿಂಗಗಳ ಬಳಿಯೇ ನಾವು ಹನುಮೇಲಿಂಗಗಳನ್ನು ಈಗಲೂ ನೋಡಬಹುದು.

ಹಿಂದೂಸ್ಥಾನದ ದಕ್ಷಿಣ ಉತ್ತರಕ್ಕೆ ಅಲ್ಲಲ್ಲಿ ಇಂತಹ ಜೊತೆ ಲಿಂಗಗಳಿವೆ.

ನಮ್ಮ ನಾಡಿನ ಗುಡಿಬಂಡೆಯಲ್ಲಿಯೂ, ಸಿಡ್ಲಘಟ್ಟಕ್ಕೆ ಉತ್ತರದಲ್ಲಿರುವ ಬಸೆಟ್ಟಿಹಳ್ಳಿಯ ಬಳಿಯಲ್ಲಿಯೂ ಇಂತಹ ಹನುಮೇಲಿಂಗಗಳು ಅಂದವಾದ ಶಿವಾಲಯಗಳಲ್ಲಿವೆ. ಯಾತ್ರಿಕರಿಗೆ ಅನುಕೂಲವಾಗುವಂತೆ ಹತ್ತಿರದಲ್ಲಿಯೇ ನೀರೂ, ನೆಳಲೂ, ವಸತಿಯೂ ಇವೆ.

---

## ೨೨. ಹಲಸೂರಮ್ಮ

ಉಜ್ಜನಿ ಪಟ್ಟಣದ ಅರಸನ ಬಳಿ ಕೆಂಪೇಗೌಡನೆಂಬ ಯುವಕನಿದ್ದನು. ಹಲಸೂರಮ್ಮನು ಗೌಡನ ಹೆಂಡತಿ. ಈಕೆಯು ಬುದ್ಧಿವಂತೆ, ಶಕ್ತಿವಂತೆ ಮತ್ತು ಧೈರ್ಯಶಾಲಿನಿ.

ಒಂದು ಸಲ ರಾಜನು ಗೌಡನನ್ನು ಮೂದಲಿಸಿದನು. ಗೌಡನಿಗೆ ಇದು ಸಹಿಸಲಿಲ್ಲ. "ಅಯ್ಯಾ ಅರಸೆ, ನಿನಗಾಗಿ ನನ್ನ ಪ್ರಾಣಗಳನ್ನೂ ಲೆಕ್ಕಿಸದೆ ಎಷ್ಟೋ ಕಾಳಗಗಳನ್ನು ಗೆದ್ದುಕೊಟ್ಟೆನು. ಆದರೂ ನೀನೇ ನನ್ನನ್ನು ಹಿಯ್ಯಾಳಿಸಿರುವೆ. ಇನ್ನು ನಿನ್ನ ರಾಜ್ಯದಲ್ಲಿರಲಾರೆ. ಸ್ವರ್ಗದಲ್ಲಿ ಗುಲಾಮನಾಗುವುದಕ್ಕಿಂತ ನರಕದಲ್ಲಿ ನಾಯಕನಾಗುವುದೇ ಸ್ವಾತಂತ್ರ್ಯಪ್ರಿಯನಿಗೆ ಇಷ್ಟ. ಸಾಹಸಿಗಳು ಎಲ್ಲಿದ್ದರೂ ಅವರಿಗೆ ಗೌರವ ದೊರೆಯುತ್ತದೆ. ಇದೋ ಹೊರಟೆ" ಎಂದನು. ರಾಜನು ರೋಷಗೊಂಡು "ಹೊರಟರೆ ಸುಮ್ಮನೆ ಬಿಟ್ಟೇನೆ? ನಿನ್ನೊಡನೆ ನಿನ್ನ ವಂಶವನ್ನೂ ನಾಶಮಾಡಿಬಿಟ್ಟೇನು? ಹೋಗುವುದು ತಾನೇ ಎಲ್ಲಿಗೋ ನೋಡೋಣಂತೆ!" ಎಂದನು.

ಗೌಡನು ನಿಲ್ಲಲಿಲ್ಲ. ತುಂಬು ಬಸುರಿಯಾದ ಹೆಂಡತಿಯನ್ನೂ ಕರೆದುಕೊಂಡು ದಕ್ಷಿಣಕ್ಕೆ ಹೊರಟು ನಮ್ಮ ಸೀಮೆಗೆ ಬಂದನು. ಕೋಲಾರ ನಾಡಿನ ಅಬಲೂಡಿನ ಬಳಿಗೆ ಬರುವಾಗ್ಗೆ ಹಲಸೂರಮ್ಮನು ಗಂಡು ಮಗುವನ್ನು ಹೆತ್ತಳು. ಮಗುವಿಗೆ ಶಿವನೇಗೌಡ ಎಂದು ಹೆಸರಿಟ್ಟರು.

ಈ ವೇಳೆಗೆ ಉಜ್ಜನಿಯ ರಾಜನು ಗೌಡನನ್ನು ಹಿಡಿತರಲು ಒಂದು ದಂಡನ್ನು ಅಟ್ಟಿದನು. ಗೌಡನಿಗೂ ಅರಸನ ಕಡೆಯವರಿಗೂ ವೇಲೂರಿನ ಬಳಿ ಕಾಳಗವಾಯಿತು. ಕದನದಲ್ಲಿ ಕೆಂಪೇಗೌಡನು ಕಾದುತ್ತ ವೀರ ಸ್ವರ್ಗವನ್ನೈದಿದನು.

ಆ ಬಳಿಕ ಶತ್ರು ಸೈನ್ಯವು ಸರ್ರನೆ ಅಬಲೂಡಿನ ಕಡೆಗೆ ನುಗ್ಗಿತು.

ಗಂಡನು ಹೋದುದೂ ದಂಡು ಬರುವುದೂ ಹಲಸೂರಮ್ಮನಿಗೆ ತಿಳಿಯಿತು. ಆಕೆಯು ಹೆದರದೆ ಮನಸ್ಸನ್ನು ಗಟ್ಟಿಮಾಡಿ, ತನ್ನ ಜನರನ್ನು ಹುರಿದುಂಬಿಸಿ ತಾನೇ ಯುದ್ಧಮಾಡಿದಳು. ಸತ್ವಶಾಲಿನಿಯಾದ ಆಕೆಯ ಮುಂದೆ ಶತ್ರುಗಳು ಸೋತು ಹಿಮ್ಮೆಟ್ಟಿದರು.

ವಿಜಯಿಯಾದ ಗೌಡಿತಿಯು ಮುಂದೆ ಅಬಲೂಡಿಗೆ ಕೋಟೆಯನ್ನು ಕಟ್ಟಿಸಿದಳು. ಆಕೆಯ ಅದೃಷ್ಟಕ್ಕೆ ಅನುವಾಗಿ ಅಪಾರವಾಗಿ

ಐಶ್ವರ್ಯವೂ ದೊರೆಯಿತು. ಗೌಡನು ತನ್ನ ಕಾಲದಲ್ಲಿ ಒಳಪಡಿಸಿ ಕೊಂಡಿದ್ದ ಪ್ರದೇಶಗಳನ್ನು ಕೂಡಿಸಿ ಒಂದು ಸೀಮೆಯನ್ನಾಗಿ ಮಾಡಿ, ಅಜಲೂರನ್ನೇ ರಾಜಧಾನಿಯನ್ನಾಗಿ ಮಾಡಿದಳು. ರಾಜಧಾನಿಗೆ ಹರದಾರಿ ದಕ್ಷಿಣದಲ್ಲಿ ತನ್ನ ಹೆಸರಿನಲ್ಲಿ ಒಂದು ಕೆರೆಯನ್ನು ಕಟ್ಟಿಸಿ ದಳು. ಜನಗಳು ಅದನ್ನು "ಅಮ್ಮನ ಕೆರೆ" ಎಂದು ಕರೆದರು. ಅದರ ಬಳಿಯೇ ಒಂದು ಊರನ್ನು ಕಟ್ಟಿ ಅದಕ್ಕೆ ಮಗನ ನೆನಪಿಗಾಗಿ "ಶಿವನಾಪುರ" ಎಂದು ಹೆಸರಿಡಿಸಿದಳು. ಶಿವನೇಗೌಡನು ಬೆಳೆದು ಸಮರ್ಥನಾಗುವವರೆಗೂ ಹದಿನೈದು ವರ್ಷ ಕಾಲ ಗೌಡಿತಿಯೇ ರಾಜ್ಯವಾಳಿದಳು. ಕ್ರಿ.ಶ. ೧೫೨೮ರಲ್ಲಿ ಶಿವನೇಗೌಡನಿಗೆ ಪಟ್ಟವಾಯಿತು. ಗೌಡನೂ ತಾಯಿಯಂತೆಯೇ ಜನೋಪಕಾರಕ್ಕಾಗಿ ಊರ ಬಳಿ ಕೆರೆ ಯೊಂದನ್ನು ಕಟ್ಟಿಸಲು ಅದಕ್ಕೆ "ಗೌಡನ ಕೆರೆ" ಎಂದು ಹೆಸರಾಯಿತು.

ತನ್ನ ಮತ್ತು ತನ್ನ ಮಗನ ಹೆಸರುಗಳು ಶಾಶ್ವತವಾಗುವಂತೆ ಕೆಲಸಗಳು ನಡೆದುವು. ಆದರಿಂದ ತನ್ನ ಮಾವನೂ, ಗಂಡನ ತಂದೆಯೂ, ಶಿವನೇಗೌಡನ ತಾತನೂ ಆದ ಸಿಡಿಲಗೌಡನ ಹೆಸರು ಶಾಶ್ವತವಾಗ ಲೆಂದು ಗೌಡಿತಿಯು ಶಿವನಾಪುರದ ಹೆಸರನ್ನು "ಸಿಡಿಲಘಟ್ಟ" ಎಂದು ಬದಲಾಯಿಸಿದಳು.

ಹೀಗೆ ತನ್ನ ವಂಶದ ಹಿರಿಯರ ಹೆಸರೂ ತನ್ನ ಜೀವಮಾನವೂ ಪ್ರತಾಪದಿಂದಲೂ ಪುಣ್ಯಕಾರ್ಯಗಳಿಂದಲೂ ತುಂಬಿದುದನ್ನು ಕಂಡು ಹಲಸೂರಮ್ಮನು ಬಹು ಕಾಲ ಸಂತೋಷವಾಗಿದ್ದಳು.

ಆಕೆಯು ಅಗೆಯಿಸಿದ ಕಂದಕ, ಕಟ್ಟಿಸಿದ ಕೋಟೆಯ ಗುರುತು ಗಳು ಈಗಲೂ ಶಿಡ್ಲಘಟ್ಟದಲ್ಲಿವೆ. ಶಿವನೇಗೌಡ ಮತ್ತು ಆತನ ಹೆಂಡತಿ ಶಿವಾಜಮ್ಮನ ಸಮಾಧಿಗಳು ಅಮ್ಮನ ಕೆರೆಯ ಬಳಿ ಇವೆ. ಶಿವನೇ ಗೌಡನು ಆಯುಸ್ಸ್ಮರ್ಯ ಕಾಲದಲ್ಲಿ ಕುಳಿತುಕೊಳ್ಳಲು ಬಯಸುತ್ತಿದ್ದ ಕರಿಯ ಚಪ್ಪಡಿಯ ವಿಶಾಲವಾದ ಕಲ್ಲು ಶಾಲೆಯ ಆವರಣದಲ್ಲಿದೆ. ಗೌಡರ ಅರಮನೆಯಿದ್ದ ಕಡೆ ಮೊದಲು ಕಛೇರಿಯೂ ಈಗ ಶಾಲೆಯೂ ಇವೆ.

ಶಿಡ್ಲಘಟ್ಟವು ಈಗ ರೇಷ್ಮೆ ವ್ಯವಸಾಯಕ್ಕೂ ಆಲೂಗಡ್ಡೆಯ ಬೆಳೆಗೂ ಹೆಸರಾಗಿದೆ. ಈ ಊರಿನ ಚಟ್ಟಿಮಣ್ಣು ಸಿಮೆಂಟಿನಂತಹ ಗಟ್ಟಿಮಣ್ಣು ಎಂದು ಗೊತ್ತಾಗಿದೆ.

---

## ೨೩. ಚಿಕ್ಕರಾಯ

ಶಿಡ್ಲಘಟ್ಟದ ತಾಲೂಕು ಸುಗಟೂರಿನಲ್ಲಿ ಈಗ್ಗೆ ಸುಮಾರು ೫೦೦ ವರ್ಷಗಳ ಹಿಂದೆ ತಮ್ಮಪ್ಪಭೂಪನೆಂಬ ಗೌಡನೊಬ್ಬನಿದ್ದನು. ಈತನು ಆವತಿಯ ರಣಬೈರೇಗೌಡನ ನಂಟನು. ಈತನ ಮಗನ ಹೆಸರೂ ತಮ್ಮಪ್ಪ.

ತಮ್ಮಪ್ಪನು ಹುಟ್ಟಿದಾಗ ಮಗುವಿನ ಕೂದಲು ಜಡೆಗಟ್ಟಿದ್ದವಂತೆ. ಈತನಿಗೆ ಚಿಕ್ಕಂದಿನಿಂದಲೂ ಶಿವಭಕ್ತಿ ಬಹಳ. ಶಿವನ ಒಲುಮೆಯಿಂದ ಒಂದು ಬಾರಿ ಒಬ್ಬ ಕುರುಡನಿಗೂ ಕಣ್ಣು ಬರುವಂತೆ ತಮ್ಮಪ್ಪನು ಮಾಡಿದನು ಎನ್ನುತ್ತಾರೆ. ವೀರಮಾಂಬೆಯೆನ್ನುವಾಕೆಯು ತಮ್ಮಪ್ಪನ ಪತ್ನಿಯಾದಳು.

ಆಗ ಈ ನಾಡೆಲ್ಲವೂ ವಿಜಯನಗರದ ಅಧೀನವಾಗಿದ್ದಿತು. ತಮ್ಮಪ್ಪನು ರಾಜಧಾನಿಗೆ ಹೋಗಿ ರಾಯರ ಮೆಚ್ಚುಗೆಯನ್ನು ಪಡೆದನು. ಅದರಿಂದ ಈತನಿಗೆ "ನಾಡಪ್ರಭು" ಎಂಬ ಬಿರುದೂ ಬಂದಿತು. ತಮ್ಮಪ್ಪನು ಸುಗಟೂರಿಗೆ ಹಿಂದಿರುಗುವಾಗ್ಗೆ ಅಲ್ಲಿ ಒಂದು ನಿಧಿಯಿರುವುದು ದೊರಕಿತು. ಆದರೆ ಹಣವಿದ್ದ ಪ್ರದೇಶವು ಕೊರಚರ ಯರ್ರಾಳು ಜನರ ಯರ್ರಗಂಗ ಮತ್ತು ಚಲಪಗಂಗ ಎಂಬುವರಿಗೆ ಸೇರಿದ್ದಿತು.

ಇದರಿಂದ ತಮ್ಮಪ್ಪನು ಮತ್ತೆ ರಾಜಧಾನಿಗೆ ಹೊರಟನು. ಪೆನುಗೊಂಡೆಯ ಬಳಿಗೆ ಹೋಗುವಾಗ್ಗೆ ತುರುಕರ ಒಂದು ಗುಂಪು ಕೆಲವರು ಹಿಂದೂ ಹೆಂಗಸರು ಮಕ್ಕಳನ್ನು ಪೀಡಿಸಲು ಯತ್ನಿಸುತ್ತಿರುವುದು ಕಾಣಿಸಿತು. ತಮ್ಮಪ್ಪನು ಆ ತುರುಕರಮೇಲೆ ಬಿದ್ದು, ಅವರನ್ನು ಓಡಿಸಿ, ತೊಂದರೆಗೆ ಸಿಕ್ಕಿದ್ದವರನ್ನು ರಕ್ಷಿಸಿದನು. ತುರುಕರು

ಮೊಗಲರ ಕಡೆಯವರೂ, ರಕ್ಷಿಸಲ್ಪಟ್ಟವರು ವಿಜಯನಗರದ ರಾಯರ ಮನೆಯ ಜನರೂ ಆಗಿದ್ದರು. ಇದರಿಂದ ತಮ್ಮಪ್ಪನಿಗೆ ಅನುಕೂಲವೇ ಆಯಿತು. ರಾಯರು ನಾಡಪ್ರಭುವಿನ ಸಾಹಸವನ್ನು ಕೇಳಿ ಸಂತೋಷಿಸಿ ಆತನಿಗೆ ಚಿಕ್ಕರಾಯ ಎಂಬ ಬಿರುದನ್ನೂ ಪರಿವಾರವನ್ನೂ ಕೊಟ್ಟು ಮರ್ಯಾದೆಮಾಡಿ ಸುಗಟೂರಿನಲ್ಲಿ ಕಾಣಿಸಿದ್ದ ನಿಧಿಯನ್ನು ತಮ್ಮಪ್ಪನೇ ಪಡೆಯಬಹುದೆಂದು ಅನುಮತಿ ಪಾಲಿಸಿದರು. ಬಳಿಕ ನಾಡಪ್ರಭು ಚಿಕ್ಕರಾಯ ತಮ್ಮಪ್ಪನು ಹುಟ್ಟಿದೂರಿಗೆ ಹಿಂದಿರುಗಿ ಪ್ರಬಲನಾದನು.

ಸುಗಟೂರಿನಲ್ಲಿ ನಿಂತು ಸುತ್ತುಮುತ್ತಿನ ಪ್ರದೇಶಗಳನ್ನು ಆಕ್ರಮಿಸುತ್ತಲೂ ಬಲಪಡಿಸುತ್ತಲೂ ಬಂದನು. ಕೋಲಾರದ ಕೋಟೆಯನ್ನು ಸರಿಮಾಡಿಸಿ, ಕೋಲಾರ ಪ್ರಾಂತ್ಯಕ್ಕೆ ವೇಮಗಲ್ಲು, ಜೈಲು ಸುಗಟೂರು, ಕೈವಾರ, ಬುರುಡುಗುಂಟೆ, ಬೂದಿಕೋಟೆಗಳನ್ನು ಸೇರಿಸಿದನು. ವಿಜಯನಗರದ ರಾಯರು ಹಿಂದೆ ನಿಯಮಿಸಿದ್ದ ಲಕ್ಕಣ್ಣ, ಮಾದಣ್ಣ ಎಂಬ ದಣಾಯಕರ ವಂಶದವರೇ ಮುಳಬಾಗಿಲಿನಲ್ಲಿ ಅಧಿಕಾರಮಾಡುತ್ತಿದ್ದರು. ಆ ಮನೆತನದವರಿಂದ ಮುಳಬಾಗಿಲನ್ನು ವಶಮಾಡಿಕೊಂಡನು. ಅದರ ಪಕ್ಕದ ಪುಂಗನೂರನ್ನು ಸೇರಿಸಿಕೊಂಡನು.

ಈ ವೇಳೆಗೆ ಬಿಜಾಪುರದ ಬಳಿ ಹಿಂದೂಗಳಿಗೆ ಮಹಮ್ಮದೀಯರ ಕಾಟವು ಬಲವಾಯಿತು. ಅನೇಕರು ಆಯಾ ಪ್ರದೇಶಗಳಿಂದ ಮನೆಮಾರು ಬಿಟ್ಟು ಹೊರಟರು. ಅಂತಹವರಲ್ಲಿ ಕೆಲವರು ಚಿಕ್ಕರಾಯರ ಶಿವಭಕ್ತಿ, ಸಾಹಸ, ಸದ್ಗುಣಗಳನ್ನು ಕೇಳಿ ಸುಗಟೂರು ನಾಡಿನಲ್ಲಿ ಆಶ್ರಯಪಡೆಯಲು ಬಂದರು. ನಾಡಪ್ರಭುವು ಅವರನ್ನು ಉಪಚರಿಸಿ ಅವರ ಪೈಕಿ ಮುಖಂಡರಾದ ಚಿಕ್ಕಣ್ಣಶೆಟ್ಟಿಗೆ ಕೋಲಾರದಲ್ಲಿಯೂ, ಕಳಸಣ್ಣಶೆಟ್ಟಿಗೆ ಹೊಸಕೋಟೆಯಲ್ಲಿಯೂ ಪಟ್ಟಣಶೆಟ್ಟಿ ಅಧಿಕಾರವನ್ನು ನಿಯಮಿಸಿದನು. ಇದರಿಂದ ಅವರ ಕಡೆಯ ಮತ್ತಷ್ಟು ಜನರು ವಲಸೆಬಂದು ಸುಗಟೂರು ನಾಡು ಬಲಿಯಿತು.

ಆ ಕಡೆಯವರು ಲಿಂಗಾಯತರು. ಅವರ ಜಂಗಮ ಗುರುಗಳಿಗಾಗಿಯೇ ಚಿಕ್ಕರಾಯರು ಒಂದು ಊರನ್ನು ಕಟ್ಟಿ ಅದಕ್ಕೆ ಜಂಗಮಕೋಟೆ ಎಂದು ಹೆಸರಿಟ್ಟು ಗುರುಗಳಿಗೆ ಒಪ್ಪಿಸಿದನು.

ಹೊಸಕೋಟೆಯನ್ನು ಕಟ್ಟಿದವನೂ ಈತನೇ. ಅಲ್ಲಿನ ವಿಶಾಲವಾದ ಪ್ರದೇಶದಲ್ಲಿ ಉತ್ಕೃಷ್ಟವಾದ ಸ್ಥಾನವನ್ನು ಹಂಗಡಿಸಿ ದಕ್ಷಿಣ ಪಿನಾಕಿನೀ ಪಾತ್ರಕ್ಕೆ ಅಡ್ಡಲಾಗಿ ಎರಡು ಮೈಲಿ ಉದ್ದವಾದ ಕಟ್ಟೆಯನ್ನು ಹಾಕಿಸಿ ದೊಡ್ಡ ಕೆರೆಯನ್ನು ಮಾಡಿಸಿದನು. ಕೆಲವು ಕಾಲದ ಮೇಲೆ ಸುಗಟೂರು ನಾಡಪ್ರಭುಗಳು ಹೊಸಕೋಟೆಯನ್ನೇ ತಮ್ಮ ಮುಖ್ಯ ಕಾರ್ಯಸ್ಥಳವಾಗಿ ಬದಲಾಯಿಸಿಕೊಂಡರು. ಈ ಹೊಸಕೋಟೆಯು ಬೆಂಗಳೂರು ನಾಡಿನಲ್ಲಿ ಈಗ ಒಂದು ತಾಲೂಕಿನ ಮುಖ್ಯ ಸ್ಥಳವಾಗಿದೆ.

ಚಿಕ್ಕರಾಯ ತಿಮ್ಮೇಗೌಡನ ನಂತರ ಅಲ್ಲಿ ಅಧಿಕಾರಕ್ಕೆ ಬಂದ ಬಹಳ ಮಂದಿ ಅದೇ ಹೆಸರನ್ನು ಹೊಂದಿದವರಾಗಿದ್ದರು. ಈ ವಂಶದವರು ಅನೇಕ ದಾನಧರ್ಮಗಳನ್ನು ಕೊಡುಗೈಯಿಂದ ಮಾಡಿದರು.

ಈ ವಂಶದ ಮುಮ್ಮಡಿ ತಮ್ಮಭೂಪನು ಕರ್ಣಾಟಕ, ಆಂಧ್ರ, ಸಂಸ್ಕೃತ ಭಾಷೆಗಳಲ್ಲಿ ಪ್ರವೀಣನಾಗಿದ್ದು ಅನೇಕ ಪಂಡಿತರಿಗೆ ಆಶ್ರಯನಾಗಿದ್ದುದಲ್ಲದೆ ಸ್ವತಃ ಮೂರು ಭಾಷೆಗಳಲ್ಲಿಯೂ ಗ್ರಂಥಗಳನ್ನು ರಚಿಸಿರುವನು.

---

## ೨೪. ವೀರರ ತಂಡ

ಬಹು ಹಿಂದೆ ಮಹಾವಲಿ ಬಾಣ ಅರಸರು ನಮ್ಮ ನಾಡನ್ನು ಆಕ್ರಮಿಸಿದ್ದರಷ್ಟೆ. ಈ ಬಾಣರನ್ನು ತುಳಿಯಲು ಚೋಳರೂ, ಗಂಗರೂ, ನೊಳಂಬರೂ ತಾವು ತಾವಾಗಿಯೇ ಯತ್ನಿಸುತ್ತಿದ್ದರು. ಎಷ್ಟೋ ಕಾಳಗಗಳು ಇವರುಗಳ ಗಡಿನಾಡಾದ ಈಗಿನ ಶ್ರೀನಿವಾಸಪುರದ ಸರಹದ್ದಿನಲ್ಲಿ ನಡೆಯುತ್ತಿದ್ದುವು. ಆ ಕದನಗಳಲ್ಲಿ ಅನೇಕ ವೀರರು

ಚಿತ್ರವಿಚಿತ್ರವಾದ ಸಾಹಸಗಳನ್ನು ಮಾಡಿ ಅರಸನಿಗೆ ಗೆಲುವನ್ನು ಒದಗಿಸಿದರು.

ಇಂತಹ ಒಂದು ಸಮರದಲ್ಲಿ ಶತ್ರುಪಕ್ಷವು ಪ್ರಬಲವಾಗಲು ಪ್ರಭುವಾದ ಮೇರುವು ತನ್ನ ವೀರನಾದ ವಿಯೋಗ ವಿದ್ಯಾಧರನಿಗೆ ವೀಳೆಯವನ್ನು ಕೊಟ್ಟು ರಣಭೂಮಿಗೆ ಕಳುಹಿಸಿದನು. ಧೀರನೂ ಸುಶೀಲನೂ ಆದ ವಿದ್ಯಾಧರನು ದಿವ್ಯವಾದ ಕುದುರೆಯನ್ನೇರಿ ಶತ್ರು ಮಂಡಲವನ್ನು ಪ್ರವೇಶಿಸಿ ಮದದಾನೆಯು ಕಬ್ಬಿನ ಗದ್ದೆಯಲ್ಲಿ ಹಾವಳಿ ಮಾಡುವಂತೆ ಪರಬಲವನ್ನು ತುಳಿದು ಕೆಡೆಯುತ್ತ ಬಂದನು. ಶತ್ರುಗಳು ಇವನೊಡನೆ ಸೆಣಸಲಾರದೆ ಇವನೇರಿದ್ದ ಕುದುರೆಗೆ ಅಪಾಯ ಮಾಡಿದರು. ಆದರೆ ವಿದ್ಯಾಧರನು ಲಕ್ಷಿಸದೆ ತಟ್ಟನೆ ಕುದುರೆಯಿಂದಿಳಿದು, ಬರಿಕಾಲಿಂದಲೇ ನಡೆಯುತ್ತ, ಕತ್ತಿಯ ಮೊನೆಯಿಂದ ಶತ್ರುಗಳನ್ನು ಕೊತ್ತುತ್ತ ಬಂದನು. ಆದರೂ ಸಂಖ್ಯಾಪ್ರಬಲರಾದ ಶತ್ರುಗಳು ಒಬ್ಬನೇ ಆಗಿಯೂ, ಹಾಗಿಲ್ಲದೆಯೂ ಇರುವ ವಿದ್ಯಾಧರನನ್ನು ಮುತ್ತಿ ಕಡಿದುಬಿಟ್ಟರು. ಈ ರೀತಿ ಧೀರನೂ ಸುಶೀಲನೂ ಆದ ವಿದ್ಯಾಧರನು ಸ್ವಾಮಿಕಾರ್ಯಕ್ಕಾಗಿ ಪ್ರಾಣಸಮರ್ಪಣೆ ಮಾಡಿದನು. ಪ್ರಭು ಮೇರುವಿಗೆ ವರ್ತಮಾನವು ತಿಳಿಯಲು ಆತನು ವೀರನನ್ನು ಹೊಗಳಿ ಶಾಸನವನ್ನು ಕೆತ್ತಿಸಿ ಆತನ ವಂಶಕ್ಕೆ ಕೊಡುಗೆಯ ಮಾನ್ಯವನ್ನು ಸರ್ವಪರಿಹಾರವಾಗಿ ಕೊಟ್ಟನು.

ಮಹಾಮೇರುವೆಂಬುವನು ಅತಿ ಚೆಲುವನೂ, ಅಸಮಾನ ಪರಾಕ್ರಮಿಯೂ ಆದ ವೀರನಾಗಿದ್ದನು. ಈತನ ಸಣ್ಣಪ್ರಾಯದ ಹೆಂಡತಿಯು ಗರ್ಭಿಣಿಯಾಗಿದ್ದಳು ಅಂತಹ ವೇಳೆಯಲ್ಲಿ ಯುದ್ಧಸನ್ನದ್ಧನಾಗಬೇಕೆಂದು ಪ್ರಭುಮೇರುವಿನ ಅಪ್ಪಣೆಯು ಬಂದಿತು. ಮಹಾಮೇರುವು ಕುಟುಂಬ ರಕ್ಷಣೆಗಿಂತಲೂ ಸ್ವಾಮಿಕಾರ್ಯವೇ ಪ್ರಾಮುಖ್ಯವೆಂದು ಸಿದ್ಧನಾದನು. ಧೀರೆಯಾದ ಆತನ ಹೆಂಡತಿಯೂ ಸ್ವಾಮಿಸೇವೆಗಾಗಿ ಪ್ರೋತ್ಸಾಹಿಸಿದಳು. ಸಣ್ಣ ದಂಡಿನೊಡನೆ ಮಹಾಮೇರುವು ಶತ್ರುಗಳನ್ನು ಇದಿರಿಸಿದನು.

ಆದರೆ ಪರಬಲವು ಮಹಾಬಲವಾಗಿದ್ದಿತು. ಮಹಾಮೇರುವಿನ ಆಳುಗಳು ಹೆದರಿ ಹಿಂದಕ್ಕೆ ಓಡಿಬಿಟ್ಟರು. ಆದಾಗ್ಯೂ ವೀರನು ಬೆದರದೆ ಬೆಟ್ಟಗಳು ನಡುಗುವಂತೆ ಧಿಟ್ಟತನದ ಹೆಜ್ಜೆಗಳನ್ನಿಡುತ್ತಾ ಮುಂದಕ್ಕೆ ನುಗ್ಗಿ ಶತ್ರುಗಳನ್ನು ತುಡುಕಿದನು. ಪ್ರಬಲವಾದ ಕದನವಾಯಿತು. ದೂರದಿಂದಲೇ ತನ್ನ ಮುಂದಾಳುವಿನ ಸಾಹಸವನ್ನು ನೋಡುತ್ತಿದ್ದ ಮಹಾಮೇರುವಿನ ಕಡೆಯವರಿಗೆ ತಮ್ಮ ಹೇಡಿತನವನ್ನು ತಿಳಿದು ಬಹು ನಾಚಿಕೆಯೂ ಕೋಪವೂ ಬಂದುವು. ಒಡನೆಯೇ ಒಮ್ಮನಸ್ಸಿನಿಂದ ತಮ್ಮ ಮುಂದಾಳುವಿನ ಸಹಾಯಕ್ಕೆ ನುಗ್ಗಿದರು. ಆದರೆ ಸಹಾಯವು ಬರುವ ಮೊದಲೇ ಈ ವೀರನು ಅಸಂಖ್ಯಾತ ಶತ್ರುಗಳನ್ನಿರಿದು ವೀರಸ್ವರ್ಗವನ್ನು ಸೇರಿದ್ದನು. ಆದಾಗ್ಯೂ ಉದ್ರೇಕಗೊಂಡ ಆತನ ಅನುಯಾಯಿಗಳ ಮುಂದೆ ಶತ್ರುಪಕ್ಷದವರು ನಿಲ್ಲಲಾರದೆ ಹೋದರು. ತಾನು ಸತ್ತರೂ ಮಹಾಮೇರುವಿನ ಕಡೆಯವರೇ ಗೆದ್ದರು.

ಅರಸನು ಈ ವರ್ತಮಾನವನ್ನರಿತು ಬಹು ವ್ಯಸನಪಟ್ಟನು. ಕೋಟೆಯಲ್ಲಿ ವೀರಗಲ್ಲನ್ನು ಕೆತ್ತಿಸಿ, ಸ್ವಾಮಿಭಕ್ತನ ಚರಿತ್ರೆಯನ್ನು ಕೆತ್ತಿಸಿ ಆತನ ಕುಟುಂಬ ಪೋಷಣೆಗೆಂದು ವಿಶಾಲವಾದ ಪ್ರದೇಶವನ್ನು ದಾಯವಾಗಿ ಕೊಟ್ಟನು. ಮಹಾಮೇರುವಿಗೆ ಆಗ್ಗೆ ಮಕ್ಕಳಾಗಿರಲಿಲ್ಲ. ಆದರೆ ಗರ್ಭಿಣಿಯಾದ ಹೆಂಡತಿಯು ಹೆತ್ತಮೇಲೆ ಆ ದಾಯ ಪ್ರದೇಶವು ಆ ಮಗುವಿನ ಸಂತತಿಗೇ ಸೇರತಕ್ಕದೆಂದೂ, ಯಾರೂ ಅದನ್ನು ಅಪಹರಿಸಕೂಡದೆಂದೂ ಆಜ್ಞಾಪಿಸಿದನು.

ಇಂತಹ ವೀರರ ಸಾಹಸದ ಕುರುಹುಗಳು ಶ್ರೀನಿವಾಸಪುರದ ನೆಲದಲ್ಲಿ ಅನೇಕವಾಗಿ ದೊರೆತಿವೆ.

ಈ ನೆಲದ ಜನರ ಸಹಾಯವನ್ನು ಆಶಿಸಿ ಮುಂದೆ ಬಂದ ಗಂಗರಾಜರೂ ಪ್ರಜೆಗಳಿಗೆ ಹಿತವಾದ ರೀತಿಯಲ್ಲಿ ನಡೆಯುತ್ತಿದ್ದರು. ಮಾರಸಿಂಹನೆಂಬ ಗಂಗರಾಜನು ಪಶುಗಳಿಗೆ ರೋಗ ಬರದಂತೆ ಇರಿಸಲು


ಯಂತ್ರವನ್ನು ಬರೆಯಿಸಿದ ಗೋಕುಲದ ಕಲ್ಲನ್ನು ಹೆಬ್ಬೆಟ್ಟದ ಬಳಿ ನಿಲ್ಲಿಸಿದನು.

ಮೇಲೆ ಹೇಳಿದ ವೀರರ ಶಾಸನಗಳು ಗುಲುಗನಪೊದೆಯ ಬಳಿ ಅರಳುಕೋಟೆಯ ಬಳಿ ಇರುವುವು.

ಶ್ರೀನಿವಾಸಪುರದ ವೀರರ ತಂಡವು ಹಿಂದಿನ ಕಾಲಕ್ಕೆ ಮಾತ್ರವೇ ಆಗಿಹೋಗಲಿಲ್ಲ. ಕ್ರಿ. ಶ. ೧೯೧೪ರಿಂದ ೧೯೧೮ರ ವರೆಗೆ ಇಂಗ್ಲೀಷರಿಗೂ ಜರ್ಮನರಿಗೂ ನಡೆದ ಘೋರ ಯುದ್ಧದಲ್ಲಿ ಈ ಸೀಮೆಯಿಂದ ೧೮ ಮಂದಿ ಮೆಸೊಪೊಟೇಮಿಯಕ್ಕೆ ಹೋಗಿ, ಕಾದಿ, ಪ್ರಾಣಗಳನ್ನು ನೀಗಿದರು. ಈ ವೀರರ ಸ್ಮರಣಾರ್ಥವಾಗಿ ಶ್ರೀನಿವಾಸಪುರದ ತಾಲೂಕು ಕಛೇರಿಯ ಮುಂದೆ ಒಂದು ಕೀರ್ತಿಸ್ತಂಭವನ್ನು ನೆಟ್ಟಿರುವರು.

ಪಾಪನಹಳ್ಳಿ ಎಂಬುದು ಆ ಊರಿನ ಮೊದಲಿನ ಹೆಸರು. ದಿವಾನ್ ಪೂರ್ಣಯ್ಯನವರು ತಿರುಪತಿ ಯಾತ್ರೆಯಿಂದ ಹಿಂದಿರುಗುವಾಗ ಹಳೆಯ ಹೆಸರನ್ನು ಶ್ರೀನಿವಾಸಪುರ ಎಂದು ಬದಲಾಯಿಸಿದರು.

921—36.— ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯರವರು ಮುದ್ರಿಸಿರುವರು.




'ಬಾಲ ಪ್ರಪಂಚ'ವು ಮಕ್ಕಳಿಗಾಗಿ ಬರೆದ ಸಚಿತ್ರವಾದ ಜ್ಞಾನಕೋಶ, ಸರ್ವ ವಿಷಯ ಸಂಗ್ರಹ. ೧೮೦೦ ಪುಟಗಳು! ಸಾವಿರಾರು ಚಿತ್ರಗಳು! ಮಕ್ಕಳು ತಿಳಿಯಬೇಕಾದ ಎಲ್ಲಾ ವಿಚಾರಗಳು! ಚೆಲುವು ಕಾಗದ! ಸೊಗಸಾದ ಮುದ್ರಣ! ಕನ್ನಡದಲ್ಲಿ ಇಂತಹ ಕಾರ್ಯ ಇದೇ ಮೊದಲು. ಮಕ್ಕಳಿಗೆ ಮೈ ಬೆಳೆಯಲು ಆಹಾರ ಹೇಗೆ ಬೇಕೋ, ಅವರ ಮನಸ್ಸು ಬೆಳೆಯಲು 'ಬಾಲ ಪ್ರಪಂಚ' ಹಾಗೆಯೇ ಬೇಕು!

'ಬಾಲ ಪ್ರಪಂಚ'ವು ೩೦ ಸಂಚಿಕೆಗಳಲ್ಲಿ, ೧೦ ಸಂಚಿಕೆಗೆ ಒಂದರಂತೆ ೩ ಸಂಪುಟಗಳಲ್ಲಿ ಪ್ರಕಟವಾಗುವುದು. ಒಂದನೇ ಸಂಪುಟವು ಆಗಲೇ ಸಿದ್ಧವಾಗಿದೆ. ಎರಡನೇ ಸಂಪುಟವು ಸಿದ್ಧವಾಗುತ್ತಿದೆ. ಮೂರನೇ ಸಂಪುಟವು ಇದೇ ಡಿಸೆಂಬರಿನೊಳಗಾಗಿ ಪ್ರಕಟವಾಗುತ್ತದೆ. ಬೈಂಡಾದ ೩ ಸಂಪುಟಗಳಿಗೆ ಈಗಲೇ ಆರ್ಡರ್ ಕೊಟ್ಟರೆ ಬೆಲೆ ೩೬ ರೂ. ಪೂರ್ಣ ಪ್ರಕಟನದ ನಂತರ ೩ ಸಂಪುಟಗಳಿಗೆ ೪೫ ರೂ. ಹೇಗೆ ತರಿಸಿದರೂ ಅಂಚೆ ವೆಚ್ಚ ಬೇರೆ. ಹೆಚ್ಚು ವಿಚಾರಕ್ಕೆ ಈಗಲೇ ಬರೆಯಿರಿ.

---

**ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು**